ಶುಕ್ರವಾರ, ಫೆಬ್ರುವರಿ 10, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾಲೀಮು
ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ 'ಏರೋ ಇಂಡಿಯಾ' ಅಂಗವಾಗಿ ಗುರುವಾರ ತಾಲೀಮು ನಡೆಸಿದ ಸೂರ್ಯಕಿರಣ ವಿಮಾನ



ನಗರದಲ್ಲಿ ಅನಧಿಕೃತ ಜಾಹೀರಾತು ಫಲಕಗಳ ಹಾವಳಿ: ಹೈಕೋರ್ಟ್ ಕಿಡಿ

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ತಡೆಗಟ್ಟಲು ವಿಫಲವಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ಖಡಕ್ ಆದೇಶ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಫಲಕಗಳ ಅಳವಡಿಕೆ ಆಕ್ಷೇಪಿಸಿ ನಗರದ ಸರಸ್ವತಿಪುರಂನ ಮಾಯಿಗೇ ಗೌಡ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ನಗರದಲ್ಲಿ ಅನಧಿಕೃತ ಹೋರ್ಡಿಂಗ್, ಫ್ಲೆಕ್ಸ್, ಪೋಸ್ಟರ್ ಅಳವಡಿಕೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ಕುರಿತಂತೆ ಮಾರ್ಚ್ 6ರೊಳಗೆ ಸಮಗ್ರ ವರದಿ ಸಲ್ಲಿಸಿ’ ಎಂದು ರಾಜ್ಯ ಸರ್ಕಾರ, ಬಿಬಿಎಂಪಿ ಮತ್ತು ಬಿಡಿಎಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 7ಕ್ಕೆ ಮುಂದೂಡಿದೆ.




ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್, ‘ನಗರದ ವಿವಿಧೆಡೆ ಅಳವಡಿಸಿರುವ ಹಲವು ಜಾಹೀರಾತುಗಳ ಫೋಟೊ ಮತ್ತು ಅವುಗಳ ಕುರಿತ ವಿವರಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

‘ಸ್ಥಳೀಯ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಸಾರ್ವಜನಿಕ ಪ್ರದೇಶದಲ್ಲಿ ಅನಧಿಕೃತವಾಗಿ ಜಾಹೀರಾತು ಫಲಕ ಅಳವಡಿಸಿದವರ ವಿರುದ್ಧ ಕ್ರಿಮಿನಲ್ ಕಾನೂನಿನ ಅಡಿಯಲ್ಲಿ ಕ್ರಮ ಜರುಗಿಸಬೇಕು ಎಂದು ಮೂರು ವರ್ಷಗಳ ಹಿಂದೆಯೇ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ. ಆದರೂ, ನಗರಾದ್ಯಂತ ಅನಧಿಕೃತ ಜಾಹೀರಾತುಗಳ ಪ್ರದರ್ಶನ ಹೆಚ್ಚಾಗಿದೆ. ಈ ಬಗ್ಗೆ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸುತ್ತಿಲ್ಲ’ ಎಂದು ಆಕ್ಷೇಪಿಸಿದರು.

ಪ್ರಕರಣದಲ್ಲಿ ಅಮಿಕಸ್ ಕ್ಯೂರಿಯಾಗಿರುವ (ಕೋರ್ಟ್‌ಗೆ ಸಹಕರಿಸುವ ವಕೀಲ) ಹಿರಿಯ ವಕೀಲ ವಿಕ್ರಂ ಹುಯಿಲಗೋಳ, ‘ಅನಧಿಕೃತ ಜಾಹೀರಾತು ಪ್ರದರ್ಶನಗಳು ಮತ್ತು ಫಲಕಗಳ ಅಳವಡಿಕೆ ತಡೆಗಟ್ಟಲು ಹೈಕೋರ್ಟ್ ಈ ಹಿಂದೆ ಹಲವು ಬಾರಿ ನಿರ್ದೇಶನ ನೀಡಿದೆ. ಆದರೆ, ಸರ್ಕಾರ, ಬಿಡಿಎ ಮತ್ತು ಬಿಬಿಎಂಪಿಗಳು ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ವಿಫಲವಾಗಿವೆ. ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಬೈಲಾ ಪ್ರಕಾರ ಅನುಮತಿ ಪಡೆಯಲಾಗಿದೆ ಎಂಬ ಬಗ್ಗೆ ಯಾವುದೇ ಉಲ್ಲೇಖವೇ ಇಲ್ಲ’ ಎಂದು ದೂರಿದರು.

ಆಕ್ಷೇಪಣೆಗಳನ್ನು ಪರಿಗಣಿಸಿದ ನ್ಯಾಯಪೀಠ, ‘ತಪ್ಪಿತಸ್ಥ ಬಿಡಿಎ ಹಾಗೂ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವ ಮೂಲಕ ಕ್ರಮ ಜರುಗಿಸಬೇಕು. ಈ ಪ್ರಕ್ರಿಯೆಯನ್ನು ಮೂರು ವಾರಗಳಲ್ಲಿ ಮಾಡಬೇಕು. ಅಧಿಕಾರಿಗಳು ಕರ್ತವ್ಯ ಲೋಪ ಎಸಗಿರುವುದು ಕಂಡುಬಂದರೆ ಅಂತಹವರ ವಿರುದ್ಧ ಕ್ರಮ ಜರುಗಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು’ ಎಂದು ಆದೇಶಿಸಿತು.



ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ವಿಜಯಕುಮಾರ್ ಎ.ಪಾಟೀಲ (ಎಡದಿಂದ ಎರಡನೆಯವರು) ಮತ್ತು ರಾಜೇಶ್ ರೈ ಕಲ್ಲಂಗಳ (ಎಡದಿಂದ ನಾಲ್ಕನೆಯವರು) ಗುರುವಾರ ರಾಜಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ (ಎಡದಿಂದ ಮೊದಲನೆಯವರು) ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಇದ್ದರು.

ಆದಿಯೋಗಿ ಪ್ರತಿಮೆ ಪ್ರಶ್ನಿಸಿದ ಪಿಐಎಲ್ ವಜಾ

ಬೆಂಗಳೂರು: ಚಿಕ್ಕಬಳ್ಳಾಪುರದ ಅವಲಗುರ್ಕಿಯಲ್ಲಿ ಈಶಾ ಯೋಗ ಕೇಂದ್ರ ವತಿಯಿಂದ ನಿರ್ಮಿಸಿರುವ ಆದಿಯೋಗಿ ಪ್ರತಿಮೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ಚಂಬಳ್ಳಿಯ ಎಸ್.ಕ್ಯಾತಪ್ಪ, ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಈಶಾ ಯೋಗ ಕೇಂದ್ರದ ಪರ ಹಿರಿಯ ವಕೀಲ ಉದಯ್ ಹೊಳ್ಳ, ‘ಅರ್ಜಿದಾರರು ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಕೋರ್ಟ್ ಮುಂದೆ ಬಹಿರಂಗಪಡಿಸಿಲ್ಲ. ವಾಸ್ತವಾಂಶ ಮುಚ್ಚಿಟ್ಟು ಅರ್ಜಿ ಸಲ್ಲಿಸಿದ್ದಾರೆ’ ಎಂದರು.

‘ಇದನ್ನು ಅಲ್ಲಗಳೆದ ಅರ್ಜಿದಾರರ ಪರ ವಕೀಲ ಎಂ.ಶಿವಪ್ರಕಾಶ್, ‘ಜನ ಪರ ಚಳವಳಿಗಳಲ್ಲಿ ಭಾಗಿಯಾಗಿದ್ದ ಕಾರಣಕ್ಕಾಗಿ ಅರ್ಜಿದಾರರ ವಿರುದ್ಧ ದುರುದ್ದೇಶಪೂರಿತವಾಗಿ ಪ್ರಕರಣ ದಾಖಲಿಸಲಾಗಿದೆ’ ಎಂದು ಹೇಳಿದರು.

‘ಇದನ್ನು ಒಪ್ಪದ ನ್ಯಾಯಪೀಠ ಗಾಂಧೀಜಿಯವರ ಸೂಕ್ತಿಯೊಂದನ್ನು ಉದಾಹರಿಸಿ, ‘ಉದ್ದೇಶವಷ್ಟೇ ಅಲ್ಲ, ಮಾರ್ಗವೂ ಶುದ್ಧವಾಗಿರಬೇಕು’ ಎಂದು ಹೇಳಿ, ‘ಅರ್ಜಿದಾರರು ಶುದ್ಧಹಸ್ತದಿಂದ ನ್ಯಾಯಾಲಯದ ಮೆಟ್ಟಿಲೇರಿಲ್ಲ, ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಕೋರ್ಟ್ ಮುಂದೆ ಬಹಿರಂಗಪಡಿಸಿಲ್ಲ’ ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿತು.

ಮೈಸೂರಿನಲ್ಲಿ ಚಿತ್ರನಗರಿ; ಸಿ.ಎಂಗೆ ಮನವಿ


ಬೆಂಗಳೂರು: ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣ ವಿಚಾರವಾಗಿ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಗುರುವಾರ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ.

‘ಚಿತ್ರನಗರಿ ನಿರ್ಮಾಣದಿಂದ ಈ ಪ್ರದೇಶದ ಜನರಿಗೆ ಉದ್ಯೋಗದೊರೆತು ಸುಮಾರು 25 ಸಾವಿರ ಕುಟುಂಬಗಳಿಗೆ ಜೀವನೋಪಾಯವಾಗಲಿದೆ. ಚಿತ್ರನಗರಿ ಕಟ್ಟುವಲ್ಲಿ ಏನೇ ಸಹಕಾರ ಬೇಕಾದರೂ ನಾವು ಸಿದ್ಧ. ಈ ಹಿನ್ನೆಲೆಯಲ್ಲಿ ಚಿತ್ರನಗರಿಯ ಕಾರ್ಯವನ್ನು ಶೀಘ್ರವೇ ಪ್ರಾರಂಭಿಸಬೇಕು’ ಎಂದು ಮನವಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಪತ್ರಕ್ಕೆ ಶಿವರಾಜ್‌ಕುಮಾರ್, ರಾಕ್‌ಲೈನ್ ವೆಂಕಟೇಶ್, ನಾಗತಿಹಳ್ಳಿ ಚಂದ್ರಶೇಖರ್, ಪಿ.ಶೇಷಾದ್ರಿ ಸೇರಿದಂತೆ ಇಪ್ಪತ್ತಕ್ಕೂ ಅಧಿಕ ಗಣ್ಯರು ಸಹಿ ಮಾಡಿದ್ದಾರೆ. ಬಾಲಿವುಡ್‌ನ ಖ್ಯಾತ ನಟರಾದ ಧರ್ಮೇಂದ್ರ, ಹೇಮಾಮಾಲಿನಿ ಅವರೂ ಈ ಕುರಿತು ಸಹಿ ಮಾಡಿ, ಪತ್ರವೊಂದನ್ನು ಕಳುಹಿಸಿದ್ದಾರೆ. ಧರ್ಮೇಂದ್ರ ಅವರಿಗೂ ಮೈಸೂರು ಅಚ್ಚುಮೆಚ್ಚು. ಏಕೆಂದರೆ ಅವರ ವೃತ್ತಿಜೀವನ ಆರಂಭವಾಗಿದ್ದೇ ಮೈಸೂರಿನ ಪ್ರೀಮಿಯರ್ ಸ್ಟುಡಿಯೊದಲ್ಲಿ’ ಎಂದಿದ್ದಾರೆ ರಾಜೇಂದ್ರ ಸಿಂಗ್ ಬಾಬು.

ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಆಶಯ

‘ಶಾಂತವೇರಿ ಗೋಪಾಲಗೌಡರ ರಾಜಕೀಯ ಸಂತಾನ ಹಬ್ಬಲಿ’



ಕಾರ್ಯಕ್ರಮದಲ್ಲಿ ‘ಸಮಾಜವಾದದ ಸಹ್ಯಾದ್ರಿ’ ಪುಸ್ತಕವನ್ನು ಬಿ.ಟಿ.ಲಲಿತಾ ನಾಯಕ್ ಬಿಡುಗಡೆ ಮಾಡಿದರು. ಶಾಂತವೇರಿ ಗೋಪಾಲಗೌಡ ಅವರ ಪುತ್ರ ರಾಮ ಮನೋಹರ ಶಾಂತವೇರಿ, ಎಸ್‌ಜಿ. ಸಿದ್ಧರಾಮಯ್ಯ, ನ್ಯಾ.ಎಚ್.ಎನ್. ನಾಗಮೋಹನದಾಸ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಇದ್ದಾರೆ. –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದಲಾದ ಸನ್ನಿವೇಶದಲ್ಲಿ ಪ್ರಭುತ್ವಗಳೇ ಬೆಲೆಯಿಲ್ಲವಾಗಿದೆ. ಅಧಿಕೃತ ಸ್ವಾತಂತ್ರ್ಯವೂ ಹರಾಜಿಗೆ ಬಿದ್ದಿರುವ ದುರಂತಮಯ ಸನ್ನಿವೇಶದಲ್ಲಿ ನಾವಿದ್ದೇವೆ. ಈ ವೇಳೆ ಶಾಂತವೇರಿ ಗೋಪಾಲಗೌಡ ಅವರ ರಾಜಕೀಯ ಸಂತಾನ ಕುಡಿವರಿದು, ಬಳ್ಳಿಯಾಗಿ ಹಬ್ಬಲಿ’ ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಹೇಳಿದರು.

ಜನ ಪ್ರಕಾಶನ ನಗರದಲ್ಲಿ ಗುರುವಾರ ಹಮ್ಮಿಕೊಂಡ ಸಮಾರಂಭದಲ್ಲಿ ಶಾಂತವೇರಿ ಗೋಪಾಲಗೌಡ ಅವರ ಕುರಿತಾದ ‘ಸಮಾಜವಾದದ ಸಹ್ಯಾದ್ರಿ’ ಕೃತಿ ಬಿಡುಗಡೆಯಾಯಿತು. ‘ಇವತ್ತಿನ ರಾಜಕಾರಣವು ಮಾತಿನಿಂದ ಕೃತ್ಯದವರೆಗೂ ಹಾಳಾಗಿದೆ. ಈ ವೇಳೆ ರಾಜಕಾರಣದಲ್ಲಿ ಗೋಪಾಲಗೌಡ ಅಂತಹವರು ಯಾರೂ ಸಿಗುವುದಿಲ್ಲ. ಮೈಸೂರು ಮಹಾರಾಜರಿಗೆ ಸರ್ಕಾರ ಮಾಸಾಶನ ನೀಡುವುದನ್ನು ಅವರು ವಿರೋಧಿಸಿದ್ದರು’ ಎಂದು ಎಸ್.ಜಿ. ಸಿದ್ಧರಾಮಯ್ಯ ತಿಳಿಸಿದರು.

‘ಶಾಂತವೇರಿ ಗೋಪಾಲಗೌಡ ಅವರು ಕನ್ನಡ ಭಾಷೆಯ ಬಗ್ಗೆ ಅಪಾರ ಅಭಿಮಾನ ಹೊಂದಿದ್ದರು. ರಾಜ್ಯಪಾಲರು ಕನ್ನಡದಲ್ಲಿಯೇ ಮಾತನಾಡಬೇಕು ಎಂದು ವಿಧಾನಸಭೆಯಲ್ಲಿ ಪಟ್ಟುಹಿಡಿದು ಕುಳಿತಿದ್ದರು. ಅದಕ್ಕೆ ಒಪ್ಪದಿದ್ದಾಗ ರಾಜ್ಯಪಾಲರ ಭಾಷಣದ ಪ್ರತಿಯನ್ನೇ ಸದನದಲ್ಲಿ ಹರಿದು ಹಾಕಿ, ತಾತ್ವಿಕ ಸಿಟ್ಟನ್ನು ವ್ಯಕ್ತಪಡಿಸಿದ್ದರು. ಅಂತಹ ಮೌಲ್ಯಯುತ ರಾಜಕೀಯ ಮುತ್ಸದಿಗಳು ಈಗ ನಾಡಿಗೆ ಬೇಕಾಗಿದೆ’ ಎಂದು ಹೇಳಿದರು.

ಲೇಖಕಿ ಬಿ.ಟಿ. ಲಲಿತಾ ನಾಯಕ್, ‘ಶಾಂತವೇರಿ ಗೋಪಾಲಗೌಡ ಅವರಂತಹವರು 20ರಿಂದ 25 ಮಂದಿ ಶಾಸಕರಾಗಿ ಗೆದ್ದರೆ, ಕರ್ನಾಟಕ ರಾಜ್ಯವನ್ನು ಪ್ರಾಮಾಣಿಕ ರಾಜ್ಯವನ್ನಾಗಿ ಮಾಡಬಹುದು’ ಎಂದು ತಿಳಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು ಶಾಂತವೇರಿ ಗೋಪಾಲಗೌಡ ಅವರ ಹೋರಾಟದ ಜೀವನವನ್ನು ಶ್ಲಾಘಿಸಿದರು.

ರಿಯಾಯಿತಿ ನಾಳೆ ಕೊನೆ: ದಿನ ವಿಸ್ತರಣೆಗೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಶೇ 50ರಷ್ಟು ರಿಯಾಯಿತಿಯಡಿ ದಂಡ ಪಾವತಿಸಲು ನಾಳೆ (ಫೆ. 11) ಕೊನೆ ದಿನವಾಗಿದೆ. ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದರಿಂದ, ರಿಯಾಯಿತಿ ಸೌಲಭ್ಯದ ದಿನಾಂಕವನ್ನು ವಿಸ್ತರಣೆ ಮಾಡುವಂತೆ ಸಂಚಾರ ಪೊಲೀಸರು ಸರ್ಕಾರದ ಹಿರಿಯ ಅಧಿಕಾರಿಗಳನ್ನು ಕೋರಿದ್ದಾರೆ.

ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ ಒಪ್ಪಿದ್ದ ರಾಜ್ಯ ಸರ್ಕಾರ, ಸಂಚಾರ ನಿಯಮ ಉಲ್ಲಂಘನೆಯ ಇ-ಚಲನ್ ಪ್ರಕರಣಗಳ ದಂಡ ಪಾವತಿ ಮೇಲೆ ರಿಯಾಯಿತಿ ನೀಡಿ ಫೆ. 2ರಂದು ಆದೇಶ ಹೊರಡಿಸಿತ್ತು. ಫೆ. 3ರಿಂದ ದಂಡ ಸಂಗ್ರಹ ಪ್ರಕ್ರಿಯೆ ಆರಂಭವಾಗಿದೆ.

ಏಳನೇ ದಿನವಾದ ಗುರುವಾರದವರೆಗೆ ₹ 65.93 ಕೋಟಿ ದಂಡ ಸಂಗ್ರಹವಾಗಿದ್ದು, 23.73 ಲಕ್ಷ ಪ್ರಕರಣಗಳು ಇತ್ಯರ್ಥವಾಗಿವೆ.

ಇನ್ಫೆಂಟ್ರಿ ರಸ್ತೆಯಲ್ಲಿರುವ ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ), ನಗರದ ಹಲವು ಸಂಚಾರ ಪೊಲೀಸ್ ಠಾಣೆಗಳು ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ಜನರು ದಂಡ ತುಂಬುತ್ತಿದ್ದಾರೆ.

‘ದಂಡದ ಮೇಲಿನ ರಿಯಾಯಿತಿಗೆ ಉತ್ತಮ ಸ್ಪಂದನ ವ್ಯಕ್ತವಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮಾಹಿತಿ ನೀಡಲಾಗಿದೆ. ರಿಯಾಯಿತಿ ಸೌಲಭ್ಯ ದಿನಾಂಕವನ್ನು ವಿಸ್ತರಣೆ ಮಾಡಿದರೆ ಅನುಕೂಲವೆಂದು ತಿಳಿಸಲಾಗಿದೆ’ ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ‘ಪ್ರಜಾವಾಣಿ’ಗೆ ತಿಳಿಸಿದರು.

ನಕಲಿ ನೋಂದಣಿ ಫಲಕದ ವಿರುದ್ಧ ಪ್ರಕರಣ: ವಾಹನಗಳಿಗೆ ನಕಲಿ ನೋಂದಣಿ ಸಂಖ್ಯೆ ಫಲಕ ಅಳವಡಿಸುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಸಂಚಾರ ಪೊಲೀಸರು ಮುಂದಾಗಿದ್ದಾರೆ.

‘ನಕಲಿ ನೋಂದಣಿ ಫಲಕದಿಂದ ಅಮಾಯಕರಿಗೆ ದಂಡ ಬೀಳುತ್ತಿದೆ. ಯಾರಾದರೂ ನಕಲಿ ಫಲಕ ಹಾಕಿಕೊಂಡಿದ್ದು ಗೊತ್ತಾದರೆ, ಅವರ ವಿರುದ್ಧ ಪ್ರಕರಣ ದಾಖಲಿಸುವಂತೆ ಇನ್‌ಸ್ಪೆಕ್ಟರ್‌ಗಳಿಗೆ ವಿಶೇಷ ಕಮಿಷನರ್ ಸೂಚನೆ ನೀಡಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ರಸ್ತೆಗುಂಡಿ ಭರ್ತಿ: ಸಮಗ್ರ ವರದಿ ಸಲ್ಲಿಕೆಗೆ ಗಡುವು

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಿರುವ ಕಾಮಗಾರಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಯಾದೃಚ್ಛಿಕ ಮಾದರಿಗಳನ್ನು (ರ್‍ಯಾಂಡಮ್ ಸ್ಯಾಂಪಲ್) ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಫಲಿತಾಂಶ ನಿರೀಕ್ಷಿಸಲಾಗುತ್ತಿದ್ದು, ಈ ಕುರಿತ ವರದಿ ಸಲ್ಲಿಕೆಗೆ ಇನ್ನಷ್ಟು ಕಾಲಾವಕಾಶ ಬೇಕು’ ಎಂಬ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಮನವಿಯನ್ನು ಹೈಕೋರ್ಟ್ ಮನ್ನಿಸಿದೆ.

ರಸ್ತೆ ಗುಂಡಿಗಳ ಭರ್ತಿಗೆ ಸಂಬಂಧಿಸಿದಂತೆ ಕೋರಮಂಗಲದ ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಎನ್‌ಎಚ್‌ಎಐ ಪರ ಹಾಜರಾಗಿದ್ದ ಡೆಪ್ಯೂಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್, ‘ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ ಈಗಾಗಲೇ ನಾಲ್ಕು ವಲಯಗಳಾದ ಬೊಮ್ಮನಹಳ್ಳಿ, ಯಲಹಂಕ, ಪಶ್ಚಿಮ ವಲಯ ಮತ್ತು ದಕ್ಷಿಣ ವಲಯಗಳಲ್ಲಿ ಮುಚ್ಚಲಾದ ರಸ್ತೆ ಗುಂಡಿ ಕಾಮಗಾರಿ ಮಾದರಿಯನ್ನು ತಪಾಸಣೆಗಾಗಿ ಉಪವಿಭಾಗೀಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಇನ್ನಷ್ಟೇ ಬರಬೇಕಿದ್ದು, ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಹತ್ತು ವಾರಗಳ ಕಾಲಾವಕಾಶ ನೀಡಬೇಕು’ ಎಂದು ಮನವಿ ಮಾಡಿದರು.

ಏತನ್ಮಧ್ಯೆ ಬಿಬಿಎಂಪಿ ಪರ ವಕೀಲ ವಿ. ಶ್ರೀನಿಧಿ, ‘ಬೆಂಗಳೂರಿನಲ್ಲಿ ರಸ್ತೆಗಳ ವಿಸ್ತರಣೆ ಕಾರ್ಯ ಅತ್ಯಂತ ವೇಗವಾಗಿ ನಡೆಯುತ್ತಿದ್ದು, ಇದನ್ನೂ ಎನ್‌ಎಚ್‌ಎಐ ಪರಿಶೀಲಿಸಬಹುದು’ ಎಂಬ ಸಲಹೆ ನೀಡಿದರು.

ಸಲಹೆ ಆಲಿಸಿ ಮತ್ತು ಪ್ರಮಾಣಪತ್ರ ದಾಖಲಿಸಿಕೊಂಡ ನ್ಯಾಯಪೀಠವು ಸಮಗ್ರ ವರದಿ ಸಲ್ಲಿಕೆಗೆ ಎಂಟು ವಾರಗಳ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು.

ಶಿವಮೂರ್ತಿ ಶರಣರ ಅರ್ಜಿ ವಿಚಾರಣೆ 13ಕ್ಕೆ

ಬೆಂಗಳೂರು: ‘ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೊ), ಅತ್ಯಾಚಾರ, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಅಧಿಕಾರ ಚಲಾವಣೆಗೆ ವಿಧಿಸಲಾಗಿರುವ ನಿರ್ಬಂಧ ಪ್ರಶ್ನಿಸಿದ ಅರ್ಜಿಯನ್ನು ಹೈಕೋರ್ಟ್ ಇದೇ 13ರಂದು ವಿಚಾರಣೆ ನಡೆಸಲಿದೆ.

ವರ್ಗಾವಣೆ ಗೊಂಡಿರುವ ಅರ್ಜಿಯನ್ನು ಶುಕ್ರವಾರದಂದು (ಫೆ.10) ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಶರಣರ ಪರ ವಕೀಲರು ಗುರುವಾರ (ಫೆ.9) ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದರು.

ಶುಕ್ರವಾರ, ಫೆಬ್ರುವರಿ 10, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 41 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ವಾಸ್ತು ಪ್ರಕಾರ' ಚಂದನವನಕ್ಕೆ ಕಾಲಿಟ್ಟ ನಟಿ ಐಶಾನಿ ಶೆಟ್ಟಿ 'ಹೊಂದಿಸಿ ಬರೆಯಿರಿ' ಎನ್ನುತ್ತಿದ್ದಾರೆ...




ಆಳ-ಅಗಲ
ಪ್ರತಿಸ್ಪರ್ಧಿ ದೇಶಗಳ ಗುಟ್ಟು ತಿಳಿಯಲು ಬಲೂನು

ನಾರ್ವೆ ವೆಲ್ತ್ ಫಂಡ್ 'ಅದಾನಿ'ಯಿಂದ ಹೊರಕ್ಕೆ 10

ಜಲ್‌ಜೀವನ್ ಮಿಷನ್: ₹1,031 ಕೋಟಿ ಅನುದಾನ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,806 ▲	17,893 ▲	₹59,300 (ಬೆಂಗಳೂರು)	₹69,400 (ಬೆಂಗಳೂರು)	82.51 ▲



ಭದ್ರಾ ಮೇಲ್ದಂಡೆ: ಪರಿಸರ ಅನುಮೋದನೆ ಗೊಂದಲ

ನವದೆಹಲಿ: ಭದ್ರಾ ಮೇಲ್ದಂಡೆ ಯೋಜನೆಗೆ ಪರಿಸರ ಅನುಮೋದನೆ ಪಡೆಯಲು ಅಗತ್ಯವಾಗಿರುವ ಕಾರ್ಯ ಸೂಚಿಗೆ (ಟಿಒಆರ್) ಒಪ್ಪಿಗೆ ನೀಡಬೇಕು ಎಂದು ಕೋರಿ ಕರ್ನಾಟಕ ಸರ್ಕಾರವು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಸಲ್ಲಿಸಿರುವ ಪ್ರಸ್ತಾವವನ್ನು ಪರಿವೇಷ್ ಪೋರ್ಟಲ್‌ನಿಂದ ತೆಗೆದು ಹಾಕಲಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ. 5

ಕಾಂಗ್ರೆಸ್ ಮೇಲೆ ಮತ್ತೊಮ್ಮೆ ಹರಿಹಾಯ್ದ ಪ್ರಧಾನಿ ಮೋದಿ

'ನೆಹರೂ ಉಪನಾಮ ಏಕೆ ಬಳಸಲ್ಲ?'



ನವದೆಹಲಿ (ಪಿಟಿಐ): 'ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರ ಲಾಲ್ ನೆಹರೂ ಅವರು ಶ್ರೇಷ್ಠ ಆಡಳಿತಗಾರರಾಗಿದ್ದೇ ಆದಲ್ಲಿ ಅವರ ವಂಶಸ್ಥರು ತಮ್ಮ ಹೆಸರಿನ ಜೊತೆ ಅವರ ಉಪನಾಮವನ್ನು ಏಕೆ ಬಳಸುತ್ತಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಶ್ನಿಸಿದ್ದಾರೆ. ಆ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಕುಟುಕಿದ್ದಾರೆ.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ರಾಜ್ಯಸಭೆಯಲ್ಲಿ ಗುರುವಾರ ಉತ್ತರ ನೀಡಿದ ಅವರು, ಕಾಂಗ್ರೆಸ್ ಹಾಗೂ ಇತರೆ ವಿರೋಧ ಪಕ್ಷಗಳ ಮೇಲೆ ಮತ್ತೊಮ್ಮೆ ಹರಿಹಾಯ್ದರು.

ಸ್ವಾತಂತ್ರ್ಯಾನಂತರದಲ್ಲಿ ಈ ದೇಶ ಕಟ್ಟುವುದಕ್ಕಾಗಿ ನೆಹರೂ ಅವರು ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಆದರೆ ಬಿಜೆಪಿಯವರು ಅದನ್ನು ಕಡೆಗಣಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಸಂಸದರು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೋದಿ 'ನೆಹರೂ ಅಷ್ಟೊಂದು ಶ್ರೇಷ್ಠ ಆಡಳಿತಗಾರರಾಗಿದ್ದೇ ಆದಲ್ಲಿ ಅವರ ವಂಶಸ್ಥರು ಏಕೆ ಅವರ ಉಪನಾಮ ಬಳಸುತ್ತಿಲ್ಲ' ಎಂದು ತಿರುಗೇಟು ನೀಡಿದರು.

ಇದು ವಿರೋಧ ಪಕ್ಷದ ಸಂಸದರನ್ನು ಕೆರಳಿಸಿತು. ಭಿತ್ತಿಪತ್ರ ಹಿಡಿದಿದ್ದ ಕೆಲವರು ಸಭಾಪತಿ ಪೀಠದ ಮುಂಭಾಗಕ್ಕೆ ತೆರಳಿ ಪ್ರಧಾನಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು.

ಗದ್ದಲದ ನಡುವೆಯೂ ಮಾತು ಮುಂದುವರಿಸಿದ ಮೋದಿ, 'ನೀವು ಎಷ್ಟು ಕೆಸರು ಎರಚುತ್ತೀರೋ (ಆರೋಪ) ಅಷ್ಟು ದೊಡ್ಡದಾಗಿ ಕಮಲ ಅರಳುತ್ತದೆ' ಎಂದು ವಿರೋಧ ಪಕ್ಷಗಳ ಸಂಸದರನ್ನು ಛೇಡಿಸಿದರು.

ಎದೆ ತಟ್ಟಿಕೊಳ್ಳುತ್ತಲೇ, 'ನಾನು ಈ ದೇಶಕ್ಕಾಗಿ ಬದುಕುತ್ತಿದ್ದೇನೆ. ಈ ದೇಶಕ್ಕೆ ಏನನ್ನಾದರೂ ಮಾಡಬೇಕೆಂದು ಬಯಸುತ್ತಿದ್ದೇನೆ. ಇದನ್ನು ವಿರೋಧ ಪಕ್ಷಗಳು ಸಹಿಸಿಕೊಳ್ಳುತ್ತಿಲ್ಲ. ತಮ್ಮ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ರಾಜಕೀಯ ನಾಟಕಗಳನ್ನು ಆಡುತ್ತಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡರು.

11ನೇ ಪುಟ ನೋಡಿ

> ಜನರ ಕಲ್ಯಾಣಕ್ಕಾಗಿ ರೂಪಿಸಿದ ಯೋಜನೆಗಳು ಪ್ರತಿಯೊಬ್ಬರಿಗೂ ತಲುಪಬೇಕು. ಇದರಿಂದ ಭ್ರಷ್ಟಾಚಾರ ಮತ್ತು ತಾರತಮ್ಯ ತೊಡೆದುಹಾಕಲು ಸಾಧ್ಯ
> **ನರೇಂದ್ರ ಮೋದಿ,** ಪ್ರಧಾನಿ

ಧನಕರ್ ವಿರುದ್ಧ ಕಾಂಗ್ರೆಸ್ ಕಿಡಿ



ನವದೆಹಲಿ (ಪಿಟಿಐ): ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ವೇಳೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾಡಿದ್ದ ಭಾಷಣದ ಕೆಲ ಭಾಗಗಳನ್ನು ಕಡತದಿಂದ ತೆಗೆದುಹಾಕಿರುವ ಸಭಾಪತಿ ಜಗದೀಪ್ ಧನಕರ್ ಅವರ ನಿಲುವನ್ನು ಕಾಂಗ್ರೆಸ್ ಸದಸ್ಯರು ಖಂಡಿಸಿದ್ದಾರೆ.

ಗುರುವಾರ ರಾಜ್ಯಸಭೆ ಕಲಾಪ ಆರಂಭವಾಗುತ್ತಿದ್ದಂತೆ ಎದ್ದುನಿಂತ ಕಾಂಗ್ರೆಸ್ ಸದಸ್ಯರು ಸಭಾಪತಿಯವರ ನಿರ್ಧಾರವನ್ನು ಪ್ರಶ್ನಿಸಿದರು. ಖರ್ಗೆ ಅವರು ಅಸಂಸದೀಯ ಪದ ಪ್ರಯೋಗಿಸಿಲ್ಲ. ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ ಹಾಗೂ ಮನಮೋಹನ್ ಸಿಂಗ್ ಅವರು ಈ ಹಿಂದೆ ಆಡಿದ್ದ ಮಾತುಗಳನ್ನೇ ಖರ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ ಎಂದು ಪ್ರತಿಪಾದಿಸಿದರು. ವಿರೋಧ ಪಕ್ಷದವರ ಈ ವಾದವನ್ನು ಧನಕರ್ ತಳ್ಳಿಹಾಕಿದರು.

'ನಾನು ಅಸಂಸದೀಯ ಪದ ಅಥವಾ ಭಾಷೆ ಪ್ರಯೋಗಿಸಿಲ್ಲ. ಹೀಗಿದ್ದರೂ ಕೆಲ ಪದಗಳನ್ನು ಕೈಬಿಟ್ಟಿದ್ದೀರಿ. ನೀವು ಅವುಗಳನ್ನು ತಪ್ಪಾಗಿ ಅರ್ಥೈಸಿದ್ದೀರಿ ಎಂದು ನಾನು ಹೇಳುವುದಿಲ್ಲ. ನಿಮಗೆ ಏನಾದರೂ ಅನುಮಾನಗಳಿದ್ದರೆ ನನ್ನ ಬಳಿ ಸ್ಪಷ್ಟನೆ ಕೇಳಬಹುದಿತ್ತು. ಅದನ್ನು ಬಿಟ್ಟು ಭಾಷಣದಲ್ಲಿನ ಒಟ್ಟು ಆರು ಭಾಗಗಳನ್ನು ಕಡತದಿಂದ ತೆಗೆದುಹಾಕಿದ್ದೀರಿ' ಎಂದು ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

'ವಾಜಪೇಯಿ ಅವರು ಆಗಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ಕುರಿತು ಮಾತನಾಡುವಾಗ ಸದನದಲ್ಲಿ ಬಳಸಿದ್ದ ಪದಗಳನ್ನೇ ನಾನೂ ಬಳಸಿದ್ದೆ. ವಾಜಪೇಯಿ ಅವರ ಪದಗಳು ಈಗಲೂ ಕಡತದಲ್ಲಿವೆ. ಬೇಕಿದ್ದರೆ ಪರಿಶೀಲಿಸಿ' ಎಂದೂ ಹೇಳಿದರು.

11ನೇ ಪುಟ ನೋಡಿ



ರಥೋತ್ಸವ ದಾವಣಗೆರೆ ಜಿಲ್ಲೆಯ ಹರಿಹರದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಆಯೋಜಿಸಿರುವ ಎರಡು ದಿನಗಳ ಮಹರ್ಷಿ ವಾಲ್ಮೀಕಿ ಜಾತ್ರೆ ಅಂಗವಾಗಿ ಗುರುವಾರ ನಡೆದ ರಥೋತ್ಸವದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಸಕಾಲಕ್ಕೆ ಸಿಗದ ಆಂಬುಲೆನ್ಸ್ ಸೇವೆ: ಹಸುಳೆ ಸಾವು

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ತಡವಾಗಿ ಬಂದ ಆಂಬುಲೆನ್ಸ್‌ನಲ್ಲಿ ಆಕ್ಸಿಜನ್ ಸೌಕರ್ಯವಿರಲಿಲ್ಲ. ಜೊತೆಗೆ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದೆ ಸಕಾಲಕ್ಕೆ ಚಿಕಿತ್ಸೆ ಸಿಗದ ಕಾರಣ ಬುಂಡನಮಾಳ ಗ್ರಾಮದ ಶೀಲಾ–ಮಹದೇವಸ್ವಾಮಿ ದಂಪತಿಯ ನಾಲ್ಕು ದಿನದ ಹಸುಳೆ ಬುಧವಾರ ಸಂಜೆ ಮೃತಪಟ್ಟಿತು.

ಹಸುಳೆಯ ಆರೋಗ್ಯದಲ್ಲಿ ವ್ಯತ್ಯಾಸವಾದ್ದರಿಂದ ದಂಪತಿಯು ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. 'ಸ್ಥಳಕ್ಕೆ ಬರಲು ಒಂದೂವರೆ ಗಂಟೆಯಾಗುತ್ತದೆ' ಎಂದು ಸಿಬ್ಬಂದಿ ಹೇಳಿದ್ದರಿಂದ ಬೈಕ್‌ನಲ್ಲೇ ಸಮೀಪದ ಎನ್.ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದಾಗ ವೈದ್ಯರು ಇರಲಿಲ್ಲ.

'ಎಚ್.ಡಿ.ಕೋಟೆಗೆ ಬೈಕ್‌ನಲ್ಲೇ ಹೋಗುವಾಗ ಮಾರ್ಗ ಮಧ್ಯೆ ಆಂಬುಲೆನ್ಸ್ ಬಂದರೂ ಅದರಲ್ಲಿ ಆಮ್ಲಜನಕ ಸಿಲಿಂಡರ್ ಇರಲಿಲ್ಲ. ಪ್ರಶ್ನಿಸಿದರೆ ಸ್ಪಂದಿಸಲಿಲ್ಲ. ಸೇಂಟ್ ಮೇರಿಸ್ ಆಸ್ಪತ್ರೆಗೆ ಹೋದಾಗ ಹಸುಳೆ ಮೃತಪಟ್ಟಿದೆಯೆಂದು ವೈದ್ಯರು ತಿಳಿಸಿದರು' ಎಂದು ದಂಪತಿ ಆರೋಪಿಸಿದ್ದಾರೆ.

ವಾಪಸ್ ಬರುವಾಗಲೂ ಸಿಬ್ಬಂದಿ ಸರಿಯಾಗಿ ವರ್ತಿಸದ ಕಾರಣ ಬಿದರಹಳ್ಳಿ ಬಳಿ ಆಂಬುಲೆನ್ಸ್ ಇಳಿದ ದಂಪತಿ ಹಸುಳೆಯನ್ನು ಬೈಕ್‌ನಲ್ಲೇ ಮನೆಗೆ ಕರೆದೊಯ್ದ ಹಾಗೂ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

3ನೇ ಪುಟ ನೋಡಿ

ವಾಹನ ದಟ್ಟಣೆ ನಿಯಂತ್ರಣಕ್ಕೆ 12 ಕಾರಿಡಾರ್: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾಹನ ದಟ್ಟಣೆಯನ್ನು ಸಂಪೂರ್ಣವಾಗಿ ನಿಯಂತ್ರಿಸಲು 12 ಕಾರಿಡಾರ್ ರಸ್ತೆಗಳನ್ನು ನಿರ್ಮಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯಲ್ಲಿ ಸುರಂಜನ್‌ದಾಸ್ ಜಂಕ್ಷನ್ ಕೆಳಸೇತುವೆಯನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಗರದಲ್ಲಿ ಹೊಸದಾಗಿ ಐದು ಸಂಚಾರ ಪೊಲೀಸ್ ಠಾಣೆ ಸ್ಥಾಪಿಸಿ, ಒಬ್ಬರು ಡಿಸಿಪಿ, ಸಿಬ್ಬಂದಿ, ವಾಹನ ಹಾಗೂ ಎಲ್ಲಾ ಸಲಕರಣೆಗಳನ್ನು ಸರ್ಕಾರ ಒದಗಿಸುತ್ತಿದೆ. ವಾಹನ ದಟ್ಟಣೆಯನ್ನು ಸಂಪೂರ್ಣ ನಿಯಂತ್ರಿಸಲಾಗುತ್ತದೆ ಎಂದರು.

ಸುರಂಜನ್‌ದಾಸ್ ಜಂಕ್ಷನ್ ಕೆಳಸೇತುವೆ ಮೂಲಕ ವೈಟ್‌ಫೀಲ್ಡ್‌ನಿಂದ ಎಂ.ಜಿ. ರಸ್ತೆಯವರೆಗೆ ಸಂಚಾರ ಸುಗಮವಾಗಲಿದೆ. ನಗರ ಅತಿ ವೇಗದಲ್ಲಿ ಬೆಳೆಯುತ್ತಿದ್ದು, ಪ್ರತಿನಿತ್ಯ 5 ಸಾವಿರ ವಾಹನಗಳು ಹೊಸದಾಗಿ ರಸ್ತೆಗಿಳಿಯುತ್ತವೆ. ಬೆಂಗಳೂರಿನಲ್ಲಿ ದಿನವೂ 10 ಲಕ್ಷ ಜನ ಬಂದುಹೋಗುತ್ತಾರೆ. ಸಂಚಾರ ಸುಗಮಗೊಳಿಸಲು ಅಲ್ಪಾವಧಿ ಹಾಗೂ ದೀರ್ಘಾವಧಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

3ನೇ ಪುಟ ನೋಡಿ

15ನೇ ವಿಧಾನಸಭೆಯ ಕೊನೆಯ ಬಜೆಟ್ ಮಂಡನೆಗೆ ದಿನಗಣನೆ

ಅಧಿವೇಶನ: ಪೂರ್ಣ ಕಲಾಪ ಅನುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಪರ ಅಲೆ ಎಬ್ಬಿಸಲು ವಿವಿಧ ಕಡೆಗಳಲ್ಲಿ ಯಾತ್ರೆ ನಡೆಸುತ್ತಿರುವ ನಾಯಕರು, ಮತ್ತೊಮ್ಮೆ ಗೆಲ್ಲಲೇಬೇಕೆಂಬ ಹಟಕ್ಕೆ ಬಿದ್ದಿರುವ ಎಲ್ಲ ಪಕ್ಷದ ಶಾಸಕರು ಕ್ಷೇತ್ರದಲ್ಲೇ ಬೆವರು ಹರಿಸುತ್ತಿರುವುದರಿಂದಾಗಿ 15 ನೇ ವಿಧಾನಸಭೆಯ ಕೊನೆಯ ಅಧಿವೇಶನದ ಕಲಾಪ ನಿಗದಿಯಾದಷ್ಟು ದಿನ ನಡೆಯುವುದೇ ಅನುಮಾನ.

ಈ ಅಧಿವೇಶನ ಮುಗಿದ ತಿಂಗಳಲ್ಲಿ ವಿಧಾನಸಭೆ ಚುನಾವಣೆ ಘೋಷಣೆಯಾಗಲಿದೆ. ಮುಂದೆಯೂ ತಮ್ಮ ಸ್ಥಾನ ಭದ್ರ ಪಡಿಸಿಕೊಳ್ಳುವ ಸಲುವಾಗಿ ಶಾಸಕರು ಹರಸಾಹಸ ಪಡುತ್ತಿದ್ದು, ಕ್ಷೇತ್ರದಲ್ಲೇ ಮೊಕ್ಕಾಂ ಹೂಡಿದ್ದಾರೆ. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಲಿರುವ ಈ ಅವಧಿಯ ಕೊನೆಯ ಬಜೆಟ್‌ನಲ್ಲಿ ತಮ್ಮ ಕ್ಷೇತ್ರಗಳಿಗೆ ಯೋಜನೆಗಳು ಘೋಷಣೆಯಾದರೂ ಅನುದಾನ ದಕ್ಕುವುದಿಲ್ಲ. ಒಂದುವೇಳೆ ಹಣ ಬಿಡುಗಡೆಯಾದರೂ ಖರ್ಚು ಮಾಡಲು ನೀತಿ ಸಂಹಿತೆ ಅಡ್ಡಿ ಬರಲಿದೆ. ಹೀಗಾಗಿ, ಕಲಾಪದ ಮೇಲೆ ಬಹುತೇಕ ಶಾಸಕರಿಗೆ ಆಸಕ್ತಿಯೇ ಇಲ್ಲ ಎಂಬ ವಾತಾವರಣ ನಿರ್ಮಾಣವಾಗಿದೆ.

ಸರ್ಕಾರದ ವೈಫಲ್ಯವನ್ನು ಜನರ ಮುಂದೆ ತೆರೆದಿಡಲು ವಿರೋಧ ಪಕ್ಷದವರಿಗೆ ಇದು ಕೊನೆಯ ಅವಕಾಶ. ಆದರೆ, ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರ ಭಾಷಣ, ಅದರ ಮೇಲೆ ಚರ್ಚೆ ಹಾಗೂ ವಂದನಾ ನಿರ್ಣಯಕ್ಕೆ ಮೊದಲ ವಾರ ಸೀಮಿತವಾಗುತ್ತದೆ. ಫೆ.17ರಂದು ಬೊಮ್ಮಾಯಿ ಅವರು ಬಜೆಟ್ ಮಂಡಿಸಲಿದ್ದು, 20ರಿಂದ 24ವರೆಗೆ ಬಜೆಟ್ ಮೇಲಿನ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಸರ್ಕಾರದ 'ಬಂಡವಾಳ' ಬಿಚ್ಚಿಡಲು ಸಮಯಾವಕಾಶ ಸಿಗದು ಎಂಬ ಕಾರಣಕ್ಕೆ ವಿರೋಧ ಪಕ್ಷಗಳ ನಾಯಕರು ಹೆಚ್ಚಿನ ಉತ್ಸುಕತೆ ತೋರಿಸುತ್ತಿಲ್ಲ ಎಂದು ಆಯಾ ಪಕ್ಷದ ಮೂಲಗಳು ಹೇಳಿವೆ.

11ನೇ ಪುಟ ನೋಡಿ

'ಗಾಂಭೀರ್ಯ ಕಡಿಮೆಯಾಗದಿರಲಿ'



'ವಿಧಾನಮಂಡಲ ಅಧಿವೇಶನಕ್ಕೆ ಎಲ್ಲ ಸದಸ್ಯರು ಹಾಜರಾಗಬೇಕು. ಚುನಾವಣೆಯ ಕಾರಣಕ್ಕೆ ಅಧಿವೇಶನದ ಗಾಂಭೀರ್ಯ ಕಡಿಮೆ ಆಗಬಾರದು' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ ಮತ್ತು ಆರು ಖಾಸಗಿ ವಿಶ್ವವಿದ್ಯಾನಿಲಯಗಳ ಮಸೂದೆಗಳನ್ನು ಮಂಡಿಸಲಾಗುವುದು' ಎಂದರು.

'ಅಧಿವೇಶನದಲ್ಲಿ ಪ್ರಶ್ನೋತ್ತರ ಕಲಾಪ, ಶೂನ್ಯ ವೇಳೆ ಸೇರಿದಂತೆ ಎಲ್ಲ ಕಾರ್ಯಕಲಾಪಗಳೂ ನಡೆಯಲಿವೆ. ಅಧಿವೇಶನದ ವೇಳಾಪಟ್ಟಿ ಪ್ರಕಟವಾದ ಬಳಿಕವೂ ರಾಜಕೀಯ ಪಕ್ಷಗಳು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದನ್ನು ಗಮನಿಸಿದರೆ, ಕಲಾಪಕ್ಕೆ ಸದಸ್ಯರ ಹಾಜರಾತಿ ಕಡಿಮೆಯಾಗುವ ಲಕ್ಷಣಗಳು ಗೋಚರಿಸುತ್ತಿವೆ' ಎಂದ ಅವರು, 'ಕಲಾಪವನ್ನು ಯಾರೂ ನಿರ್ಲಕ್ಷ್ಯ ಮಾಡಬಾರದು. ಜವಾಬ್ದಾರಿಯಿಂದ ಭಾಗವಹಿಸಬೇಕು' ಎಂದರು.

ಮುಖ್ಯಾಂಶಗಳು

- ಇಂದು ಬೆಳಿಗ್ಗೆ 11ಕ್ಕೆ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರ ಭಾಷಣ
- ಫೆ.17: 2023–24ನೇ ಸಾಲಿನ ಬಜೆಟ್ ಮಂಡಿಸಲಿರುವ ಬಸವರಾಜ ಬೊಮ್ಮಾಯಿ

ಟರ್ಕಿ, ಸಿರಿಯಾ: ಭೂಕಂಪಕ್ಕೆ 20,450 ಸಾವು

ಟರ್ಕಿ (ಎಪಿ): ದಶಕದ ಅತ್ಯಂತ ಭೀಕರ ಭೂಕಂಪದಿಂದ ಟರ್ಕಿ ಮತ್ತು ಸಿರಿಯಾದಲ್ಲಿ ದಿನ ಕಳೆದಂತೆ ಸಾವಿನ ಸಂಖ್ಯೆ ಏರುತ್ತಲೇ ಇದೆ. ಗುರುವಾರ ಮೃತರ ಸಂಖ್ಯೆ 20,450ಕ್ಕೆ ತಲುಪಿದೆ.

ಕಾಣೆಯಾದವರಿಗೆ ಶೋಧ ನಡೆಯುತ್ತಿದೆ. ನಾಲ್ಕು ದಿನಗಳ ಹಿಂದೆ ರಿಕ್ಟರ್ ಮಾಪಕದಲ್ಲಿ 7.8 ತೀವ್ರತೆಯ ಭೂಕಂಪ ಸಂಭವಿಸಿತ್ತು. ಇದರಿಂದ ಸಾವಿರಾರು ಮನೆಗಳು, ಕಟ್ಟಡಗಳು ಧರೆಗುರುಳಿವೆ. ಭೂಕಂಪದಿಂದ ನಲುಗಿದ ನಗರಗಳಲ್ಲಿ ಅವಶೇಷಗಳ ತೆರವು, ಬದುಕುಳಿದವರಿಗಾಗಿ ರಕ್ಷಣಾ ಕಾರ್ಯ ಮುಂದುವರಿದಿದೆ.

ಟರ್ಕಿಗೆ ಪ್ರವಾಸ ಹೋಗಿದ್ದ ಭಾರತದ ಉತ್ತರಾಖಂಡದ ನಿವಾಸಿ ವಿಜಯ್‌ಕುಮಾರ್ ಗೌಡ್ ಎಂಬುವರು ಕಾಣೆಯಾಗಿದ್ದಾರೆ. ಅವರು ಉಳಿದಿದ್ದ ಹೋಟೆಲ್, ಭೂಕಂಪದಿಂದ ಕುಸಿದಿದೆ. ಅವರ ಮೊಬೈಲ್ ರಿಂಗಣಿಸುತ್ತಿದೆ. ಆದರೆ, ಕರೆ ಸ್ವೀಕರಿಸುತ್ತಿಲ್ಲವೆಂದು ಅವರ ಕುಟುಂಬದವರು ಹೇಳಿದ್ದಾರೆ.

ಇನ್ನೊಂದು ಸುದ್ದಿ 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಂದ ಬೇಡಿಕೆ ಈಡೇರಿಕೆ ಭರವಸೆ

ನೌಕರರ ಸಂಘ: ಪ್ರತಿಭಟನೆ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಮುಖ್ಯ ಆಯುಕ್ತರು ಭರವಸೆ ನೀಡಿದ ಹಿನ್ನೆಲೆಯಲ್ಲಿ, ಸದಸ್ಯರು ಸಾಮೂಹಿಕ ರಜೆ ಹಾಕಿ ಆರಂಭಿಸಿದ್ದ ಪ್ರತಿಭಟನೆಯನ್ನು ವಾಪಸ್ ಪಡೆದರು.

ಕೇಂದ್ರ ಕಚೇರಿಯಲ್ಲಿ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಗುರುವಾರ ಬೆಳಿಗ್ಗೆ ಬಂದ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನಾಲ್ಕು ಬೇಡಿಕೆಗಳನ್ನು ಈಡೇರಿಸಿದರು. ಇನ್ನೂ ನಾಲ್ಕು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು. ನಂತರ ಪ್ರತಿಭಟನೆಯನ್ನು ವಾಪಸ್ ಪಡೆಯಲಾಯಿತು ಎಂದು ಸಂಘದ ಅಧ್ಯಕ್ಷ ಎ. ಅಮೃತರಾಜ್ ಹೇಳಿದರು.



ಆರು ತಿಂಗಳಿಗೂ ಹೆಚ್ಚು ಅಮಾನತಿನಲ್ಲಿದ್ದ ಸಹ ಕಂದಾಯ ಅಧಿಕಾರಿ, ಕಂದಾಯ ಪರಿವೀಕ್ಷಕರ ಅಮಾನತು ತೆರವುಗೊಳಿಸಿ, ಕೆಲಸಕ್ಕೆ ತೆಗೆದುಕೊಳ್ಳಲು ಮುಖ್ಯ ಆಯುಕ್ತರು ಆದೇಶಿಸಿದ್ದಾರೆ. ಮಹದೇವಪುರ ವ್ಯಾಪ್ತಿಯಲ್ಲಿ ಎರಡು ವರ್ಷದ ಹಿಂದೆ ಮಗು ರೇಚಲ್ ತ್ರಿಷಾ ತಲೆ ಮೇಲೆ ಕೊಂಬೆ ಬಿದ್ದು ಗಾಯಗೊಂಡು, ಚಿಕಿತ್ಸೆ ನಂತರವೂ ಮೃತಪಟ್ಟಿತ್ತು. ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ₹1.2 ಕೋಟಿ ವೆಚ್ಚವಾಗಿತ್ತು. ಇದನ್ನು ಪಾವತಿಸದ ಕಾರಣ ಮಣಿಪಾಲ್ ಆಸ್ಪತ್ರೆಯಲ್ಲಿ ಬಿಬಿಎಂಪಿ ಸಿಬ್ಬಂದಿ ಮತ್ತು ಅವರ ಕುಟುಂಬದವರಿಗೆ ಚಿಕಿತ್ಸೆ ನಿರಾಕರಿಸಲಾಗಿತ್ತು. ಮುಖ್ಯ ಆಯುಕ್ತರು ರಿಯಾಯಿತಿ ದರದಲ್ಲಿ ಆಸ್ಪತ್ರೆಗೆ ₹65 ಲಕ್ಷ ನೀಡಲು ಒಪ್ಪಿಗೆ ಸೂಚಿಸಿದ್ದು, ಸಂಘದ ವತಿಯಿಂದಲೂ ₹10 ಲಕ್ಷವನ್ನು ಮಗುವಿನ ಚಿಕಿತ್ಸೆ ವೆಚ್ಚವಾಗಿ ನೀಡಲಾಯಿತು. ಹೀಗಾಗಿ, ಇನ್ನು ಮುಂದೆ ಮಣಿಪಾಲ್ ಆಸ್ಪತ್ರೆಯಲ್ಲಿ ಸಿಬ್ಬಂದಿ ವೈದ್ಯಕೀಯ ಸೌಲಭ್ಯ ಪಡೆಯಬಹುದು ಎಂದರು.

ಮುಖ್ಯಾಂಶಗಳು

- ಸಹ ಕಂದಾಯ ಅಧಿಕಾರಿ, ಕಂದಾಯ ಪರಿವೀಕ್ಷಕರ ಅಮಾನತು ತೆರವು
- ಮಣಿಪಾಲ್ ಆಸ್ಪತ್ರೆಯಲ್ಲಿ ವೈದ್ಯಕೀಯ ಸೌಲಭ್ಯ

2007ರಲ್ಲಿ ಸಮಾನ ವೇತನ ಆಧಾರದಲ್ಲಿ 318 ನೌಕರರನ್ನು ವಿಲೀನಗೊಳಿಸಿದ್ದು, ಅವರಿಗೆ ಕ್ರಮ ಆದೇಶ ಹೊರಡಿಸಲಾಗಿದೆ. ಬಿಬಿಎಂಪಿಯಲ್ಲಿ ಎಲ್ಲ ವೃಂದದ ಮುಂಬಡ್ತಿಗೆ ಆದೇಶ ನೀಡಲಾಗಿದೆ ಎಂದು ವಿವರಿಸಿದರು.

ಇನ್ನು, ಎರವಲು ಸೇವೆಯವರನ್ನು ವಿಧಾನಸಭೆ ಚುನಾವಣೆ ಮುಗಿದ ಮೇಲೆ ಮಾತ್ರ ಇಲಾಖೆಗೆ ಕಳುಹಿಸಲಾಗುತ್ತದೆ. ನಾಡಪ್ರಭು ಕೆಂಪೇಗೌಡ ಮತ್ತು ಬಿ.ಆರ್. ಅಂಬೇಡ್ಕರ್ ದಿನಾಚರಣೆಯನ್ನು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಆಚರಿಸಲಾಗುತ್ತದೆ. ಮಾರ್ಷಲ್ ಸೇವಾವಧಿ ಅಂತ್ಯಗೊಳಿಸಲು ಕಾನೂನು ರೀತಿ ಪರಿಶೀಲಿಸಿ ಕ್ರಮ ಜರುಗಿಸಲಾಗುತ್ತದೆ. ವೃಂದ ಮತ್ತು ನೇಮಕ ನಿಯಮಾವಳಿಯಲ್ಲಿ 10 ಸಾವಿರಕ್ಕೂ ಹೆಚ್ಚು ತಿರಸ್ಕೃತ ಹುದ್ದೆಗಳನ್ನು ನಗರಾಭಿವೃದ್ಧಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರೊಂದಿಗೆ ಚರ್ಚಿಸಿ ಮಂಜೂರು ಮಾಡುವುದಾಗಿ ಮುಖ್ಯ ಆಯುಕ್ತರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಎನ್‌ಎಲ್‌ಎಸ್‌ಐಯು ಮೀಸಲು: ಇಂದು ಸುಪ್ರೀಂನಲ್ಲಿ ವಿಚಾರಣೆ

ಬೆಂಗಳೂರು: ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ (ಎನ್‌ಎಲ್‌ಎಸ್‌ಐಯು) ವಿದ್ಯಾರ್ಥಿಗಳ ಪ್ರವೇಶದಲ್ಲಿ ಕನ್ನಡಿಗ ವಿದ್ಯಾರ್ಥಿಗಳಿಗೆ ಶೇ 25 ರಷ್ಟು ಸೀಟುಗಳನ್ನು (ಸ್ಥಳೀಯ ಕೋಟಾ) ಮೀಸಲು ನೀಡುವ ಸರ್ಕಾರದ ನಿಯಮ ಉಲ್ಲಂಘಿಸಿರುವ ವಿಷಯ ಸುಪ್ರೀಂಕೋರ್ಟ್‌ನಲ್ಲಿ ಶುಕ್ರವಾರ ವಿಚಾರಣೆಗೆ ಬರಲಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು. ವಿಧಾನಸೌಧದಲ್ಲಿ ಗುರುವಾರ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ, 'ಇತರ ರಾಜ್ಯಗಳಲ್ಲೂ ಆಯಾ ರಾಜ್ಯಗಳ ವಿದ್ಯಾರ್ಥಿಗಳಿಗೆ (ಸ್ಥಳೀಯ ಕೋಟಾ) ಮೀಸಲು ನೀಡುತ್ತಿದ್ದಾರೆ. ಎನ್‌ಎಲ್‌ಎಸ್‌ಐಯು ಭೂಮಿ ಮತ್ತು ಅನುದಾನವನ್ನು ನೀಡಿದ್ದೇವೆ. ಆದ್ದರಿಂದ ಕನ್ನಡಿಗ ವಿದ್ಯಾರ್ಥಿಗಳಿಗೂ ಮೀಸಲಾತಿ ನೀಡಲೇಬೇಕು' ಎಂದರು.


ಸುದ್ದಿ 2 ನಿಮಿಷ

ಬ್ಯಾಟರಾಯನಪುರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಾಳೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರ ಘಟಕವು ಇದೇ ಶನಿವಾರ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಂಡಿದೆ.

ಹೆಬ್ಬಾಳ ಬಳಿಯ ಕೆಂಪಾಪುರದ ಕಾಫಿಬೋರ್ಡ್ ಬಡಾವಣೆಯಲ್ಲಿರುವ ಕನ್ನಡ ಭವನದಲ್ಲಿ ಸಮ್ಮೇಳನ ನಡೆಯಲಿದೆ. ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಸಮ್ಮೇಳನಾಧ್ಯಕ್ಷತೆ ವಹಿಸಲಿದ್ದಾರೆ. ಬೆಳಿಗ್ಗೆ 7.30ಕ್ಕೆ ಧ್ವಜಾರೋಹಣ ನಡೆಯಲಿದ್ದು, 8 ಗಂಟೆಗೆ ಶಾಸಕ ಕೃಷ್ಣ ಬೈರೇಗೌಡ ಅವರು ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಘಟಕದ ಅಧ್ಯಕ್ಷ ರೇಣುಕ ಹೆಗ್ಗಡೆ ತಿಳಿಸಿದ್ದಾರೆ.

'ಸಮ್ಮೇಳನದಲ್ಲಿ ಮೂರು ಗೋಷ್ಠಿಗಳು ನಡೆಯಲಿವೆ. ಮಧ್ಯಾಹ್ನ 1 ಗಂಟೆಗೆ ನಿವೃತ್ತ ಪ್ರಾಂಶುಪಾಲ ಆರ್. ಲಕ್ಷ್ಮೀನಾರಾಯಣ ಅವರ ಅಧ್ಯಕ್ಷತೆಯಲ್ಲಿ ಕುವೆಂಪು ವಿಚಾರ ಗೋಷ್ಠಿ ನಡೆಯಲಿದೆ. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್. ಪುಷ್ಪಾ ಅವರ ಅಧ್ಯಕ್ಷತೆಯಲ್ಲಿ ಮಹಿಳಾ ಕವಿಗೋಷ್ಠಿ ಹಾಗೂ ವೈದ್ಯ ಸಾಹಿತಿ ಡಾ.ನಾ. ಸೋಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಚಿಂತನಾ ಗೋಷ್ಠಿ ನಡೆಯಲಿದೆ. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭಕ್ಕೆ ಸಂಸದ ಡಿ.ವಿ. ಸದಾನಂದಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದ್ದಾರೆ.



'ಸಂಜೆ 7 ಗಂಟೆಗೆ ಸಂವೇದನಾ ಕ್ರಿಯೇಷನ್ಸ್ ಮತ್ತು ತಂಡದಿಂದ 'ಶ್ರೀ ಕೃಷ್ಣ ಸಂಧಾನ' ನಗೆ ನಾಟಕ ಪ್ರದರ್ಶನ ಇರಲಿದೆ' ಎಂದು ತಿಳಿಸಿದ್ದಾರೆ.

ಕನ್ನಡ ಧ್ವನಿ ಆಧಾರಿತ ಸೇವೆ: ಬ್ಯಾಂಕಿಂಗ್ ಆ್ಯಪ್‌ಗೆ ಚಾಲನೆ

ಬೆಂಗಳೂರು: ಕನ್ನಡ ಸೇರಿದಂತೆ ಎಂಟು ಭಾಷೆಗಳಲ್ಲಿ ಧ್ವನಿ ಆಧಾರಿತ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಮೊಬೈಲ್ ಸ್ಮಾರ್ಟ್‌ಫೋನ್ ಆ್ಯಪ್ 'ಹಲೋ ಉಜ್ಜೀವನ್'ಅನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಬುಧವಾರ ಬಳಕೆಗೆ ಮುಕ್ತವಾಗಿಸಿದೆ.

ಸಾಲದ ಕಂತುಗಳ ಪಾವತಿ, ಎಫ್.ಡಿ ಹಾಗೂ ಆರ್.ಡಿ. ಖಾತೆ ಆರಂಭಿಸುವುದು, ಹಣ ವರ್ಗಾವಣೆ, ಖಾತೆಯಲ್ಲಿನ ಬಾಕಿ ಮೊತ್ತವನ್ನು ಪರೀಕ್ಷಿಸುವ ಕೆಲಸಗಳನ್ನು ಈ ಆ್ಯಪ್ ಮೂಲಕ ಪ್ರಾದೇಶಿಕ ಭಾಷೆ ಬಳಸಿ ಮಾಡಬಹುದು. ಈ ಆ್ಯಪ್‌ಅನ್ನು ಪ್ರಾಯೋಗಿಕ ಬಳಕೆಗೆ ಮುಕ್ತವಾಗಿಸಿದ್ದ ನಂತರದಲ್ಲಿ ಮೂರು ತಿಂಗಳಲ್ಲಿ 1,200 ಎಫ್.ಡಿ. ಹಾಗೂ ಆರ್.ಡಿ. ಖಾತೆಗಳನ್ನು ತೆರೆಯಲಾಗಿದೆ. 75 ಸಾವಿರಕ್ಕೂ ಹೆಚ್ಚು ಜನ ಇದನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ ಎಂದು ಬ್ಯಾಂಕ್ ಹೇಳಿದೆ.

ಈ ಆ್ಯಪ್ ಮೂಲಕ ಮುಂದಿನ ಮೂರು ವರ್ಷಗಳಲ್ಲಿ ₹ 1,000 ಕೋಟಿಗಿಂತ ಹೆಚ್ಚಿನ ಮೊತ್ತದ ಠೇವಣಿ ಆಗಬೇಕು ಎಂಬ ನಿರೀಕ್ಷೆಯನ್ನು ಬ್ಯಾಂಕ್ ಹೊಂದಿದೆ. 'ಈ ಆ್ಯಪ್ ಪ್ರಾದೇಶಿಕ ಭಾಷೆಗಳಲ್ಲಿ ಇರುವ ವ್ಯತ್ಯಾಸಗಳನ್ನು ಗುರುತಿಸುತ್ತದೆ. ಕನ್ನಡದ ವಿಚಾರವಾಗಿ ಹೇಳುವುದಾದರೆ, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಭಾಷೆಯ ಬಳಕೆಯಲ್ಲಿ ಇರುವ ವ್ಯತ್ಯಾಸಗಳನ್ನು ಸಹ ಇದು ಗುರುತಿಸಿ, ಬಳಕೆದಾರರ ಜೊತೆ ಸಂವಾದಿಸುತ್ತದೆ' ಎಂದು ಬ್ಯಾಂಕ್ ಅಧಿಕಾರಿಯೊಬ್ಬರು ತಿಳಿಸಿದರು.

ಈ ಆ್ಯಪ್ ಬಳಸುವಾಗ ಪಾಸ್‌ವರ್ಡ್‌ಗಳನ್ನು ಕೀಪ್ಯಾಡ್ ಮೂಲಕ ಭರ್ತಿ ಮಾಡಬೇಕು. ಮೌಖಿಕವಾಗಿ ಪಾಸ್‌ವರ್ಡ್ ಹೇಳಲು ಅವಕಾಶವಿಲ್ಲ.

ಸ್ಯಾಂಕಿ ರಸ್ತೆ ಮೇಲ್ಸೇತುವೆ: ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಿಸುವ ಕುರಿತ ದಾಖಲೆಗಳನ್ನು ಬೆಂಗಳೂರು ಮೆಟ್ರೊಪಾಲಿಟನ್ ಭೂಸಾರಿಗೆ ಪ್ರಾಧಿಕಾರಕ್ಕೆ (ಬಿಎಂಎಲ್‌ಟಿಎ) ಬಿಬಿಎಂಪಿ ಗುರುವಾರ ಸಲ್ಲಿಸಿದೆ.

ಪ್ರಾಧಿಕಾರ ದಾಖಲೆ ಕೇಳಿದ 15 ದಿನದ ನಂತರ ಬಿಬಿಎಂಪಿ ವರದಿ ಸಲ್ಲಿಸಿದೆ. ಇದರೊಂದಿಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಪ್ರತಿ ಹಾಗೂ ಸ್ಯಾಂಕಿ ರಸ್ತೆಯನ್ನು ವಿಸ್ತರಿಸುವ ಯೋಜನೆಗೆ ಹೈಕೋರ್ಟ್ ಸಮ್ಮತಿಸಿರುವ ಆದೇಶದ ಪ್ರತಿಯನ್ನು ಸಲ್ಲಿಸಲಾಗಿದೆ.

ಬಿಬಿಎಂಪಿಯಿಂದ ಪ್ರಾಧಿಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಬಾಷ್ಯಂ ವೃತ್ತದಲ್ಲಿ 2017ರ ಡಿಸೆಂಬರ್‌ನಲ್ಲಿ ಗ್ರೇಡ್ ಸೆಪರೇಟ್ ಅನ್ನು ₹25 ಕೋಟಿ ವೆಚ್ಚದಲ್ಲಿ ನಿರ್ಮಿಸುವ ಯೋಜನೆಯ ವಿವರಣೆ ಇದೆ. ಇದಾದ ಮೇಲೆ, 2022ರ ಮೇನಲ್ಲಿ ಹೆಚ್ಚುವರಿಯಾಗಿ ₹35 ಕೋಟಿಗೆ ಅನುಮೋದನೆ ನೀಡಿ, ಮೇಲ್ಸೇತುವೆಯೊಂದಿಗೆ ಸ್ಯಾಂಕಿ ರಸ್ತೆಯನ್ನು ಬಾಷ್ಯಂ ವೃತ್ತದಿಂದ ಮಲ್ಲೇಶ್ವರ 18ನೇ ಅಡ್ಡರಸ್ತೆವರೆಗೆ ವಿಸ್ತರಣೆ ಮಾಡುವ ಕಾಮಗಾರಿ ಕೈಗೊಳ್ಳಲಾಗುತ್ತದೆ ಎಂದು ತಿಳಿಸಲಾಗಿದೆ.

ರಾಜ್ಯ ಪೂರ್ವ-ಟೆಂಡರ್ ಪರಿಶೀಲನಾ ಸಮಿತಿ ಹಾಗೂ ತಾಂತ್ರಿಕ ಸಲಹಾ ಸಮಿತಿಯಿಂದ ಯೋಜನೆಗೆ ಅನುಮತಿ ಪಡೆದುಕೊಂಡ ಮೇಲೆಯೇ ಟೆಂಡರ್ ಕರೆಯಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಟ್ರ್ಯಾಕ್ಟರ್ ಸಂಚಾರ ನಿರ್ಬಂಧ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟ್ರ್ಯಾಕ್ಟರ್ ಸಂಚಾರ ನಿರ್ಬಂಧ ಆದೇಶವನ್ನು ಹಿಂಪಡೆಯಬೇಕು' ಎಂದು ಒತ್ತಾಯಿಸಿ ಟ್ರ್ಯಾಕ್ಟರ್ ಮಾಲೀಕರು ಹಾಗೂ ಕಾರ್ಮಿಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಮ್ಮ ಕರ್ನಾಟಕ ಸೇನೆ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಟ್ರ್ಯಾಕ್ಟರ್ ಮೂಲಕ ಪ್ರತಿಭಟನೆ ಸ್ಥಳಕ್ಕೆ ಬಂದಿದ್ದ ಹಲವರು, ಘೋಷಣಾ ಫಲಕ ಪ್ರದರ್ಶಿಸಿದರು.

'ದಟ್ಟಣೆ ನೆಪದಲ್ಲಿ ಟ್ರ್ಯಾಕ್ಟರ್‌ಗಳ ಸಂಚಾರದ ಮೇಲೆ ಸಂಚಾರ ಪೊಲೀಸರು ನಿರ್ಬಂಧ ವಿಧಿಸಿದ್ದಾರೆ. ಟ್ರ್ಯಾಕ್ಟರ್ ನಂಬಿಕೊಂಡು ಜೀವನ ಸಾಗಿಸುವ ಮಾಲೀಕರು, ಚಾಲಕರು ಹಾಗೂ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

'ಟ್ರ್ಯಾಕ್ಟರ್ ನಿರ್ಬಂಧಿಸಿದ ಮಾತ್ರಕ್ಕೆ ದಟ್ಟಣೆ ಕಡಿಮೆಯಾಗುವುದಿಲ್ಲ. ಶ್ರೀಮಂತರು ಹೆಚ್ಚು ಕಾರುಗಳನ್ನು ಖರೀದಿಸುತ್ತಿದ್ದಾರೆ. ಒಂದು ಕಾರಿನಲ್ಲಿ ಒಬ್ಬರೇ ಸಂಚರಿಸುತ್ತಿದ್ದಾರೆ. ಇದು ದಟ್ಟಣೆಗೆ ಕಾರಣವಾಗಿದೆ. ಉಳ್ಳವರ ಮೇಲೆ ಕ್ರಮ ಕೈಗೊಳ್ಳದ ಪೊಲೀಸರು, ಬಡವರ ಹೊಟ್ಟೆ ಮೇಲೆ ಬರೆ ಎಳೆಯುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕೃಷಿ ಉತ್ಪನ್ನ, ಕಟ್ಟಡ ನಿರ್ಮಾಣ ಸಾಮಗ್ರಿ ಸಾಗಣೆ ಟ್ರ್ಯಾಕ್ಟರ್‌ಗಳ ಸಂಚಾರಕ್ಕೆ ಮುಕ್ತ ಅವಕಾಶ ನೀಡಬೇಕು. ಮೆಟ್ರೊ, ಬಸ್ ಬಳಕೆಗೆ ಉತ್ತೇಜನ ನೀಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಚಿವರಿಗೆ ಮನವಿ ಸಲ್ಲಿಕೆ: ಸಚಿವರಾದ ಆರಗ ಜ್ಞಾನೇಂದ್ರ, ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರಿಗೆ ಪ್ರತಿಭಟನಕಾರರು ಮನವಿ ಸಲ್ಲಿಸಿದರು.

'ಬೆಂಗಳೂರು ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ.ಸಲೀಂ ಅವರೊಂದಿಗೆ ಚರ್ಚಿಸಿ, ಟ್ರ್ಯಾಕ್ಟರ್ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗುವುದು' ಎಂದು ಸಚಿವರು ಭರವಸೆ ನೀಡಿದರು.



ಟ್ರ್ಯಾಕ್ಟರ್ ಮಾಲೀಕರು, ಚಾಲಕರು ಹಾಗೂ ಕಾರ್ಮಿಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

'ದಟ್ಟಣೆ ನಿಯಂತ್ರಣಕ್ಕೆ ನಿರ್ಬಂಧ ಅನಿವಾರ್ಯ'

'ಮನೆಯಿಂದ ಕಚೇರಿಗೆ ಹಾಗೂ ಕಚೇರಿಯಿಂದ ಮನೆಗೆ ಹೋಗುವವರು ರಸ್ತೆಯಲ್ಲಿ ದಟ್ಟಣೆಯಲ್ಲಿ ಸಿಲುಕಬಾರದು. ಹೀಗಾಗಿ, ದಟ್ಟಣೆ ಅವಧಿಯಲ್ಲಿ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ' ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಹೇಳಿದರು.

ಟ್ರ್ಯಾಕ್ಟರ್ ನಿರ್ಬಂಧ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಬೆಳಿಗ್ಗೆ 8ರಿಂದ 11 ಗಂಟೆವರೆಗೆ ಹಾಗೂ ಸಂಜೆ 4ರಿಂದ 8 ಗಂಟೆವರೆಗೆ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಟ್ರ್ಯಾಕ್ಟರ್ ಸಹ ಒಳಗೊಂಡಿದೆ' ಎಂದರು.

ನಗರದಲ್ಲಿ ಇಂದು

'ಸೋಮ' ಕಲಾ ಉತ್ಸವ: ಕರಕುಶಲ ಪ್ರದರ್ಶನ, ಭರತನಾಟ್ಯ ಪ್ರದರ್ಶನ: ಸತ್ಯನಾರಾಯಣ ರಾಜು, ಜಾನಪದ ಗಾಯನ: ವಾಸು ದೀಕ್ಷಿತ್, ಆಯೋಜನೆ ಮತ್ತು ಸ್ಥಳ: ಶಂಕರ ಫೌಂಡೇಶನ್, ಕನಕಪುರ ರಸ್ತೆ, ಬೆಳಿಗ್ಗೆ 10

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ನಿರ್ಮಲಾನಂದನಾಥ ಸ್ವಾಮೀಜಿ, ಸಿ.ಎನ್. ಬಾಲಕೃಷ್ಣ, ರೇಣುಕಾಪ್ರಸಾದ್ ಕೆ.ವಿ., ಡಿ. ಹನುಮಂತಯ್ಯ, ಟಿ. ಕೋನಪ್ಪ ರೆಡ್ಡಿ, ರಾಘವೇಂದ್ರ, ಆರ್. ಪ್ರಕಾಶ್, ಆಯೋಜನೆ: ವಿ.ಎಸ್. ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ, ವಿ.ವಿ. ಪುರ, ಬೆಳಿಗ್ಗೆ 10

ಪ್ರವಚನ ವಾಹಿನಿ ಕಾರ್ಯಕ್ರಮ: 'ವೃದ್ಧಾಪ್ಯದ ಸಮಸ್ಯೆಗಳು' ಕುರಿತು ಉಪನ್ಯಾಸ: ಡಾ.ಸಿ.ಆರ್. ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಶಾಸ್ತ್ರೀಯ ಸಂಗೀತ: ರಚನಾ ಆರ್. ಮಾಳಿಗೆ, ಆಯೋಜನೆ: ಪ್ರತಿ ಶುಕ್ರವಾರದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ, ಸ್ಥಳ: ಭಾರತೀಯ ವಿದ್ಯಾಭವನ, ಸಂಜೆ 6.30

ಹರಿನಾಮ ಸಂಕೀರ್ತನೆ: ಅನುಷಾ ಎಸ್. ರಾಘವೇಂದ್ರ, ಕೀ-ಬೋರ್ಡ್: ಬಿ.ಆರ್. ಪ್ರಕಾಶ್, ತಬಲಾ: ಶ್ರೀನಿವಾಸ್ ಕಾಖಂಡಕಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀಮನ್ಮಾಧ್ವ ಸಂಘ, ಮಾರುತಿನಗರ, ಬಸವೇಶ್ವರನಗರ, ಸಂಜೆ 6.30



ಅನುಷಾ ಎಸ್. ರಾಘವೇಂದ್ರ

'ಫೈನಲ್ ಸೆಲ್ಯೂಷನ್' (ಕೊನೆಯ ಉತ್ತರ) ನಾಟಕ ಪ್ರದರ್ಶನ: ನಿರ್ದೇಶನ: ರಂಗನಾಥ ಶಿವಮೊಗ್ಗ, ನಾಟಕಕಾರ: ಬಿ. ಸುರೇಶ್, ಆಯೋಜನೆ: ಸ್ಟೇಜ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಮೂರು ದಿನಗಳ ನಾಟಕೋತ್ಸವ: ಅತಿಥಿಗಳು: ಎಚ್.ಎಲ್. ನಾಗರಾಜ, ಜಿ.ವೈ. ಪದ್ಮ ನಾಗರಾಜ್, ರಘುಪತಿ ಡಿ.ಎ., 'ಚಂದ್ರಹಾಸ' ನಾಟಕ ಪ್ರದರ್ಶನ: ವೆಂಟಕರಣಯ್ಯ ಡಿ., ರಚನೆ: ಕುವೆಂಪು, ಸ್ಥಳ: ರಾಘವೇಂದ್ರ ಪ್ರೌಢಶಾಲೆಯ ಸಭಾಂಗಣ, ಕಾಮಾಕ್ಷಿಪಾಳ್ಯ, ಸಂಜೆ 6.30

ರಕ್ತದ ಕ್ಯಾನ್ಸರ್: ಮನ್‌ದೀಪ್‌ಗೆ ಮರುಜನ್ಮ ನೀಡಿದ ಮನ್‌ದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಪಂಜಾಬ್‌ನ ರೈತ ಮನ್‌ದೀಪ್‌ಗೆ ಕಸಿ ಮಾಡಲು ಕುಟುಂಬ ವರ್ಗದವರ ಆಕರ ಕೋಶಗಳು ಹೊಂದಾಣಿಕೆಯಾಗದೇ ಇದ್ದಾಗ, ಆಪದ್ಬಾಂಧವರಾಗಿ ಬಂದವರು ಸಾಫ್ಟ್‌ವೇರ್ ಎಂಜಿನಿಯರ್ ಮನ್‌ದೀಪ್.

ಇಬ್ಬರ ಆಕರ ಕೋಶಗಳು ಹೊಂದಾಣಿಕೆಯಾಗುವುದಷ್ಟೇ ಅಲ್ಲ, ಹೆಸರು, ರಾಜ್ಯ ಒಂದೇ ಆಗಿದ್ದು ವಿಶೇಷ. ರೈತ ಮನ್‌ದೀಪ್‌ಗೆ 2009ರಲ್ಲೇ ಕ್ಯಾನ್ಸರ್ ಪತ್ತೆಯಾಗಿತ್ತು. ಹ್ಯೂಮನ್ ಲ್ಯುಕೊಸೈಟ್ ಆಂಟಿಜೆನ್ (ಎಚ್‌ಎಲ್‌ಎ) ಹೊಂದಿಕೆಯಾಗುವ ಆಕರ ಕೋಶ ಕುಟುಂಬದವರಲ್ಲಿ ಲಭ್ಯವಾಗಿರಲಿಲ್ಲ. ಇಂತಹ ಸಮಯದಲ್ಲಿ ಅವರಿಗೆ ದಾನಿಗಳನ್ನು ಹುಡುಕಲು ನೆರವಾಗಿದ್ದು ಡಿಕೆಎಂಎಸ್ ಬಿಎಂಎಸ್‌ಟಿ ಫೌಂಡೇಷನ್.

ದಾನಿ ಮನ್‌ದೀಪ್ ಪತ್ನಿಯೂ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಕುಟುಂಬದ ಸದಸ್ಯರ ನೋವು ಅರಿತಿದ್ದ ಅವರು, ಡಿಕೆಎಂಎಸ್ ಬಿಎಂಎಸ್‌ಟಿ ಫೌಂಡೇಷನ್ ಆಯೋಜಿಸಿದ್ದ ನೋಂದಣಿ ಅಭಿಯಾನದಲ್ಲಿ ಹೆಸರು ನೋಂದಾಯಿಸಿಕೊಂಡಿದ್ದರು. ರಾಜೀವ್‌ಗಾಂಧಿ ಕ್ಯಾನ್ಸರ್ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ದಿನೇಶ್ ಭುರಾನಿ ಅವರು 2020ರಲ್ಲಿ ಆಕರ ಕೋಶ ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದರು.



ಕ್ಯಾನ್ಸರ್ ವಿರುದ್ಧ ಹೋರಾಡಿ ಗುಣಮುಖರಾದ ಮನ್‌ದೀಪ್ (ಎಡಭಾಗ), ದಾನಿ ಮನ್‌ದೀಪ್

ಮೂರು ವರ್ಷಗಳ ನಂತರ ಭೇಟಿ: ದಾನಿ ಹಾಗೂ ರೋಗಿ ಇಬ್ಬರೂ ಮೂರು ವರ್ಷಗಳ ನಂತರ ಬೆಂಗಳೂರಿನಲ್ಲಿ ಗುರುವಾರ ಮೊದಲ ಭೇಟಿ ಮಾಡಿದರು. ಜೀವ ಉಳಿಸಿದ ಮನ್‌ದೀಪ್‌ಗೆ ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖರಾದ ಮನ್‌ದೀಪ್ ಕೃತಜ್ಞತೆ ಸಲ್ಲಿಸಿದರು.

‘ಪತ್ನಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಇದರಿಂದ ಕ್ಯಾನ್ಸರ್ ರೋಗಿಗಳ ನೋವು ಬೇಗ ಅರ್ಥವಾಯಿತು. ರೋಗಿಗಳಿಗೆ ಸಹಾಯ ಮಾಡಲು ಅಂದೇ ನಿರ್ಧರಿಸಿದ್ದೆ. ಯಾವುದೇ ಸಮಸ್ಯೆ ಇಲ್ಲದೆ ಎಲ್ಲವೂ ಸುಸೂತ್ರವಾಗಿ ನೆರವೇರಿದೆ. ದಾನವೂ ಸಾರ್ಥಕವಾಗಿದೆ’ ಎಂದು ದಾನಿ ಮನ್‌ದೀಪ್ ಪ್ರತಿಕ್ರಿಯಿಸಿದರು.

‘ಕ್ಯಾನ್ಸರ್ ವಿರುದ್ಧ ಒಂದು ದಶಕ ಹೋರಾಟ ನಡೆಸಿದ್ದೆ. ಬದುಕುಳಿಯುವ ಆಸೆಯೂ ಕಮರಿತ್ತು. ನನ್ನದೇ ಹೆಸರಿನ ವ್ಯಕ್ತಿ ಮರುಜನ್ಮ ನೀಡಿದ್ದಾರೆ. ಅವರಿಗೆ ಋಣಿಯಾಗಿರುವೆ’ ಎಂದು ರೈತ ಮನ್‌ದೀಪ್ ಕಂಬನಿ ತುಂಬಿಕೊಂಡರು.

ಡಿಕೆಎಂಎಸ್ ಬಿಎಂಎಸ್‌ಟಿ ಫೌಂಡೇಷನ್‌ನ ಪ್ಯಾಟ್ರಿಕ್ ಪಾಲ್, ಗ್ಲೋಬಲ್ ಬಿಜಿಎಸ್ ಆಸ್ಪತ್ರೆಯ ಡಾ.ಗೋವಿಂದ್ ಎರಿಯಾಟ್ ನಾಯರ್ ಉಪಸ್ಥಿತರಿದ್ದರು.

ಬಿಬಿಎಂಪಿ ಎಆರ್‌ಒ ಅಮಾನತು

ಬೆಂಗಳೂರು: ಬಿಬಿಎಂಪಿ ಕೆ.ಆರ್. ಪುರ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಎಚ್.ಬಿ. ಹರೀಶ್ ಅವರನ್ನು ಅಮಾನತುಗೊಳಿಸಲಾಗಿದೆ.

ಆಸ್ತಿಯೊಂದಕ್ಕೆ ‘ಬಿ’ ಖಾತಾ ಮಾಡಿಕೊಡಲು ಹರೀಶ್ ತಾವೇ ನೇಮಿಸಿಕೊಂಡಿದ್ದ ಗೋವಿಂದರಾಜ್ ಮೂಲಕ ಮಾಲೀಕರಿಗೆ ₹5 ಸಾವಿರ ಹಣದ ಬೇಡಿಕೆ ಇರಿಸಿದ್ದರು. ಎಸಿಬಿ ನಡೆಸಿದ ದಾಳಿಯ ಸಂದರ್ಭದಲ್ಲಿ ಗೋವಿಂದರಾಜ್ ಮಾಲೀಕರಿಂದ ಎರಡೂವರೆ ಸಾವಿರ ರೂಪಾಯಿ ಪಡೆಯುವಾಗ ಸಿಕ್ಕಿಬಿದ್ದಿದ್ದರು. ಆ ದಿನದಿಂದ (ಡಿ.30) ಹರೀಶ್ ಕಾಣೆಯಾಗಿದ್ದರು.

ಗೋವಿಂದರಾಜ್ ಅವರ ನ್ಯಾಯಾಂಗ ಬಂಧನ ಮುಂದುವರಿದಿದೆ. ಎರಡನೇ ಆರೋಪಿ ಹರೀಶ್ ಅವರು ಹುದ್ದೆಯಲ್ಲೇ ಮುಂದುವರಿದರೆ ಸಾಕ್ಷಿಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ, ಲೋಕಾಯುಕ್ತ ಶಿಫಾರಸಿನ ಅನ್ವಯ ಹರೀಶ್ ಅವರನ್ನು ಹುದ್ದೆಯಿಂದ ಅಮಾನತು ಮಾಡಿ ಬಿಬಿಎಂಪಿ ಆಡಳಿತದ ಉಪ ಆಯುಕ್ತರು ಆದೇಶ ಹೊರಡಿಸಿದ್ದಾರೆ.

‘ಭಾಷೆ ಅಭಿವೃದ್ಧಿ: ₹10 ಸಾವಿರ ಕೋಟಿ ಮೀಸಲಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷೆ ಮತ್ತು ಕನ್ನಡಿಗರ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ₹10 ಸಾವಿರ ಕೋಟಿ ಮೀಸಲಿಡಬೇಕು ಎಂದು ಕನ್ನಡ ಅನುಷ್ಠಾನ ಮಂಡಳಿ (ಸರ್ಕಾರದಿಂದ ಮನ್ನಣೆ ಪಡೆದ ಸಂಸ್ಥೆ) ಆಗ್ರಹಿಸಿದೆ.

‘ಉನ್ನತ ವೃತ್ತಿ ಶಿಕ್ಷಣದಲ್ಲಿ ಕನ್ನಡದ ಉತ್ತೇಜನದ ಪಠ್ಯ ರಚನೆಗೆ ವಿಶೇಷ ಘಟಕ ಸ್ಥಾಪಿಸಲು ₹100 ಕೋಟಿ ಮೀಸಲಿಡಬೇಕು. ಖಾಸಗಿ ಮತ್ತು ಸರ್ಕಾರಿ ರಂಗದಲ್ಲಿ ಕನ್ನಡಿಗರ ಔದ್ಯೋಗಿಕ ನೆಲೆಗಟ್ಟನ್ನು ಗಟ್ಟಿಗೊಳಿಸಲು ಡಾ.ಸರೋಜಿನಿ ಮಹಿಷಿ ವರದಿ ಜಾರಿಗೊಳಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಕನ್ನಡ ಮನ್ನಣೆ ಕೋಶ ಪ್ರಾರಂಭಿಸಬೇಕು. ಕೆಪಿಎಸ್‌ಸಿ ಮೂಲಕ ಕನ್ನಡದಲ್ಲಿ 100 ಅಂಕಗಳ ಕಡ್ಡಾಯ ಪರೀಕ್ಷೆ ಹಾಗೂ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಶೇ 90ರಷ್ಟು ಹುದ್ದೆಗಳನ್ನು ಮೀಸಲಿಡಬೇಕು’ ಎಂದು ಮಂಡಳಿಯ ಅಧ್ಯಕ್ಷ ಆರ್. ಎ. ಪ್ರಸಾದ್ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ರಾಜ್ಯ ಪಠ್ಯಕ್ರಮದ ಶಾಲೆಗಳಿಗೆ ಉತ್ತೇಜನ ನೀಡಬೇಕು. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪೂರೈಸಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಮಾಸಿಕ ₹2 ಸಾವಿರ ಗೌರವಧನ ನೀಡಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ಕನಿಷ್ಠ 30 ವರ್ಷ ಸೇವೆ ಸಲ್ಲಿಸಿದ ರಾಜಕೀಯ ಹಿನ್ನಲೆ ಇಲ್ಲದ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು’ ಎಂದು ಹೇಳಿದರು.



ಎಚ್‌.ಎ.ಎಲ್‌. ವಿಮಾನ ನಿಲ್ದಾಣ ರಸ್ತೆಯಲ್ಲಿ ಸುರಂಜನ್ ದಾಸ್ ಜಂಕ್ಷನ್ ಕೆಳಸೇತುವೆಯನ್ನು ಸಿಎಂ ಬಸವರಾಜ ಬೊಮ್ಮಾಯಿ ಗುರುವಾರ ಉದ್ಘಾಟಿಸಿದರು. ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಇದ್ದರು. –ಪ್ರಜಾವಾಣಿ ಚಿತ್ರ

ಸಕಾಲಕ್ಕೆ ಸಿಗದ ಆಂಬುಲೆನ್ಸ್ ಸೇವೆ: ಹಸುಳೆ ಸಾವು

ಒಂದನೇ ಪುಟದಿಂದ...

ವಿಡಿಯೊದಲ್ಲೇನಿದೆ: ‘ಸಂಜೆ 4.30ಕ್ಕೆ ಬೇಗೂರಿನ ಆಸ್ಪತ್ರೆ ಮುಚ್ಚಿತ್ತು. ಎನ್. ಬೇಗೂರಿನಿಂದ ಎಚ್.ಡಿ.ಕೋಟೆಗೆ 40 ಕಿ.ಮೀ ಆಗುತ್ತದೆ. ರಸ್ತೆಯೂ ಚೆನ್ನಾಗಿಲ್ಲ. ಆಂಬುಲೆನ್ಸ್ ಸಿಗಲಿಲ್ಲ. ಹಸುಳೆಗೆ ಸಿಪಿಆರ್ ಎಷ್ಟು ಕೊಡಲು ಸಾಧ್ಯ. ಬಿದರಹಳ್ಳಿ ಬಳಿ ಆಂಬುಲೆನ್ಸ್ ಸಿಕ್ಕಿದರೂ ಅದರಲ್ಲಿ ಆಮ್ಲಜನಕ ಸೌಲಭ್ಯ ಇರಲಿಲ್ಲ. ಎಷ್ಟು ಬಾರಿ ಉಸಿರು ನೀಡಿ ರಕ್ಷಿಸಿಕೊಳ್ಳಲು ಸಾಧ್ಯ’ ಎಂದು ದಂಪತಿ ಹೇಳಿರುವುದು ವಿಡಿಯೊದಲ್ಲಿದೆ. ಬೈಕ್ ಸವಾರ ಶಿವಲಿಂಗು ಎಂಬುವರು ವಿಡಿಯೊ ಮಾಡಿ, ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಹಂಚಿಕೊಂಡಿದ್ದಾರೆ.

> **ಆಂಬುಲೆನ್ಸ್‌ನಲ್ಲಿ ಆಕ್ಸಿಜನ್ ಸೌಕರ್ಯ ಏಕೆ ಇರಲಿಲ್ಲ ಎಂಬ ಬಗ್ಗೆ ಮಾಹಿತಿ ಪಡೆದು, ತನಿಖೆಗೆ ಆದೇಶಿಸಲಾಗುವುದು**
> **ಡಾ.ಕೆ.ಎಚ್.ಪ್ರಸಾದ್**
> ಜಿಲ್ಲಾ ಆರೋಗ್ಯಾಧಿಕಾರಿ

‘ಆಂಬುಲೆನ್ಸ್ ತಡವಾಗಿ ಬಂದಿದೆ. ಪೋಷಕರೂ ಹಸುಳೆಯನ್ನು ಆಸ್ಪತ್ರೆಗೆ ತಡವಾಗಿ ಕರೆತಂದಿದ್ದರು. ಸಕಾಲದಲ್ಲಿ ಚಿಕಿತ್ಸೆ ದೊರೆಯದಿರುವುದೇ ಸಾವಿಗೆ ಕಾರಣವಾಗಿರಬಹುದು’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ಪ್ರತಿಕ್ರಿಯಿಸಿದರು.

ಬುಂಡನಮಾಳದ ದಂಪತಿ ಮನೆಗೆ ಭೇಟಿ ನೀಡಿದ ಅವರು, ಶಿಶು ಮರಣದ ಮಾಹಿತಿ ಪಡೆದರು. ಮಹಿಳೆ ಆರೋಗ್ಯ ವಿಚಾರಿಸಿ ಸಾಂತ್ವನ ಹೇಳಿದರು.

ವಾಹನ ದಟ್ಟಣೆ ನಿಯಂತ್ರಣಕ್ಕೆ 12 ಕಾರಿಡಾರ್: ಮುಖ್ಯಮಂತ್ರಿ

ಒಂದನೇ ಪುಟದಿಂದ...

‘ಸಂಚಾರ ಸುಗಮಗೊಳಿಸಲು ಅಮೃತ ನಗರೋತ್ಥಾನ ಯೋಜನೆಯಡಿ 11 ಮೇಲ್ಸೇತುವೆಗಳಿಗೆ ಅನುಮೋದನೆ ನೀಡಲಾಗಿದೆ. ಇದು ನಗರದ ಇತಿಹಾಸದಲ್ಲೇ ಪ್ರಥಮ. ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ₹3 ಸಾವಿರ ಕೋಟಿ ಅನುದಾನವನ್ನು ರಸ್ತೆ ನಿರ್ಮಾಣಕ್ಕೆ ಒದಗಿಸಲಾಗಿದೆ. ಉಪನಗರ ರೈಲು ಯೋಜನೆ ಕಾಮಗಾರಿ ಪ್ರಾರಂಭವಾಗಿದೆ. ಸ್ಯಾಟಲೈಟ್ ರಿಂಗ್ ರಸ್ತೆ ಪ್ರಗತಿಯಲ್ಲಿದೆ. ಪೆರಿಫೆರಲ್ ವರ್ತುಲ ರಸ್ತೆ ಬಗ್ಗೆ ಶೀಘ್ರ ತೀರ್ಮಾನ ಕೈಗೊಳ್ಳಲಾಗುತ್ತದೆ. ನಮ್ಮ ಮೆಟ್ರೋ 3ನೇ ಹಂತಕ್ಕೆ ಚಾಲನೆ ನೀಡಿದ್ದೇವೆ’ ಎಂದು ಮಾಹಿತಿ ನೀಡಿದರು.

‘ನಮ್ಮದು ಸ್ಪಂದನಾಶೀಲ ಸರ್ಕಾರ. ಬೆಂಗಳೂರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬೆಂಗಳೂರಿನ ಅಂತರರಾಷ್ಟ್ರೀಯ ಬ್ರ್ಯಾಂಡ್ ಉಳಿಸುವ ನಿಟ್ಟಿನಲ್ಲಿ ನಮ್ಮ ಕೆಲಸ ಸಾಗಿದೆ’ ಎಂದರು.

ಸಚಿವರಾದ ಬಿ.ಎ. ಬಸವರಾಜ, ಮುರುಗೇಶ ನಿರಾಣಿ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ಕೆ.ವಿ.ತ್ರಿಲೋಕ್ ಚಂದ್ರ ಅವರೂ ಇದ್ದರು.

‘ಪರಿಸರ ಉಳಿಸುವ ಪದ್ಧತಿ ಅನುಷ್ಠಾನಕ್ಕೆ ಆದ್ಯತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಮತ್ತು ಜೀವವೈವಿಧ್ಯ ಕುರಿತು ‘ಜಿ-20’ ಪರಿಸರ ಮತ್ತು ಹವಾಮಾನ ಸುಸ್ಥಿರತೆಯ ಕಾರ್ಯಕಾರಿ ಗುಂಪಿನ (ಇಸಿಎಸ್‌ಡಬ್ಲ್ಯುಜಿ) ಮೊದಲ ಸಭೆ ಗುರುವಾರ ನಡೆಯಿತು.

ಸುಸ್ಥಿರ ಹವಾಮಾನ ಹಾಗೂ ಪರಿಸರ ಮತ್ತು ಜೀವವೈವಿಧ್ಯವನ್ನು ರಕ್ಷಿಸುವ ಹೊಸ ಅಭಿವೃದ್ಧಿ ಮಾದರಿಯನ್ನು ಸಾಮೂಹಿಕವಾಗಿ ಬೆಂಬಲಿಸುವ ಗುರಿಯನ್ನು ಇಸಿಎಸ್‌ಡಬ್ಲ್ಯುಜಿ ಹೊಂದಿದೆ.

‘ಭಾರತದಲ್ಲಿ ಏಕ ಬೆಳೆ ಪದ್ಧತಿಯನ್ನು ಹಂತ ಹಂತವಾಗಿ ಕೈಬಿಡಲಾಗುವುದು ಮತ್ತು ಅರಣ್ಯೀಕರಣಕ್ಕೆ ಆದ್ಯತೆ ನೀಡಲಾಗುವುದು. ಜಿ-20 ದೇಶಗಳಲ್ಲಿ ಅನುಸರಿಸುತ್ತಿರುವ ಅತ್ಯುತ್ತಮ ಪದ್ಧತಿಗಳನ್ನು ಇಲ್ಲಿಯೂ ಅಳವಡಿಸಿಕೊಳ್ಳಲಾಗುವುದು’ ಎಂದು ಅರಣ್ಯ ಇಲಾಖೆ ಮಹಾನಿರ್ದೇಶಕ ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ವಿಶೇಷ ಕಾರ್ಯದರ್ಶಿ ಚಂದ್ರ ಪ್ರಕಾಶ್ ಗೋಯಲ್ ವಿವರಿಸಿದರು.

‘ಅರಣ್ಯ ಪ್ರದೇಶವನ್ನು ಉಳಿಸಿಕೊಳ್ಳುವುದು ಇಸಿಎಸ್‌ಡಬ್ಲ್ಯುಜಿಯಲ್ಲಿ ಪ್ರಮುಖ ವಿಷಯವಾಗಿತ್ತು. ಇತರ ದೇಶಗಳಲ್ಲಿ ಕೈಗೊಂಡಿರುವ ಪರಿಣಾಮಕಾರಿ ಪದ್ಧತಿಗಳ ಬಗ್ಗೆ ಅಧ್ಯಯನ ನಡೆಸಲಾಗುವುದು’ ಎಂದರು.

ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿಯ (ಐಸಿಎಫ್‌ಆರ್‌ಇ) ಮಹಾನಿರ್ದೇಶಕ ಎ.ಎಸ್. ರಾವತ್ ಅವರು, ಗಣಿಗಾರಿಕೆ ಮತ್ತು ಕಾಡ್ಗಿಚ್ಚು ಪೀಡಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ಪರಿಸರ ಪುನಃ ಸ್ಥಾಪನೆಯ ಅಂಶಗಳ ಜಾಗತಿಕ ದೃಷ್ಟಿಕೋನಗಳನ್ನು ಕುರಿತು ಚರ್ಚಿಸಿದರು.

ಯುಎನ್‌ಡಿಪಿಯ ಡಾ. ರುಚಿ ಪಂತ್ ಅವರು ಗಣಿಗಾರಿಕೆ ಪೀಡಿತ ಪ್ರದೇಶದಲ್ಲಿ ಪರಿಸರ ವ್ಯವಸ್ಥೆಗಳ ರಕ್ಷಣೆ ಮತ್ತು ಸಂರಕ್ಷಣೆ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು.

ರಕ್ಷಣಾ ಕೈಗಾರಿಕೆ ಸಿಇಒಗಳ ಸಭೆ 13ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಣಾ ಸಚಿವಾಲಯವು ಫೆ.13 ರಂದು ವೈಮಾಂತರಿಕ್ಷ ಮತ್ತು ರಕ್ಷಣಾ ಕೈಗಾರಿಕೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ(ಸಿಇಒ) ದುಂಡು ಮೇಜಿನ ಸಭೆಯನ್ನು ಆಯೋಜಿಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಲಿದೆ.

'ಆಗಸವೇ ಮಿತಿಯಲ್ಲ: ಗಡಿಗಳನ್ನು ಮೀರಿದ ಅವಕಾಶಗಳು' ಎನ್ನುವ ಘೋಷವಾಕ್ಯದ ವೇದಿಕೆಯು 'ಮೇಕ್-ಇನ್ ಇಂಡಿಯಾ' ಅಭಿಯಾನವನ್ನು ಉತ್ತೇಜಿಸಲಿದೆ. ಜತೆಗೆ, ಸುಲಲಿತ ವ್ಯಾಪಾರ ನಡೆಸುವ ದೃಷ್ಟಿಯಿಂದ ಉದ್ದಿಮೆದಾರರು ಮತ್ತು ಸರ್ಕಾರದ ನಡುವೆ ಸಂವಾದಕ್ಕೂ ಸಾಕ್ಷಿಯಾಗಲಿದೆ. ಇದರಿಂದ, ಭಾರತದಲ್ಲೇ ಉತ್ಪನ್ನಗಳನ್ನು ತಯಾರಿಸಲು ಉದ್ಯಮ ವಲಯಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಲಿದೆ ಎಂದು ರಕ್ಷಣಾ ಇಲಾಖೆ ಪ್ರಕಟಣೆ ತಿಳಿಸಿದೆ.

ಬೋಯಿಂಗ್, ಲಾಕ್ಹೀಡ್, ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್, ಜನರಲ್ ಅಟಾಮಿಕ್ಸ್, ಲೀಭರ್ ಗ್ರೂಪ್, ರೇಥಿಯಾನ್ ಟೆಕ್ನಾಲಜೀಸ್, ಸಫ್ರಾನ್, ಮಿಲಿಟರಿ ಇಂಡಸ್ಟ್ರೀಸ್ ಜನರಲ್ ಅಥಾರಿಟಿ (ಜಿಎಂಐ) ಮುಂತಾದ ಜಾಗತಿಕ ಹೂಡಿಕೆದಾರರು ಸೇರಿದಂತೆ 26 ದೇಶಗಳ ಅಧಿಕಾರಿಗಳು ಮತ್ತು ಪ್ರತಿನಿಧಿಗಳು, ಜಾಗತಿಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಭಾಗಿಯಾಗಲಿದ್ದಾರೆ.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್ಎಎಲ್), ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್), ಭಾರತ್ ಡೈನಾಮಿಕ್ಸ್ ಲಿಮಿಟೆಡ್ (ಬಿಡಿಎಲ್), ಬಿಇಎಂಎಲ್ ಲಿಮಿಟೆಡ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ಮತ್ತು ಭಾರತದ ಪ್ರಮುಖ ಖಾಸಗಿ ರಕ್ಷಣಾ ಮತ್ತು ವೈಮಾನಿಕ ಕಂಪನಿಗಳಾದ ಲಾರ್ಸೆನ್ ಮತ್ತು ಟೂಬ್ರೋ, ಭಾರತ್ ಫೋರ್ಜ್, ಡೈನಾಮಿಟಿಕ್ ಟೆಕ್ನಾಲಜೀಸ್, ಬ್ರಹ್ಮೋಸ್ ಏರೋಸ್ಪೇಸ್ ಸೇರಿದಂತೆ ವಿವಿಧ ಕಂಪನಿಗಳ ಪ್ರಮುಖರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.



ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಗುರುವಾರ 'ಏರೋ ಇಂಡಿಯಾ' ಅಂಗವಾಗಿ ನಡೆದ ತಾಲೀಮಿನಲ್ಲಿ ಸಾರಂಗ ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಿದವು – ಪ್ರಜಾವಾಣಿ ಚಿತ್ರ

AERO INDIA 2023 The Runway to a Billion Opportunities

ಬಿಬಿಎಂಪಿ ಬಜೆಟ್ ಸಿದ್ಧತೆ : ಸಚಿವರು, ಶಾಸಕರ ಸಭೆ

ರಸ್ತೆ, ಉದ್ಯಾನ ನಿರ್ವಹಣೆಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸಿಬ್ಬಂದಿ ನಿಯೋಜನೆ, ಶಿಕ್ಷಣ, ಕಲ್ಯಾಣ ಕಾರ್ಯಕ್ರಮ, ಕೆರೆ, ಪಾದಚಾರಿ ಮಾರ್ಗ, ರಸ್ತೆ, ಬೀದಿದೀಪ, ಉದ್ಯಾನಗಳ ನಿರ್ವಹಣೆಗೆ ಬಿಬಿಎಂಪಿ ಆಯವ್ಯಯದಲ್ಲಿ ಅನುದಾನ ಮೀಸಲಿಡಲಾಗುತ್ತದೆ ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ತಿಳಿಸಿದರು.

ಬಿಬಿಎಂಪಿಯ 2023-24ನೇ ಸಾಲಿನ ಆಯವ್ಯಯದ ಸಿದ್ಧತೆಗೆ ಸಲಹೆ ಮತ್ತು ಸೂಚನೆ ಪಡೆಯಲು ವಿಕಾಸಸೌಧದಲ್ಲಿ ಗುರುವಾರ ಆಯೋಜಿಸಿದ್ದ ಸಚಿವರು, ಶಾಸಕರ ಸಭೆಯಲ್ಲಿ ಮಾಹಿತಿ ನೀಡಿದರು.

'ಬಜೆಟ್‌ಗಾಗಿ ಒಂದು ತಿಂಗಳಿಂದ ಸಿದ್ಧತೆಗಳು ನಡೆಯುತ್ತಿದ್ದು, ಜನಾಗ್ರಹ ಸಂಸ್ಥೆ ಎಲ್ಲ 243 ವಾರ್ಡ್‌ಗಳಲ್ಲಿ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ರಾಜ್ಯ ಆಯವ್ಯಯ ಮಂಡನೆಯಾದ ಒಂದು ವಾರದೊಳಗಾಗಿ ಬಿಬಿಎಂಪಿ ಬಜೆಟ್ ಮಂಡಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.

'ನಗರದ ಸರ್ವತೋಮುಖ ಅಭಿವೃದ್ಧಿಯ ಹಿತದೃಷ್ಟಿಯಿಂದ ಸಾರ್ವಜನಿಕರಿಗೆ ಒದಗಿಸ ಬೇಕಾದ ಜನಪರ ಯೋಜನೆಗಳನ್ನು ಬಿಬಿಎಂಪಿಯ 2023-24ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಚಿವರ ಶಾಸಕರು ಸಲಹೆ ನೀಡಬೇಕು' ಎಂದು ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮನವಿ ಮಾಡಿದರು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, 'ನಾಗರಿಕರಿಗೆ ಅಗತ್ಯ ಮೂಲ ಸೌಕರ್ಯ ಒದಗಿಸುವುದು ಬಿಬಿಎಂಪಿ ಜವಾಬ್ದಾರಿ. ಈ ನಿಟ್ಟಿನಲ್ಲಿ ಆಯವ್ಯಯ ಮಂಡಿಸಲಾಗುವುದು' ಎಂದು ಹೇಳಿದರು.

ಬೀದಿ ದೀಪ, ಉದ್ಯಾನ, ರಾಜಕಾಲುವೆ ನಿರ್ವಹಣೆ, ಭದ್ರತಾ ಸಿಬ್ಬಂದಿ ನಿಯೋಜನೆ, ಬೀದಿಬದಿ ಕಸ ಸುರಿಯುವ ತಾಣಗಳ ನಿರ್ಮೂಲನೆ, ಲ್ಯಾಪ್‌ಟಾಪ್, ಹೊಲಿಗೆ ಯಂತ್ರ, ಒಂಟಿ ಮನೆ, ರಸ್ತೆ ವಿಸ್ತರಣೆ, ಪ್ರತಿ ವಾರ್ಡ್‌ಗೆ ಸಾರ್ವಜನಿಕ ಕಾಮಗಾರಿಗಳಿಗೆ ಅನುದಾನ, ಭಿಕ್ಷಾಟನೆ, ಗ್ರಂಥಾಲಯ ಹಾಗೂ ಡಲ್ಟ್ ಸೆಸ್ ವಿನಿಯೋಗ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡುವ ವಿಷಯಗಳು ಸಭೆಯಲ್ಲಿ ಚರ್ಚೆಯಾದವು.

ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಶಾಸಕರಾದ ರವಿಸುಬ್ರಮಣ್ಯ, ಉದಯ್ ಬಿ. ಗರುಡಾಚಾರ್, ಅಖಂಡ ಶ್ರೀನಿವಾಸ್ ಮೂರ್ತಿ, ವಿಧಾನ ಪರಿಷತ್ ಸದಸ್ಯರಾದ ಪಿ.ಆರ್.ರಮೇಶ್, ಪುಟ್ಟಣ್ಣ, ಗೋಪಿನಾಥ್ ರೆಡ್ಡಿ ಅವರು ಇದ್ದರು.

ಮಾ.20ರಂದು 'ಕಿಸಾನ್ ಮಹಾಪಂಚಾಯತ್'

ಕುರುಕ್ಷೇತ್ರ (ಪಿಟಿಐ): ಕೃಷಿ ಉತ್ಪನ್ನಗಳಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಿನ ಖಾತ್ರಿ ನೀಡುವಂತೆ ಒತ್ತಾಯಿಸಿ ಮಾರ್ಚ್ 20ರಂದು ಸಂಸತ್ ಎದುರು 'ಕಿಸಾನ್ ಮಹಾಪಂಚಾಯತ್' ನಡೆಸಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಗುರುವಾರ ತಿಳಿಸಿದೆ.

ರೈತ ಮುಖಂಡರಾದ ಯುದ್ಧವೀರ್ ಸಿಂಗ್, ರಾಜಾರಾಮ್ ಸಿಂಗ್ ಹಾಗೂ ಡಾ.ಸುನೀಲಮ್ ನೇತೃತ್ವದಲ್ಲಿ ಇಲ್ಲಿನ ಜಾಟ್ ಭವನದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಪ್ರಕಟಣೆ ತಿಳಿಸಿದೆ. 'ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಹೋರಾಟ ನಡೆಸಿದ ರೈತರ ವಿರುದ್ಧ ದಾಖಲಿಸಿರುವ ಪ್ರಕರಣ ಹಿಂಪಡೆಯಬೇಕು, ರೈತರಿಗೆ ಮಾಸಿಕ ₹5 ಸಾವಿರ ಪಿಂಚಣಿ ನೀಡಬೇಕು, ರೈತರ ಸಾಲ ಮನ್ನಾ ಮಾಡಬೇಕು ಸೇರಿ ಇನ್ನಿತರ ಬೇಡಿಕೆಗಳನ್ನು ಈಡೇರಿಸಲು, 'ಕಿಸಾನ್ ಮಹಾಪಂಚಾಯತ್' ಸಂದರ್ಭದಲ್ಲಿ ಒತ್ತಾಯಿಸಲಾಗುವುದು ಎಂದು ತಿಳಿಸಿದೆ.

ಈಜಿಪುರ: ಆರ್ಥಿಕ ದುರ್ಬಲ ವರ್ಗದವರಿಗೆ ಮನೆ

ನಿರ್ಮಾಣಕ್ಕೆ 18 ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಈಜಿಪುರದಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ವಿತರಿಸಬೇಕಾದ 1,512 ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಗುತ್ತಿಗೆ ಕಂಪನಿ ಮೇವರಿಕ್ ಹೋಲ್ಡಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹೈಕೋರ್ಟ್ 18 ತಿಂಗಳ ಗಡುವು ವಿಧಿಸಿದೆ.

ಕಾಮಗಾರಿ ವಿಳಂಬ ಪ್ರಶ್ನಿಸಿ ಕರ್ನಾಟಕ ಇಡಬ್ಲುಎಸ್ ಸಂಘಟನೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ, ಬಿಡಿಎ ಮತ್ತು ಮೇವರಿಕ್ಸ್ ಕಂಪನಿ ಪರ ಹಾಜರಾಗಿದ್ದ ವಕೀಲರು ನ್ಯಾಯಪೀಠಕ್ಕೆ ಜಂಟಿ ಪ್ರಮಾಣಪತ್ರ ಸಲ್ಲಿಸಿ, 'ಇಡಬ್ಲ್ಯುಎಸ್ ವಿತರಿಸಬೇಕಾದ 1,512 ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ನಕ್ಷೆ ಮಂಜೂರಾತಿಗೆ ಮೇವರಿಕ್ಸ್ ಕಂಪನಿಗೆ ಬಿಡಿಎಗೆ ಮನವಿ ಸಲ್ಲಿಸಿದೆ. ಹಾಗಾಗಿ, ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಅರ್ಜಿದಾರರ ಪರ ವಕೀಲ ಅನ್ನಿಯನ್ ಜೋಸೆಫ್, 'ವಸತಿಗೃಹ ನಿರ್ಮಾಣ ಕಾರ್ಯ ಪೂರ್ಣಗೊಳಿಸಬೇಕು ಎಂದು 2017ರಲ್ಲಿಯೇ 18 ತಿಂಗಳ ಕಾವಲಾವಕಾಶ ನೀಡಲಾಗಿದೆ. ಆದರೆ, ಈಗ ಪುನಃ 24 ತಿಂಗಳ ಕಾಲಾವಕಾಶ ಕೋರುತ್ತಿರುವುದು ಸರಿಯಲ್ಲ' ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಉಭಯತ್ರರ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮೇವರಿಕ್ ಕಂಪನಿಯ ಮನವಿಯನ್ನು ಪರಿಗಣಿಸಿ ಶೀಘ್ರವೇ ಪರಿಷ್ಕೃತ ನಕ್ಷೆ ಮಂಜೂರಾತಿಯನ್ನು ಬಿಡಿಎ ನೀಡಬೇಕು. ಪರಿಷ್ಕೃತ ನಕ್ಷೆ ಮಂಜೂರಾತಿ ನೀಡಿದ ದಿನದಿಂದ 15 ದಿನಗಳ ಒಳಗೆ ಬಿಬಿಎಂಪಿಯು ಕಾಮಗಾರಿ ಆರಂಭಿಸಲು ಅನುಮತಿ ಪತ್ರ ವಿತರಿಸಬೇಕು. ಅನುಮತಿ ಪತ್ರ ದೊರೆತ ನಂತರದ 18 ತಿಂಗಳ ಒಳಗೆ ಮೇವರಿಕ್ಸ್ ಕಂಪನಿಯು 1,512 ಮನೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಬೇಕು. ಕಾಮಗಾರಿ ಪ್ರಗತಿಯ ಕುರಿತು ಆರು ತಿಂಗಳಿಗೊಮ್ಮೆ ನ್ಯಾಯಾಲಯಕ್ಕೆ ವರದಿ ಸಲ್ಲಸಬೇಕು' ಎಂದು ನಿರ್ದೇಶಿಸಿತು.

ಪ್ರಕರಣವೇನು?: ಈಜಿಪುರದಲ್ಲಿ ಆರ್ಥಿಕವಾಗಿ ದುರ್ಬಲವಾದವರಿಗೆ 1,512 ಮನೆ ನಿರ್ಮಿಸಲು ಯೋಜಿಸಿದ್ದು, ನಕ್ಷೆ ಅನುಮೋದನೆ ಆದ 18 ತಿಂಗಳ ಒಳಗೆ ವಸತಿಗೃಹ ನಿರ್ಮಾಣ ಕಾರ್ಯ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ, ಬಿಡಿಎ ಮತ್ತು ಮೇವರಿಕ್ ಹೋರ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 2017ರ ರ ಮೇ 31ರಂದು ಹೈಕೋರ್ಟ್ ಆದೇಶಿಸಿತ್ತು.

'ಹೈಕೋರ್ಟ್ ಆದೇಶ ನೀಡಿದರೂ ಈತನಕ ಕಾಮಗಾರಿ ಪೂರ್ಣಗೊಳಿಸಿಲ್ಲ' ಎಂದು ಅರ್ಜಿದಾರರು ಪುನಃ ಹೈಕೋರ್ಟ್ ಮೆಟ್ಟಿಲೇರಿ, 'ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ಅಲ್ಲಿಯವರೆಗೆ ವಸತಿ ಹಕ್ಕುದಾರರಿಗೆ ಮಾಸಿಕ ಬಾಡಿಗೆ ಹಣ ನೀಡಲು ಆದೇಶಿಸಬೇಕು' ಎಂದು ಕೋರಿದ್ದಾರೆ.

ಯುಕೆಜಿ ವಿದ್ಯಾರ್ಥಿನಿ ಫೇಲ್!


ಆನೇಕಲ್: ತಾಲ್ಲೂಕಿನ ಚಂದಾಪುರ ಸಮೀಪದ ದೀಪಹಳ್ಳಿಯ ಸಂತಜೋಸೆಫ್ ಚಾಮಿನೇಟ್ ಅಕಾಡೆಮಿಯಲ್ಲಿ ಕಲಿಯುತ್ತಿರುವ ಯುಕೆಜಿ ವಿದ್ಯಾರ್ಥಿನಿಯನ್ನು ಅನುತ್ತೀರ್ಣಗೊಳಿಸಲಾಗಿದೆ. 6 ವರ್ಷದ ಮಗಳನ್ನು ಅನುತ್ತೀರ್ಣಗೊಳಿಸಿರುವ ಬಗ್ಗೆ ಪೋಷಕರು ಸಾಮಾಜಿಕ ಜಾಲತಾಣದಲ್ಲಿ ಅಸಮಾಧಾನ ತೋಡಿಕೊಂಡಿದ್ದಾರೆ.

ಮಾಜಿ ಶಿಕ್ಷಣ ಸಚಿವ ಹಾಗೂ ಶಾಸಕ ಎಸ್. ಸುರೇಶ್ ಕುಮಾರ್ ಸೇರಿದಂತೆ ಸಾರ್ವಜನಿಕರು ಶಾಲೆಯ ಕ್ರಮವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಗುರುವಾರ ಶಾಲೆಗೆ ಭೇಟಿ ನೀಡಿದ ಶಿಕ್ಷಣ ಇಲಾಖೆ ಅಧಿಕಾರಿಗಳು ನೋಟಿಸ್ ಜಾರಿಗೊಳಿಸಿದ್ದಾರೆ.

'ಶಾಲೆಯ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಅಳೆಯಲು 'ಟೀಚ್‌ಮೆಂಟ್' ಎಂಬ ಮೊಬೈಲ್ ಆ್ಯಪ್ ಬಳಕೆ ಮಾಡಲಾಗುತ್ತಿದೆ. ಒಂದು ವೇಳೆ ವಿದ್ಯಾರ್ಥಿಗಳು ಶೇ 35ಕ್ಕಿಂತ ಕಡಿಮೆ ಅಂಕ ಪಡೆದಲ್ಲಿ ಫಲಿತಾಂಶವನ್ನು ಫೇಲ್ ಎಂದು ತೋರಿಸುವ ಡಿಫಾಲ್ಟ್ ಫೀಚರ್ ಆ್ಯಪ್‌ನಲ್ಲಿದೆ. ಇದು ಸಮಸ್ಯೆಗೆ ಕಾರಣವಾಗಿದ್ದು, ಸರಿಪಡಿಸುತ್ತೇವೆ' ಎಂದು ಶಾಲೆಯ ಪ್ರಾಂಶುಪಾಲ ಸಾಜು ಚಿಟ್ಟದಿಯಿಲ್ ಪ್ರತಿಕ್ರಿಯಿಸಿದ್ದಾರೆ.

ನಿಧನ ವಾರ್ತೆ

ಮಾಜಿ ಶಾಸಕ ಶಿವಾನಂದ ಅಂಬಡಗಟ್ಟಿ



ಧಾರವಾಡ: ಮಾಜಿ ಶಾಸಕ, ಕಾಂಗ್ರೆಸ್ ಮುಖಂಡ ಶಿವಾನಂದ ಅಂಬಡಗಟ್ಟಿ (73) ಗುರುವಾರ ಬೆಳಗಿನಜಾವ ನಿಧನರಾದರು. ಹೃದಯ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಬುಧವಾರ ರಾತ್ರಿ ತೀವ್ರ ಅಸ್ವಸ್ಥರಾಗಿದ್ದರು. ತಕ್ಷಣ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೃತರ ಅಂತ್ಯಕ್ರಿಯೆ ಅಳ್ನಾವರದ ವೀರಶೈವ ರುದ್ರಭೂಮಿಯಲ್ಲಿ ಗುರುವಾರ ಸಂಜೆ ನೆರವೇರಿತು. ಅವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಅರವಿಂದ ಲಿಂಬಾವಳಿ ಹಿಡಿತ ತಪ್ಪಿಸಲು ಕಾಂಗ್ರೆಸ್ ಪ್ರಯತ್ನ

• ವಿಜಯಕುಮಾರ್ ಎಸ್.ಕೆ.

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕ್ಷೇತ್ರ ಸ್ಥಿತಿಗತಿ

ಬೆಂಗಳೂರು: ಸತತ ಮೂರು ಬಾರಿ ಆಯ್ಕೆಯಾಗುವ ಮೂಲಕ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಅರವಿಂದ ಲಿಂಬಾವಳಿ ಸಾಧಿಸಿರುವ ಬಿಗಿ ಹಿಡಿತ ಸಡಿಲಗೊಳಿಸಲು ಕಾಂಗ್ರೆಸ್ ಪ್ರಯತ್ನ ನಡೆಸುತ್ತಿದೆ. ಹೇಗಾದರೂ ಮಾಡಿ ಈ ಬಾರಿ ಗೆಲುವು ಗಿಟ್ಟಿಸಲೇಬೇಕು ಎಂಬ ಹಟಕ್ಕೆ ಕೈ ನಾಯಕರು ಬಿದ್ದಿದ್ದಾರೆ.

ಕಾಂಗ್ರೆಸ್ ಆಕಾಂಕ್ಷಿಗಳ ಪಟ್ಟಿಯಲ್ಲಿ 12 ಮಂದಿ ಇದ್ದು, ಮುಳಬಾಗಿಲು ಕ್ಷೇತ್ರದ ಪಕ್ಷೇತರ ಶಾಸಕ ಎಚ್. ನಾಗೇಶ್ ಅವರನ್ನು ಪಕ್ಷಕ್ಕೆ ಕರೆತಂದು ಲಿಂಬಾವಳಿ ಮಣಿಸುವ ತಂತ್ರವನ್ನೂ ಕಾಂಗ್ರೆಸ್ ಹೆಣೆದಿದೆ.

ಹಳ್ಳಿಗಳು ಅತ್ಯಂತ ವೇಗವಾಗಿ ಹೈಟೆಕ್ ಸಿಟಿಯಾಗಿ ಹೊರಳಿದ ಹೊರ ವಲಯದಲ್ಲಿ ಚಾಚಿಕೊಂಡಿರುವ ಮಹದೇವಪುರ ವಿಧಾನಸಭಾ ಕ್ಷೇತ್ರ, ವಿಸ್ತೀರ್ಣದ ದೃಷ್ಟಿಯಿಂದಲೂ ದೊಡ್ಡದು. ಬಹುಪಾಲು ಐ.ಟಿ ಕಂಪನಿಗಳು ಇದೇ ಕ್ಷೇತ್ರದಲ್ಲಿ ನೆಲೆಸಿವೆ. ಯಲಹಂಕಕ್ಕೆ ಹೊಂದಿಕೊಂಡ ಪ್ರದೇಶದಿಂದ ಆರಂಭವಾಗಿ ಸರ್ಜಾಪುರ ರಸ್ತೆ ತನಕ ವಿಸ್ತರಿಸಿಕೊಂಡಿದೆ. ಗರುಡಾಚಾರ್ ಪಾಳ್ಯ, ಹೂಡಿ, ಕಾಡಗೋಡಿ, ವೈಟ್‌ಫೀಲ್ಡ್, ಹಗದೂರು, ದೊಡ್ಡನೆಕ್ಕುಂದಿ, ಮಾರತಹಳ್ಳಿ, ವರ್ತೂರು, ದೊಡ್ಡಕನ್ನಲಿ, ಬೆಳ್ಳಂದೂರು ಸುತ್ತಮುತ್ತಲ ಪ್ರದೇಶವನ್ನು ಒಳಗೊಂಡಿದೆ. ನಗರದ ಹೊರವಲಯದ 11 ಗ್ರಾಮ ಪಂಚಾಯಿತಿಗಳೂ ಈ ಕ್ಷೇತ್ರದ ವ್ಯಾಪ್ತಿಯಲ್ಲಿವೆ.

ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲೇ ಅತಿ ಹೆಚ್ಚು ಮತದಾರರನ್ನು ಹೊಂದಿರುವ ಎರಡನೇ ಕ್ಷೇತ್ರ ಇದಾಗಿದ್ದು, 5.72 ಲಕ್ಷ ಮತದಾರರಿದ್ದಾರೆ.

ವಿವಿಧ ಕ್ಷೇತ್ರಗಳಲ್ಲಿ ಹಂಚಿ ಹೋಗಿದ್ದ ಪ್ರದೇಶಗಳು 2008ರ ಕ್ಷೇತ್ರ ಮರು ವಿಂಗಡಣೆಯಲ್ಲಿ ಮಹದೇಪುರ ಕ್ಷೇತ್ರದಲ್ಲಿ ಸೇರಿಕೊಂಡವು. ಪರಿಶಿಷ್ಟ ಜಾತಿಗೆ ಮೀಸಲಾದ ಈ ಕ್ಷೇತ್ರದಲ್ಲಿ ನಡೆದಿರುವ ಮೂರು ಚುನಾವಣೆಗಳಲ್ಲಿಯೂ ಬಿಜೆಪಿಯ ಅರವಿಂದ ಲಿಂಬಾವಳಿ ಅವರೇ ಜಯ ಸಾಧಿಸಿದ್ದಾರೆ. ಮೂರು ಬಾರಿಯೂ ಕಾಂಗ್ರೆಸ್ ಪೈಪೋಟಿ ನೀಡಿದೆ. ಕಾಂಗ್ರೆಸ್‌ನಿಂದ 2008ರಲ್ಲಿ ಬಿ.ಶಿವಣ್ಣ ಸ್ಪರ್ಧಿಸಿದ್ದರೆ, 2013 ಮತ್ತು 2018ರಲ್ಲಿ ಎ.ಸಿ. ಶ್ರೀನಿವಾಸ್ ಪೈಪೋಟಿ ನೀಡಿದ್ದರು. ಜೆಡಿಎಸ್ ಸ್ಪರ್ಧೆ ಮಾಡಿದ್ದರೂ ಹೆಚ್ಚು ಮತಗಳನ್ನು ಗಳಿಸಲು ಸಾಧ್ಯವಾಗಿಲ್ಲ.


ಐ.ಟಿ ಕಂಪನಿಗಳ ತವರು ಎನಿಸಿಕೊಂಡಿರುವ ಕ್ಷೇತ್ರದ ಜನ ಸಮಸ್ಯೆಗಳನ್ನೇ ಹೊದ್ದು ಮಲಗಿದ್ದಾರೆ. ಸಂಚಾರ ದಟ್ಟಣೆ ಇಲ್ಲಿನ ಜನರನ್ನು ಕಾಡುತ್ತಿದೆ. ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಪರ್ಕಿಸುವ ಕಾಮಗಾರಿ ಈಗ ಅಂತಿಮ ಹಂತಕ್ಕೆ ಬಂದಿದೆ. ಸಿಲ್ಕ್‌ಬೋರ್ಡ್‌ನಿಂದ ಹೊರ ವರ್ತುಲ ರಸ್ತೆ, ಕೆ.ಆರ್.ಪುರ, ಹೆಬ್ಬಾಳ ಮೂಲಕ ವಿಮಾನ ನಿಲ್ದಾಣ ತಲುಪುವ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಈ ವರ್ಷದ ಮಳೆ ಈ ಕ್ಷೇತ್ರವನ್ನು ಇನ್ನಿಲ್ಲದೆ ಕಾಡಿತು. ಹೊರ ವರ್ತುಲ ರಸ್ತೆಯಲ್ಲೇ ನೀರು ಹರಿದಿತ್ತು. ಐ.ಟಿ ಕಂಪನಿಗಳು ಮತ್ತು ಪ್ರತಿಷ್ಠಿತ ಬಡಾವಣೆಗಳಿಗೂ ನೀರು ನುಗ್ಗಿತ್ತು. ಸಂಪರ್ಕ ರಸ್ತೆಗಳು ಅಭಿವೃದ್ಧಿ ಕಾಣಬೇಕಿದೆ.

ಈ ಎಲ್ಲಾ ಸಮಸ್ಯೆಗಳ ನಡುವೆ ವಿಧಾನಸಭೆ ಚುನಾವಣೆ ಎದುರಾಗಿದ್ದು, ರಾಜಕೀಯ ಪಕ್ಷಗಳು ತಯಾರಿ ನಡೆಸುತ್ತಿವೆ. ಬಿಜೆಪಿಯಿಂದ ಅರವಿಂದ ಲಿಂಬಾವಳಿ ಅವರಿಗೆ ಟಿಕೆಟ್ ದೊರಕುವ ಸಾಧ್ಯತೆ ಇದೆ. ಲಿಂಬಾವಳಿ ಅವರನ್ನು ಬೇರೆ ಕ್ಷೇತ್ರದಿಂದ ಕಣಕ್ಕಿಳಿಸುವ ಬಗ್ಗೆಯೂ ಬಿಜೆಪಿ ಆಲೋಚನೆ ನಡೆಸುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮುಳುಬಾಗಿಲು ಕ್ಷೇತ್ರದ ಪಕ್ಷೇತರ ಶಾಸಕ ಎಚ್. ನಾಗೇಶ್ ಅವರು ಕೂಡ ಕ್ಷೇತ್ರದಲ್ಲಿ ಓಡಾಡುತ್ತಿದ್ದು, ಅವರು ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಸಾಧ್ಯತೆಗೆ ಪುಷ್ಟಿ ನೀಡಿದೆ.

ಕಾಂಗ್ರೆಸ್‌ನಿಂದ ವೆಂಕಟರಾಮಯ್ಯ, ವೈ.ವಿನೋದ್, ಅನಂದಕುಮಾರ್, ಎಂ.ಕಮಲಾಕ್ಷಿ ರಾಜಣ್ಣ, ಎನ್. ವೆಂಕಟೇಶ್, ಎಂ.ರಾಮಕೃಷ್ಣಪ್ಪ, ಟಿ.ನಾಗೇಶ್, ಪುಷ್ಪಾ ಅಮರನಾಥ್, ಎ.ಮುನಿಯಪ್ಪ, ಜಿ.ವಿ.ಕೃಷ್ಣಪ್ರಸಾದ್, ಟಿ.ಜಯಪ್ಪ, ಸುಜಾತಾ ನಾಗೇಶ್ ಅವರು ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿದ್ದಾರೆ. ಜೆಡಿಎಸ್‌ನಿಂದ ಪಕ್ಷದ ಕ್ಷೇತ್ರ ಘಟಕದ ಅಧ್ಯಕ್ಷ ಮುನಿವೆಂಕಟಪ್ಪ, ಆಮ್ ಆದ್ಮಿ ಪಕ್ಷದಿಂದ ಅಶೋಕ್ ಮೃತ್ಯುಂಜಯ ಸ್ಪರ್ಧೆಗೆ ಇಳಿಯುವ ಸಾಧ್ಯತೆ ಇದೆ.

ಮಹದೇವಪುರ





ಅರವಿಂದ ಲಿಂಬಾವಳಿ
ಹಾಲಿ ಶಾಸಕ (ಬಿಜೆಪಿ)

ಹಾಲಿ ಮತದಾರರ ವಿವರ

3,08,859 ಪುರುಷರು
2,63,560 ಮಹಿಳೆಯರು
120 ತೃತೀಯ ಲಿಂಗಿಗಳು
5,72,539 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	1,41,682	1,10,244	76,376
ಕಾಂಗ್ರೆಸ್	1,23,898	1,04,095	63,018
ಜೆಡಿಎಸ್	6,391	5,604	2,107

‘ಪ್ರಜಾವಾಣಿ’ ಅಮೃತ ಮಹೋತ್ಸವ ಕವನ ಸ್ಪರ್ಧೆ ಫಲಿತಾಂಶ

‘ಸಂತರ ಬದುಕು ನಿತ್ಯ ನಿರಂತರ’ ಕವಿತೆ ಪ್ರಥಮ

ವಿಜಯಪುರ: ‘ಪ್ರಜಾವಾಣಿ’ ಅಮೃತ ಮಹೋತ್ಸವದ ಅಂಗವಾಗಿ ಆಲಮೇಲ ತಾಲ್ಲೂಕಿನ ಕಡಣಿಯ ‘ಬೆರಗು’ ಪ್ರಕಾಶನದ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ‘ಶತಮಾನದ ಸಂತ ಸಿದ್ದೇಶ್ವರ ಶ್ರೀ’ ಕವನ ಸ್ಪರ್ಧೆಯಲ್ಲಿ ಬೆಂಗಳೂರಿನ ಡಾ.ಲಕ್ಷ್ಮಣ ವಿ.ಎ ಅವರ ‘ಸಂತರ ಬದುಕು ನಿತ್ಯ ನಿರಂತರ’ ಕವಿತೆ ಪ್ರಥಮ ಸ್ಥಾನ ಪಡೆದುಕೊಂಡಿದೆ.



ಡಾ.ಲಕ್ಷ್ಮಣ ವಿ.ಎ



ಡಾ. ಗುಂಡಣ್ಣ ಕಲಬುರ್ಗಿ



ಸಂತೆಬೆನ್ನೂರು ಫೈಜ್ನಟ್ರಾಜ್

ವಿಜಯಪುರದ ಡಾ.ಗುಂಡಣ್ಣ ಕಲಬುರ್ಗಿ ವಿರಚಿತ ‘ಜಗದಸಿರಿ ಬೆಳಕು’ ಕವಿತೆಯು ದ್ವಿತೀಯ ಹಾಗೂ ದಾವಣಗೆರೆ ಜಿಲ್ಲೆ ಚನ್ನಗಿರಿಯ ಸಂತೆಬೆನ್ನೂರು ಫೈಜ್ನಟ್ರಾಜ್ ಅವರ ‘ಮನುಜ ಕುಲದ ಘಮ’ ಎಂಬ ಕವಿತೆ ತೃತೀಯಬಹುಮಾನಕ್ಕೆ ಆಯ್ಕೆಯಾಗಿದೆ.

ಪ್ರಥಮ ಬಹುಮಾನ ₹ 5 ಸಾವಿರ, ದ್ವಿತೀಯ ₹ 3 ಸಾವಿರ ಹಾಗೂ ತೃತೀಯ ಬಹುಮಾನ ₹ 2 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಈ ಕವನ ಸ್ಪರ್ಧೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಒಟ್ಟು 327 ಕವಿತೆಗಳು ಬಂದಿದ್ದವು. ಧಾರವಾಡದ ಕವಿ, ವಿಮರ್ಶಕ ಡಾ. ನಿಂಗಪ್ಪ ಮುದೇನೂರು ಹಾಗೂ ವಿಜಯಪುರದ ಸಾಹಿತಿ ಶಂಕರ ಬೈಚಬಾಳ ಅವರು ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದರು.

ಫೆ.16ರಂದು ಬೆಳಿಗ್ಗೆ 10ಕ್ಕೆ ಆಲಮೇಲದಲ್ಲಿ ನಡೆಯುವ ‘ಪ್ರಜಾವಾಣಿ’ ಅಮೃತ ಸಾಹಿತ್ಯೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಹೈಟೆನ್ಷನ್ ವೈರ್ ಕೆಳಗೆ 7,722 ಕಟ್ಟಡ: ನೋಟಿಸ್ ಜಾರಿ

ಬೆಂಗಳೂರು: ಹೈಟೆನ್ಷನ್ ವೈರ್‌ಗಳ ಕೆಳಗೆ ಮತ್ತು ಪಕ್ಕದಲ್ಲೇ ಮನೆ ನಿರ್ಮಿಸಿದ 7,722 ಮಂದಿಗೆ ಕೆಪಿಟಿಸಿಎಲ್ ನೋಟಿಸ್ ನೀಡಿದೆ.

ಚಾಮುಂಡಿ ನಗರದ ಫ್ಯಾಕ್ಟರಿ ಬಳಿ ಗಾಳಿಪಟ ಹಾರಿಸಲು ತೆರಳಿದ್ದಾಗ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಬಾಲಕನೊಬ್ಬ ಜ.18ರಂದು ಮೃತಪಟ್ಟಿದ್ದ. ಇದಕ್ಕೂ ಮುನ್ನ ಡಿ.1ರಂದು ಮಹಾಲಕ್ಷ್ಮಿ ಲೇಔಟ್‌ನಲ್ಲಿ ಪಾರಿವಾಳ ಹಿಡಿಯಲು ಹೋಗಿ ಹೈಟೆನ್ಷನ್ ವಿದ್ಯುತ್ ವೈರ್ ತಗುಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದರು. ಈ ಘಟನೆಗಳ ಬಳಿಕ ಕೆಪಿಟಿಸಿಎಲ್ ಅನಧಿಕೃತ ಕಟ್ಟಡಗಳ ಬಗ್ಗೆ ಜನವರಿ ತಿಂಗಳಲ್ಲಿ ಸಮೀಕ್ಷೆ ಕಾರ್ಯ ಕೈಗೊಂಡಿತ್ತು.

ಹೈಟೆನ್ಷನ್ ವೈರ್ (ಇಎಚ್‌ವಿ) ಹಾದು ಹೋಗಿರುವ ಕೆಳಗೆ ಮತ್ತು ಅತಿ ಸಮೀಪದಲ್ಲೇ ಮನೆಗಳನ್ನು ಕಟ್ಟಿಕೊಂಡಿರುವ ಅನಧಿಕೃತ ಕಟ್ಟಡಗಳನ್ನು ಕೆಪಿಟಿಸಿಎಲ್ ಗುರುತಿಸಿದೆ. ದೇವನಹಳ್ಳಿ, ಎಲೆಕ್ಟ್ರಾನಿಕ್ ಸಿಟಿ, ನೆಲಮಂಗಲ, ಹೆಬ್ಬಾಳ, ಹೂಡಿ ಸೇರಿದಂತೆ ನಗರದಾದ್ಯಂತ ಕೆಪಿಟಿಸಿಎಲ್ ಸಮೀಕ್ಷೆ ನಡೆಸಿದ್ದು, 7,722 ಅನಧಿಕೃತ ಕಟ್ಟಡಗಳನ್ನು ಗುರುತಿಸಿದೆ.

‘ಹೈಟೆನ್ಷನ್ ವೈರ್ ಮಾರ್ಗದ ಕೆಳಗೆ ಮತ್ತು ಪಕ್ಕದಲ್ಲೇ ಇರುವ ಕಟ್ಟಡಗಳ ಮಾಲೀಕರಿಗೆ ನೋಟಿಸ್‌ಗಳನ್ನು ನಿರಂತರವಾಗಿ ನೀಡಲಾಗಿದೆ. ಜತೆಗೆ, ಬಿಬಿಎಂಪಿ, ಬೆಸ್ಕಾಂ ಹಾಗೂ ಸಂಬಂಧಿಸಿದ ಪೊಲೀಸ್ ಠಾಣೆಗಳಿಗೂ ಈ ಬಗ್ಗೆ ಮಾಹಿತಿ ನೀಡಲಾಗಿದೆ. ಹೆಟೆನ್ಷನ್ ವೈರ್‌ನಿಂದಾಗುವ ಅಪಾಯಗಳು ಮತ್ತು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವಂತೆ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನಗಳನ್ನು ಸಹ ಮಾಡಲಾಗಿದೆ’ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕಸಾಪ ದತ್ತಿ ಪ್ರಶಸ್ತಿಗೆ ಪುಸ್ತಕ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಡಾ.ಎಚ್. ವಿಶ್ವನಾಥ್ ಮತ್ತು ಇಂದಿರಾ ದತ್ತಿ ಪ್ರಶಸ್ತಿ’ಗೆ ಪುಸ್ತಕಗಳನ್ನು ಆಹ್ವಾನಿಸಲಾಗಿದೆ. ಈ ದತ್ತಿ ಪ್ರಶಸ್ತಿಯು ಅಂಧ ಲೇಖಕರಿಗೆ ಮೀಸಲಾಗಿದೆ.

ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಅಂಧ ಲೇಖಕರು ಸಾಹಿತ್ಯದ ಯಾವುದೇ ಪ್ರಕಾರದಲ್ಲಿ ರಚಿಸಿದ ಕೃತಿಯನ್ನು ಫೆ.28ರೊಳಗೆ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಕಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ತಜ್ಞರ ಜತೆಗೆ ಸಭೆ ನಡೆಸಿದ ಐಟಿ–ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ

ಸೋಂಕಿನ ಅಪಾಯ ತಡೆಗೆ ‘ಸನ್ನದ್ಧತಾ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನುಷ್ಯರು, ಪ್ರಾಣಿ–ಪಕ್ಷಿಗಳು ಹಾಗೂ ಪರಿಸರಕ್ಕೆ ತಗಲುವ ಸೋಂಕುಗಳಿಂದ ಉಂಟಾಗುವ ಅಪಾಯಗಳನ್ನು ಸಮರ್ಥವಾಗಿ ಎದುರಿಸಲು ಸರ್ಕಾರ ‘ಸನ್ನದ್ಧತಾ ಕೇಂದ್ರ’ ಸ್ಥಾಪನೆಗೆ ಚಿಂತನೆ ನಡೆಸಿದೆ.

ಈ ಸಂಬಂಧ ಐಟಿ- ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ನಗರದಲ್ಲಿ ಗುರುವಾರ ತಜ್ಞರ ಜತೆಗೆ ಸಭೆ ನಡೆಸಿದರು. ಲಸಿಕೆ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಭಾರತ್ ಬಯೋಟೆಕ್ ಹಾಗೂ ಅಮೆರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.



ಸನ್ನದ್ಧತಾ ಕೇಂದ್ರ ಸ್ಥಾಪನೆ ಸಂಬಂಧ ನಡೆದ ಸಭೆಯಲ್ಲಿ ತಜ್ಞರೊಂದಿಗೆ ಡಾ.ಸಿ.ಎನ್. ಅಶ್ವತ್ಥನಾರಾಯಣ ಚರ್ಚಿಸಿದರು.

ಈ ಕೇಂದ್ರ ಸ್ಥಾಪನೆ ಸಂಬಂಧ ಸರ್ಕಾರವು ಭಾರತ್ ಬಯೋಟೆಕ್ ಮತ್ತು ಅಮೆರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದೊಂದಿಗೆ ಸಹಭಾಗಿತ್ವ ಮಾಡಿಕೊಳ್ಳುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ‘ವಿಸ್ಕಾನ್ಸಿನ್ ತಜ್ಞರು ನಡೆಸುವ ಅಧ್ಯಯನಗಳನ್ನು ವಿನಿಮಯ ಮಾಡಿಕೊಳ್ಳಲು ಈ ಸಹಭಾಗಿತ್ವದಿಂದ ಸಾಧ್ಯವಾಗುತ್ತದೆ’ ಎಂಬ ಸಲಹೆಯನ್ನು ತಜ್ಞರು ನೀಡಿದರು. ‘ಜನರ ಆರೋಗ್ಯ ರಕ್ಷಣೆಗೆ ಹಾಗೂ ಸುಸ್ಥಿರ ಪರಿಸರ ನಿರ್ಮಾಣಕ್ಕೆ ಪೂರಕವಾಗಿ ವ್ಯವಸ್ಥೆಗಳನ್ನು ಮಾಡಿಕೊಡಲು ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಲಿದೆ’ ಎಂದು ಡಾ.ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದರು.

ಭಾರತ್ ಬಯೋಟೆಕ್ ಸಂಸ್ಥೆಯ ಸಹ ಸಂಸ್ಥಾಪಕ ಕೃಷ್ಣ, ವ್ಯವಸ್ಥಾಪಕ ನಿರ್ದೇಶಕ ರವಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ-ಕಾರ್ಯದರ್ಶಿ ರಮಣರೆಡ್ಡಿ, ಕ್ಯಾನ್ಸರ್ ತಜ್ಞರೂ ಆದ ರಾಜ್ಯ ಸರ್ಕಾರದ ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್‌ನ ಸದಸ್ಯ ಡಾ.ವಿಶಾಲ್ ರಾವ್, ಬಿಬಿಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಜಿತೇಂದ್ರ ಕುಮಾರ್, ವಿಸ್ಕಾನ್ಸಿನ್-ಮ್ಯಾಡಿಸನ್ ವಿಶ್ವವಿದ್ಯಾಲಯ ನಿಯೋಗದ ಜೂಲಿಯಾ ಫ್ರಾಂಗಲ್, ಮಾಜ್ ಫಿಶರ್, ಮ್ಯಾಟ್ ಗ್ರೀನ್‌ಬರ್ಗ್ ಇದ್ದರು.

ಬೆಂಗಳೂರು ರೇಸ್

ಗೋಲ್ಡನ್ ಓಕ್ಸ್ ಗೆಲ್ಲುವ ನಿರೀಕ್ಷೆ

ಸ್ಪ್ರಿಂಟರ್ಸ್ ಟ್ರಯಲ್ ಸ್ಟೇಕ್ಸ್ (ಗ್ರೇಡ್-3) ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡನ್ ಓಕ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಕ್ಯಾಶ್ ಔಟ್ 2, ಅನ್ನೆ ಬೊಲೀನ್ 1, ಅಲ್ಟಿಮೇಟ್ ಬಾಯ್ಸ್ 7
2ನೇ ರೇಸ್: ಟರ್ಕೋಮ್ಯಾನ್ 5, ಕ್ವೀನ್ ರೆಗ್ನಂಟ್ 4, ಲಿಕರ್ಗಸ್ 8
3ನೇ ರೇಸ್: ಏರ್ ಬ್ಲಾಸ್ಟ್ 2, ಪ್ರಿನ್ಸಸ್ ಜಾಸ್ಮೀನ್ 7, ಆಕ್ಟಿವೇಟೆಡ್ 8
4ನೇ ರೇಸ್: ಎಲ್ವೆನರ್ 1, ಸೀಕಿಂಗ್ ದಿ ಸ್ಟಾರ್ಸ್ 10, ರಾಯಲ್ ಮೈಸೂರು 3
5ನೇ ರೇಸ್: ಎಂಪೈರ್ ಆಫ್ ಡ್ರೀಮ್ಸ್ 6, ಆಬ್‌ವೇರ್ 2, ಸೋಶಿಯಬ್ 1
6ನೇ ರೇಸ್: ಶುಭಂಕರ್ 3, ಝುರಾವಿಚ್ 8, ಗ್ಯಾಲೋಪಿಂಗ್ ಅಹೆಡ್ 9
7ನೇ ರೇಸ್: ಗೋಲ್ಡನ್ ಓಕ್ಸ್ 4, ಅಗ್ನೋಸ್ಟಿಕ್ 1, ಆಲ್ ಅಟ್ರಾಕ್ಟಿವ್ 2
8ನೇ ರೇಸ್: ದಿ ರಿಪಬ್ಲಿಕ್ ಪವರ್ 7, ಸ್ಟಾರ್ಸ್ ಅಬೌ 5, ಸ್ಟಾರ್ ಅಡ್ಮಿರಲ್ 4
9ನೇ ರೇಸ್: ಸೇಕ್ರೆಡ್ ಕ್ರಿಯೇಟರ್ 1, ಕಂಟ್ರೆಸ್ ಜ್ಯುವೆಲ್ 10, ಫೈರ್ ಫಿಂಚ್ 2

ಉತ್ತಮ ಬೆಟ್: ಕ್ಯಾಶ್ ಔಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	3,4,5	6,7,8	7,8,9

ರಾಜಾಜಿನಗರ: ಸ್ವತಂತ್ರ್ಯ ಅಭ್ಯರ್ಥಿಯಾಗಿ ಡಾ. ಟಿ.ಎಚ್. ಆಂಜನಪ್ಪ ಸ್ಪರ್ಧೆ

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜಾಜಿನಗರದ ಕ್ಷೇತ್ರದಿಂದ ಸ್ವತಂತ್ರ್ಯ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುವುದಾಗ ಡಾ. ಟಿ.ಎಚ್. ಆಂಜನಪ್ಪ ಹೇಳಿದರು.

‘ಸಮಾಜ ಸುಧಾರಕರು, ಭ್ರಷ್ಟಾಚಾರದಿಂದ ದೂರ ಇರುವವರು ಚುನಾವಣೆಯಲ್ಲಿ ಸ್ಪರ್ಧಿಸಬೇಕು. ಕೋವಿಡ್ ಸಂದರ್ಭದಲ್ಲಿ ಜನರಿಗೆ ನೀಡಿದ ಧೈರ್ಯದಂತೆ ಜನರು ಕೂಡ ಈ ಸಂದರ್ಭದಲ್ಲಿ ನನಗೆ ಧೈರ್ಯ ತುಂಬುತ್ತಾರೆ ಎಂಬ ಭರವಸೆಯಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ’ ಎಂದು ಗುರುವಾರ ತಿಳಿಸಿದರು.

ಶಿವಕುಮಾರ್ ಜೆಡಿಯು ಅಭ್ಯರ್ಥಿ

‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸಂಯುಕ್ತ ಜನತಾ ದಳ (ಜೆಡಿಯು) ಪಕ್ಷದ ರಾಜಾಜಿನಗರದ ಕ್ಷೇತ್ರದ ಅಭ್ಯರ್ಥಿಯಾಗಿ ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ’ ಎಂದು ಪಕ್ಷದ ಸಂಸದೀಯ ಮಂಡಳಿಯ ಅಧ್ಯಕ್ಷ ಚಂದ್ರಶೇಖರ್ ಗಂಗೂರ್ ಹೇಳಿದರು.

‘ಜೆಡಿಯು ಪಕ್ಷವು 2023ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ 224 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಿರುಕುಳ ಆರೋಪ: ವಿಷ ಕುಡಿದು ಠಾಣೆಗೆ ಬಂದ ಡೆಲಿವರಿ ಬಾಯ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ವಿರುದ್ಧ ಪ್ರಕರಣ ದಾಖಲಾಗುತ್ತಿರುವ ಮಾಹಿತಿ ತಿಳಿಯುತ್ತಿದ್ದಂತೆ ವಿಷ ಕುಡಿದು ಚಂದ್ರಾ ಲೇಔಟ್ ಠಾಣೆಗೆ ಬಂದಿದ್ದ ಡೆಲಿವರಿ ಬಾಯ್ ಅನಿಲ್ (30) ಎಂಬುವವರನ್ನು ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದಾರೆ.

‘ಚಂದ್ರಾ ಲೇಔಟ್ ನಿವಾಸಿ ಅನಿಲ್ ಅವರನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆತ್ಮಹತ್ಯೆಗೆ ಯತ್ನಿಸಿದ ಆರೋಪದಡಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿವಾಹಿತ ಮಹಿಳೆಗೆ ಕಿರುಕುಳ: ‘ಸ್ಥಳೀಯ ನಿವಾಸಿಯಾಗಿರುವ 40 ವರ್ಷದ ವಿವಾಹಿತ ಮಹಿಳೆ ಜೊತೆ ಹಲವು ವರ್ಷಗಳಿಂದ ಅನಿಲ್ ಅವರು ಸಲುಗೆ ಇಟ್ಟುಕೊಂಡಿದ್ದರು. ಈ ಸಂಗತಿ ಕೆಲ ತಿಂಗಳ ಹಿಂದೆಯಷ್ಟೇ ಮಹಿಳೆಯ ಪತಿಗೆ ಗೊತ್ತಾಗಿತ್ತು. ಮಹಿಳೆಯನ್ನು ಠಾಣೆಗೆ ಕರೆತಂದಿದ್ದ ಪತಿ, ದೂರು ಕೊಡಿಸಿದ್ದರು. ಮಹಿಳೆ ತಂಟೆಗೆ ಹೋಗದಂತೆ ಅನಿಲ್‌ಗೆ ಎಚ್ಚರಿಕೆ ನೀಡುವಂತೆ ಕೋರಿದ್ದರು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಎಚ್ಚರಿಕೆ ನೀಡಿದ ಬಳಿಕವೂ ಅನಿಲ್, ಮಹಿಳೆ ಜೊತೆ ಸಂಪರ್ಕ ಸಾಧಿಸಲು ಯತ್ನಿಸಿದ್ದರು. ತಮ್ಮೊಂದಿಗೆ ಸಲುಗೆ ಮುಂದುವರಿಸುವಂತೆ ಪೀಡಿಸುತ್ತಿದ್ದರು. ಮಹಿಳೆ ಎಲ್ಲಿಗಾದರೂ ಹೋದರೆ ಹಿಂಬಾಲಿಸುತ್ತಿದ್ದರು. ರಸ್ತೆಯಲ್ಲಿ ಅಡ್ಡಗಟ್ಟಿ ಕಿರುಕುಳ ನೀಡುತ್ತಿದ್ದರು. ಬೇಸತ್ತ ಮಹಿಳೆ, ಅನಿಲ್ ವಿರುದ್ಧ ದೂರು ನೀಡಲು ಗುರುವಾರ ಠಾಣೆಗೆ ಬಂದಿದ್ದರು’ ಎಂದು ತಿಳಿಸಿದರು.

‘ತಮ್ಮ ವಿರುದ್ಧ ಪ್ರಕರಣ ದಾಖಲಾಗುತ್ತಿರುವ ಮಾಹಿತಿ ತಿಳಿಯುತ್ತಿದ್ದಂತೆ ಠಾಣೆಗೆ ಅನಿಲ್ ಬಂದಿದ್ದರು. ಅವರನ್ನು ಪಿಎಸ್‌ಐ ಮಾತನಾಡಿಸಿದ್ದರು. ‘ನನ್ನ ವಿರುದ್ಧ ಪದೇ ಪದೇ ಸುಳ್ಳು ದೂರು ನೀಡಲಾಗುತ್ತಿದೆ. ಜೀವನವೇ ಸಾಕಾಗಿದ್ದು, ಸಾಯುವುದಕ್ಕಾಗಿ ವಿಷ ಕುಡಿದು ಬಂದಿದ್ದೇನೆ’ ಎಂದು ಅನಿಲ್ ಹೇಳಿದ್ದರು. ಎಚ್ಚೆತ್ತ ಪಿಎಸ್‌ಐ ಹಾಗೂ ಸಿಬ್ಬಂದಿ, ಅನಿಲ್ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಪ್ರಾಣಕ್ಕೆ ಅಪಾಯವಿಲ್ಲವೆಂದು ವೈದ್ಯರು ಹೇಳಿದ್ದಾರೆ’ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

‘ಆರೋಗ್ಯದಲ್ಲಿ ಸಂಪೂರ್ಣ ಚೇತರಿಕೆ ಕಂಡುಬಂದ ನಂತರ ಅನಿಲ್ ಹೇಳಿಕೆ ಪಡೆಯಲಾಗುವುದು. ಸುಳ್ಳು ದೂರಿನ ಬಗ್ಗೆ ಹೇಳಿಕೆಯಲ್ಲಿ ಪ್ರಸ್ತಾಪಿಸಿದರೆ, ಪ್ರತ್ಯೇಕ ಪ್ರಕರಣ ದಾಖಲಿಸಲಾಗುವುದು’ ಎಂದು ಹೇಳಿದರು.

ವಾಲ್ಮೀಕಿ ಜಾತ್ರೆ: ಮೂವರು ಪೊಲೀಸರಿಗೆ ಗಾಯ

ಸುದೀಪ್ ಗೈರು: ಅಭಿಮಾನಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ ಜಿಲ್ಲೆ): ಜಿಲ್ಲೆಯ ರಾಜನಹಳ್ಳಿಯಲ್ಲಿ ವಾಲ್ಮೀಕಿ ಜಾತ್ರೆ ಅಂಗವಾಗಿ ಗುರುವಾರ ಸಂಜೆ ನಡೆದ ಸಮಾರಂಭಕ್ಕೆ ನಟ ಕಿಚ್ಚ ಸುದೀಪ್ ಗೈರಾಗಿದ್ದರಿಂದ ಬೇಸರಗೊಂಡ ಅಭಿಮಾನಿಗಳು ವೇದಿಕೆ ಮುಂಭಾಗದ ಕುರ್ಚಿಗಳನ್ನು ಮುರಿದು ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆ ಬಳಿ ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ನೆಲಕ್ಕುರುಳಿಸಿದ ಅಭಿಮಾನಿಗಳನ್ನು ನಿಯಂತ್ರಿಸಲು ಮುಂದಾದ ಪೊಲೀಸರ ಪೈಕಿ ಮೂವರು ಗಾಯಗೊಂಡರು.



ಹರಿಹರದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಾತ್ರೆಗೆ ನಟ ಕಿಚ್ಚ ಸುದೀಪ್ ಗೈರು ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಅಭಿಮಾನಿಗಳಿಂದ ಉಂಟಾದ ನೂಕುನುಗ್ಗಲನ್ನು ಹತೋಟಿಗೆ ತರಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು —ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಕಾರ್ಯಕ್ರಮಕ್ಕೆ ಸುದೀಪ್ ಅವರನ್ನು ಆಹ್ವಾನಿಸಿದ್ದರಿಂದ ಅಪಾರ ಸಂಖ್ಯೆಯ ಅಭಿಮಾನಿಗಳು ಮಹರ್ಷಿ ವಾಲ್ಮೀಕಿ ಪೀಠದ ಸಭಾಂಗಣದೆದುರು ನೆರೆದಿದ್ದರು. ಬೆಳಿಗ್ಗೆ ಮತ್ತು ಮಧ್ಯಾಹ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲೂ ಅಭಿಮಾನಿಗಳು ಸುದೀಪ್ ಪರ ಜೈಕಾರ ಕೂಗಿ ಕೇಕೆ ಹಾಕಿದ್ದರು. ಮಹರ್ಷಿ ವಾಲ್ಮೀಕಿ ಪೀಠದ ಪ್ರಸನ್ನಾನಂದ ಸ್ವಾಮೀಜಿ ಆಗಾಗ ಎಚ್ಚರಿಕೆ ನೀಡಿ ಅಭಿಮಾನಿಗಳನ್ನು ಸುಮ್ಮನಾಗಿಸುತ್ತಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾಷಣ ಪೂರ್ಣಗೊಳಿಸಿ ತೆರಳಿದ ನಂತರವೂ ಸುದೀಪ್ ಬಾರದ್ದರಿಂದ ತಾಳ್ಮೆ ಕಳೆದುಕೊಂಡ ಅಭಿಮಾನಿಗಳು ಬ್ಯಾರಿಕೇಡ್‌ಗಳು ನೆಲಕ್ಕುರುಳಿಸಿ ವೇದಿಕೆಯತ್ತ ನುಗ್ಗತೊಡಗಿದರು. ಪ್ಲಾಸ್ಟಿಕ್ ಕುರ್ಚಿಗಳನ್ನು ಪುಡಿ ಗಟ್ಟಿದ್ದರಿಂದ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಬೇಕಾಯಿತು. ಬ್ಯಾರಿಕೇಡ್‌ಗಳನ್ನು ಎಸೆದಿದ್ದರಿಂದ ಗಾಯಗೊಂಡ ಮೂವರು ಪೊಲೀಸರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಬೆಂಗಳೂರಿನಲ್ಲಿ ಆಯೋಜಿಸಿರುವ ಏರ್‌ಶೋ ಕಾರಣ ಹೆಲಿಕಾಪ್ಟರ್ ಹಾರಾಟಕ್ಕೆ ಅವಕಾಶ ದೊರೆಯದೇ ಸುದೀಪ್ ಜಾತ್ರಾ ಸಮಾರಂಭಕ್ಕೆ ಬರಲು ಸಾಧ್ಯವಾಗಿಲ್ಲ ಎಂದು ಆಯೋಜಕರು ಘೋಷಿಸಿದ್ದರಿಂದ ಅಭಿಮಾನಿಗಳು ನಿರಾಸೆಯಿಂದ ವಾಪಸ್ಸಾದರು.

₹ 1.34 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ವಿದೇಶಿ ಪ್ರಜೆಗಳು ಸೇರಿದಂತೆ 11 ಆರೋಪಿಗಳನ್ನು ಬಂಧಿಸಿದ್ದಾರೆ. ₹ 1.34 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ತಾಂಜೇನಿಯಾದ ಮಹಿಳೆ ಕೆರ್ರಿ ಸರಾ, ಕೀನ್ಯಾದ ಟಿಬೇರಿಯಸ್, ಎ.ಎಚ್. ಸಚಿನ್, ಮೊಹಮ್ಮದ್ ರಿಜ್ವಾನ್, ವಿ.ಆರ್. ರಾಗೇಶ್, ಎ.ಎಚ್. ಶಾಹುಲ್, ಪ್ರಶಾಂತ್ ಹಾಗೂ ಸಿದ್ಧಾಂತ್ ಬಾರ್ದೋಲಿಯಾ ಬಂಧಿತರು. ತನಿಖೆ ದೃಷ್ಟಿಯಿಂದ ಮೂವರು ಬಂಧಿತರ ಹೆಸರನ್ನು ಪೊಲೀಸರು ಬಹಿರಂಗಪಡಿಸಿಲ್ಲ.

‘ಮಡಿವಾಳ, ಬಾಣಸವಾಡಿ, ಸುದ್ದಗುಂಟೆಪಾಳ್ಯ, ಕೆ.ಆರ್.ಪುರ ಹಾಗೂ ಬಂಡೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಸಿಸಿಬಿ ಕಾರ್ಯಾಚರಣೆ ನಡೆಸಿದೆ. ಎಂಡಿಎಂಎ ಮಾತ್ರೆಗಳು, ಎಕ್ಸ್‌ಟೆಸಿ ಮಾತ್ರೆಗಳು, ಎಲ್‌ಎಸ್‌ಡಿ ಕಾಗದ ಚೂರುಗಳನ್ನು ಜಪ್ತಿ ಮಾಡಿದೆ’ ಎಂದು ಕಮಿಷನರ್ ಪ್ರತಾಪ್ ರೆಡ್ಡಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಬಂಧಿತರಲ್ಲಿ ಕೇರಳ, ಮೇಘಾಲಯ ಹಾಗೂ ನಗರದ ನಿವಾಸಿಗಳಿದ್ದಾರೆ. ತಮ್ಮದೇ ಜಾಲ ರೂಪಿಸಿಕೊಂಡಿದ್ದ ಆರೋಪಿಗಳು, ಹಣ ಸಂಪಾದನೆಗಾಗಿ ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದರು. ಕೆಲವು ಕಾಲೇಜು ವಿದ್ಯಾರ್ಥಿಗಳು, ಕೆಲ ಸಾಫ್ಟ್‌ವೇರ್ ಕಂಪನಿಗಳ ಉದ್ಯೋಗಿಗಳು ಹಾಗೂ ಕಾರ್ಮಿಕರಿಗೆ ಡ್ರಗ್ಸ್ ಮಾರುತ್ತಿದ್ದರು’ ಎಂದು ಹೇಳಿದರು.

ಕಾಲೇಜು ಬಿಟ್ಟವರಿಂದ ಮಾರಾಟ: ‘ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಕಾಲೇಜು ಬಿಟ್ಟ ಯುವಕರನ್ನು ತಮ್ಮತ್ತ ಸೆಳೆಯುತ್ತಿದ್ದ ಆರೋಪಿಗಳು, ಅವರನ್ನೇ ಮಧ್ಯವರ್ತಿಗಳನ್ನಾಗಿ ಮಾಡಿಕೊಳ್ಳುತ್ತಿದ್ದರು. ಕಮಿಷನ್ ರೂಪದಲ್ಲಿ ಅವರಿಗೆ ಹಣ ನೀಡುತ್ತಿದ್ದರು’ ಎಂದು ಪ್ರತಾಪ್ ರೆಡ್ಡಿ ಅವರು ತಿಳಿಸಿದರು.

‘ಡ್ರಗ್ಸ್ ಪೊಟ್ಟಣವನ್ನು ನಿರ್ಜನ ಪ್ರದೇಶದಲ್ಲಿ ಇರಿಸುತ್ತಿದ್ದ ಆರೋಪಿಗಳು, ಗೂಗಲ್ ಮ್ಯಾಪ್ ಸಮೇತ ಗ್ರಾಹಕರಿಗೆ ಲೊಕೇಶನ್ ಕಳುಹಿಸುತ್ತಿದ್ದರು. ಗ್ರಾಹಕರು ಸ್ಥಳಕ್ಕೆ ಬಂದು ಪೊಟ್ಟಣ ತೆಗೆದುಕೊಂಡು ಹೋಗುತ್ತಿದ್ದರು. ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡುತ್ತಿದ್ದರು’ ಎಂದು ಅವರು ಹೇಳಿದರು.

ಆನೆದಂತಗಳ ಕಲಾಕೃತಿ ಜಪ್ತಿ: ಸೆರೆ

ಬೆಂಗಳೂರು: ಆನೆದಂತಗಳಿಂದ ತಯಾರಿಸಿದ್ದ ವಸ್ತುಗಳನ್ನು ಮಾರಲು ಯತ್ನಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಐಡಿ ಅರಣ್ಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನದ ಲೋಕೇಶ್ ಜಾದೂ (44), ಮನಮೋಹನ್ ಚೌಹಾಣ್ (43), ಗುಲಾಬ್ ಚಂದ್ ಪ್ರಜಾಪತ್ (40) ಹಾಗೂ ಮಹಾರಾಷ್ಟ್ರದ ದಿನೇಶ್ ಬಾಳಸಾಹೇಬ್ ನರಸೋಡೆ (34) ಬಂಧಿತರು. ಆನೆದಂತಗಳಿಂದ ಮಾಡಿದ್ದ ಎರಡು ಕಲಾಕೃತಿ, 7 ಉಂಗುರ ಹಾಗೂ ಪಗಡೆಯಾಟದ ಎರಡು ದಾಳಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಐಡಿ ಪೊಲೀಸರು ಹೇಳಿದರು.

‘ಪ್ರಾಚೀನ ಸ್ಥಳಗಳು, ಮನೆಗಳಿಗೆ ಆರೋಪಿ ಲೋಕೇಶ್ ಭೇಟಿ ನೀಡುತ್ತಿದ್ದ. ಅಲ್ಲಿ ಸಿಕ್ಕ ವಸ್ತುಗಳನ್ನು ಖರೀದಿಸಿ, ಸಹಚರರ ಮೂಲಕ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ’ ಎಂದು ತಿಳಿಸಿದರು.

ಬಲ್ಗೇರಿಯಾ ಸೌಂದರ್ಯ ಸ್ಪರ್ಧೆ ಮೋಸದ ಜಾಲ: ಅಪೂರ್ವ

ಬೆಂಗಳೂರು: ‘ಕೆಲವು ಮಿಸಸ್ ಯೂನಿವರ್ಸ್ ಸ್ಪರ್ಧೆಗಳು ಮೋಸದ ಜಾಲಗಳಾಗಿವೆ. ಬಲ್ಗೇರಿಯಾದಲ್ಲಿ ಮಿಸಸ್ ಯೂನಿವರ್ಸ್ ಸ್ಪರ್ಧೆ ನಡೆಯಿತು. ಅದರಲ್ಲಿ ಪಾಲ್ಗೊಳ್ಳಲು ಹೋಗಿ ನಾನು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಿ ಬಂತು. ಅದೊಂದು ದಂಧೆ ಎನ್ನುವುದು ಆಮೇಲೆ ಗೊತ್ತಾಯಿತು’ ಎಂದು ಮೈಸೂರಿನ ಅಪೂರ್ವ ರೈ ಆರೋಪಿಸಿದರು.

‘ಮಹಿಳಾ ಸಬಲೀಕರಣದ ಹೆಸರಿನಲ್ಲಿ ಜ. 30ರಿಂದ ಫೆ 5ರವರೆಗೆ ಬಲ್ಗೇರಿಯಾದಲ್ಲಿ 45ನೇ ಮಿಸಸ್ ಯೂನಿವರ್ಸ್ ಎಂಬ ಸ್ಪರ್ಧೆ ನಡೆದಿತ್ತು. ಅದು ನಿಜವಾದ ಕಲಾ ಪ್ರದರ್ಶನವಾಗಿರಲಿಲ್ಲ’ ಎಂದು ಗುರುವಾರ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಅದೊಂದು ಪೂರ್ವಯೋಜಿತ ಕಾರ್ಯಕ್ರಮವಾಗಿತ್ತು. ಈ ಸ್ಪರ್ಧೆ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿಯೇ ಮೊದಲ ಮೂರು ಸ್ಥಾನಗಳನ್ನು ಮಾರಾಟ ಮಾಡಲಾಗಿತ್ತು. ₹3 ಲಕ್ಷ ಪ್ರವೇಶ ಶುಲ್ಕವನ್ನು ಆನ್‌ಲೈನ್‌ನಲ್ಲಿ ಕಟ್ಟಿ ನಾನು ಪಾಲ್ಗೊಂಡಿದ್ದೆ. ಬಲ್ಗೇರಿಯಾಕ್ಕೆ ಹೋಗಿ ಬರಲು ಒಟ್ಟು ₹12 ಲಕ್ಷ ಖರ್ಚಾಯಿತು’ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸ್ಪರ್ಧೆಯಲ್ಲಿ ತಮಗೆ ನೀಡಿದ್ದ ಮಿಸಸ್ ಯೂನಿವರ್ಸ್ ಟಾಪ್ ಏಷ್ಯಾ ಮತ್ತು ಬೆಸ್ಟ್ ಬಾಡಿ–ಸಬ್ ಟೈಟಲ್ಸ್ ಹಿಂದಿರುಗಿಸುವುದಾಗಿಯೂ ಅವರು ಹೇಳಿದರು.

ನಟಿ ಅಭಿನಯ ಪತ್ತೆಗಾಗಿ ಲುಕ್‌ಔಟ್ ನೋಟಿಸ್

ಬೆಂಗಳೂರು: ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ನಟಿ ಅಭಿನಯ (52) ಪತ್ತೆಗಾಗಿ ಚಂದ್ರಾ ಲೇಔಟ್ ಠಾಣೆ ಪೊಲೀಸರು ಲುಕ್‌ಔಟ್ ನೋಟಿಸ್ ಹೊರಡಿಸಿದ್ದಾರೆ.

ಅತ್ತಿಗೆ ಲಕ್ಷ್ಮೀದೇವಿ ಅವರಿಗೆ ವರದಕ್ಷಿಣೆ ಕಿರುಕುಳ ನೀಡಿ ಜೀವ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಅಭಿನಯ, ಅವರ ತಾಯಿ ಜಯಮ್ಮ (74) ಹಾಗೂ ಅಣ್ಣ ಚೆಲುವರಾಜು (54) ವಿರುದ್ಧ 2002ರಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ 8ನೇ ಎಸಿಎಂಎಂ ನ್ಯಾಯಾಲಯ, ಜೈಲು ಶಿಕ್ಷೆ ವಿಧಿಸಿ 2010ರ ಜನವರಿ 5ರಂದು ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿದ್ದ ಆರೋಪಿಗಳು, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಚ್.ಬಿ. ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ, 8ನೇ ಎಸಿಎಂಎಂ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು.

ಮೋದಿ ಪದವಿ ದಾಖಲೆ ಬಹಿರಂಗ: ತೀರ್ಪು ಕಾಯ್ದಿರಿಸಿದ ಗುಜರಾತ್ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ಕುರಿತು ಮಾಹಿತಿ ನೀಡುವಂತೆ ಕೇಂದ್ರ ಮಾಹಿತಿ ಆಯೋಗವು (ಸಿಐಸಿ) ನೀಡಿದ್ದ ನಿರ್ದೇಶ ಪ್ರಶ್ನಿಸಿ ಗುಜರಾತ್ ವಿಶ್ವವಿದ್ಯಾಲಯ (ಜಿಯು) ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಗುಜರಾತ್ ಹೈಕೋರ್ಟ್ ಗುರುವಾರ ಕಾಯ್ದಿರಿಸಿದೆ.

ಅರ್ಜಿಯ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಮೂರ್ತಿ ಬಿರೇನ್ ವೈಷ್ಣವ್ ಅವರಿದ್ದ ಏಕಸದಸ್ಯ ಪೀಠವು ಆದೇಶವನ್ನು ಕಾಯ್ದಿರಿಸಿತು.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಮೋದಿ ಅವರ ಪದವಿ ಕುರಿತು ಮಾಹಿತಿಯನ್ನು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ನೀಡುವಂತೆ ಹೈಕೋರ್ಟ್ ವಿ.ವಿಗೆ ನಿರ್ದೇಶನ ನೀಡಿತ್ತು. ಅದಲ್ಲದೇ, ಮೋದಿ ಅವರ ಪದವಿ ಮತ್ತು ಸ್ನಾತ್ತಕೋತ್ತರ ಪದವಿಯ ದಾಖಲೆಗಳನ್ನು ಹುಡುಕಲು ಸಹಾಯ ಮಾಡುವ ನಿಟ್ಟಿನಲ್ಲಿ ಅವರ ಪದವಿ ಕುರಿತ ಮಾಹಿತಿಯನ್ನು ಜಿಯು ಮತ್ತು ದೆಹಲಿ ವಿಶ್ವವಿದ್ಯಾಲಯಕ್ಕೆ (ಡಿಯು) ಒದಗಿಸುವಂತೆ ಪ್ರಧಾನಿ ಕಚೇರಿಗೆ ಅಂದಿನ ಮಾಹಿತಿ ಆಯುಕ್ತ ಎಂ. ಶ್ರೀಧರ್ ಆಚಾರ್ಯುಲು ಅವರು ನಿರ್ದೇಶನ ನೀಡಿದ್ದರು.

ಇದನ್ನು ವಿರೋಧಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಜಿಯು, ಈ ರೀತಿಯ ನಿರ್ದೇಶನಗಳನ್ನು ನೀಡಲು ಸಿಐಸಿಗೆ ಅಧಿಕಾರ ಇಲ್ಲ. ಹೀಗಾಗಿ ಈ ನಿರ್ದೇಶನವನ್ನು ರದ್ದುಪಡಿಸಬೇಕು ಎಂದು ಕೋರಿ ಅರ್ಜಿ ಸಲ್ಲಿಸಿತ್ತು.

ಚೀಲದಲ್ಲಿ ಮೃತದೇಹ ಸಾಗಣೆ: ಜೀವಾವಧಿ ಶಿಕ್ಷೆ

ಬೆಂಗಳೂರು: ಡಿ.ಜೆ. ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಅಂಬರೀಶ್ ಎಂಬುವವರನ್ನು ಕೊಲೆ ಮಾಡಿದ್ದ ಸಂದೀಪ್ (32) ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ 20ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

‘ಸಂದೀಪ್ ಮಹಿಳೆಯೊಬ್ಬರ ಜೊತೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದ. ಈ ಸಂಗತಿ ತಿಳಿದ ಸ್ನೇಹಿತ ಅಂಬರೀಶ್, ಸಂದೀಪ್‌ನ ಪತ್ನಿಗೆ ವಿಷಯ ತಿಳಿಸಿದ್ದ. ಇದರಿಂದಾಗಿ ಸಂದೀಪ್ ಹಾಗೂ ಪತ್ನಿ ನಡುವೆ ಜಗಳವಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಅಕ್ರಮ ಸಂಬಂಧದ ಬಗ್ಗೆ ಪತ್ನಿಗೆ ತಿಳಿಸಿದನೆಂಬ ಕಾರಣಕ್ಕೆ ಅಂಬರೀಶ್ ಅವರನ್ನು ಕೊಲೆ ಮಾಡಲು ಸಂದೀಪ್ ಸಂಚು ರೂಪಿಸಿದ್ದ. 2019ರ ನ. 22ರಂದು ಅಂಬರೀಶ್ ಜೊತೆ ಮದ್ಯ ಪಾರ್ಟಿ ಮಾಡಿದ್ದ. ಬಿಯರ್ ಬಾಟಲಿಯಿಂದ ತಲೆಗೆ ಹೊಡೆದು, ಚಾಕುವಿನಿಂದ ದೇಹದ ಹಲವು ಭಾಗಗಳಿಗೆ ಇರಿದು ಕೊಂದಿದ್ದ. ನಂತರ ದೇಹವನ್ನು ಚೀಲದಲ್ಲಿ ಸಾಗಿಸಿದ್ದ. ಕೊಲೆ ಆರೋಪದಡಿ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು’ ಎಂದು ತಿಳಿಸಿದರು.

ಡಿಕೆಶಿ ದಾರ್ಷ್ಟ್ಯದ ಮಾತು– ಆರಗ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ಚುನಾವಣೆಯಲ್ಲಿ ತೀರ್ಥಹಳ್ಳಿ ಕ್ಷೇತ್ರದಲ್ಲಿ ನನ್ನನ್ನು ಸೋಲಿಸಿ, ವಿಧಾನಸಭೆಯಿಂದ ಹೊರಗಿಡುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ದಾರ್ಷ್ಟ್ಯದ ಮಾತು ಆಡಿದ್ದಾರೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಚುನಾವಣೆ ಇತಿಹಾಸದಲ್ಲಿಯೇ ಬಿಜೆಪಿ ಅಭ್ಯರ್ಥಿಯಾಗಿ ಅತ್ಯಧಿಕ ಮತಗಳಿಂದ ಜಯ ಗಳಿಸಿದ್ದೇನೆ. ಕ್ಷೇತ್ರದ ಮತದಾರರನ್ನು ಅಣಕಿಸುವಂತೆ ಮಾತನಾಡಿರುವ ಶಿವಕುಮಾರ್ ಹೇಳಿಕೆ ಖಂಡನೀಯ’ ಎಂದಿದ್ದಾರೆ.

‘ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ವಿಧಾನಸಭೆಯಲ್ಲಿ ಯಾರು ಇರಬೇಕು ಅಥವಾ ಇರಬಾರದು ಎನ್ನುವುದನ್ನು ಯಾವುದೇ ಒಬ್ಬ ವ್ಯಕ್ತಿ ನಿರ್ಧರಿಸುವುದಿಲ್ಲ. ಕ್ಷೇತ್ರದ ಜನತೆ ನಿರ್ಧರಿಸುತ್ತಾರೆ’ ಎಂದೂ ಹೇಳಿದ್ದಾರೆ.

ಫ್ಯಾನ್ಸಿ ಸಂಖ್ಯೆ: ₹7.75 ಲಕ್ಷಕ್ಕೆ ಹರಾಜು

ಬೆಂಗಳೂರು: ಸಾರಿಗೆ ಇಲಾಖೆ ನಗರದಲ್ಲಿ ನಡೆಸಿದ ಫ್ಯಾನ್ಸಿ ನೋಂದಣಿ ಸಂಖ್ಯೆ ಹರಾಜಿನಲ್ಲಿ 29 ನಂಬರ್‌ಗಳನ್ನು ₹38.95 ಲಕ್ಷಕ್ಕೆ ಹರಾಜು ಮಾಡಿದೆ. ಕೆಎ–03, ಎನ್‌ಕ್ಯೂ 9999 ಸಂಖ್ಯೆಯು ₹7.75 ಲಕ್ಷಕ್ಕೆ ಹರಾಜಾಗಿದೆ.

ಕೆಎ–03, ಎನ್‌ಕ್ಯೂ 7777 ಸಂಖ್ಯೆ ₹2.80 ಲಕ್ಷಕ್ಕೆ ಮತ್ತು ಕೆಎ–03, ಎನ್‌ಕ್ಯೂ– 01 ಸಂಖ್ಯೆಯು ₹2.55ಕ್ಕೆ ಬಿಕರಿಯಾಗಿದ ಎಂದು ಇಲಾಖೆ ತಿಳಿಸಿದೆ.

ಕೇಂದ್ರ ಸರ್ಕಾರದ ಉತ್ತರದಿಂದ ನೆರೆಯ ರಾಜ್ಯಗಳಿಗೆ ಅಸ್ತ್ರ ಸಿಕ್ಕಂತಾಗಿದೆ: ನೀರಾವರಿ ತಜ್ಞರ ಅಭಿಮತ

ಭದ್ರಾ ಮೇಲ್ದಂಡೆ: ಪರಿಸರ ಅನುಮೋದನೆ ಗೊಂದಲ

• ಮಂಜುನಾಥ ಹೆಬ್ಬಾರ್

ನವದೆಹಲಿ: ಭದ್ರಾ ಮೇಲ್ದಂಡೆ ಯೋಜನೆಗೆ ಪರಿಸರ ಅನುಮೋದನೆ ಪಡೆಯಲು ಅಗತ್ಯವಾಗಿರುವ ಕಾರ್ಯಸೂಚಿಗೆ (ಟಿಒಆರ್) ಒಪ್ಪಿಗೆ ನೀಡಬೇಕು ಎಂದು ಕೋರಿ ಕರ್ನಾಟಕ ಸರ್ಕಾರವು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಸಲ್ಲಿಸಿರುವ ಪ್ರಸ್ತಾವ-ವನ್ನು ಪರಿವೇಷ್ ಪೋರ್ಟಲ್‌ನಿಂದ ತೆಗೆದು ಹಾಕಲಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ಕರ್ನಾಟಕದ ನೀರಾವರಿ ಯೋಜನೆಗಳ ಸ್ಥಿತಿಗತಿ ಕುರಿತು ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೋಕಸಭೆಯಲ್ಲಿ ಕೇಳಿರುವ ಪ್ರಶ್ನೆಗೆ ಕೇಂದ್ರ ಜಲಶಕ್ತಿ ರಾಜ್ಯ ಸಚಿವ ಬಿಶ್ವೇಶ್ವರ ತುಡು ಲಿಖಿತ ಉತ್ತರ ನೀಡಿದ್ದಾರೆ.

‘ಯಾವುದೇ ಯೋಜನೆಗೆ ಪರಿಸರ ಅನುಮೋದನೆ ಕೋರುವ ಸಂದರ್ಭದಲ್ಲಿ ಕಾರ್ಯಸೂಚಿಗೆ ಒಪ್ಪಿಗೆ ಪಡೆಯುವುದು ಅತ್ಯಗತ್ಯ ಪ್ರಕ್ರಿಯೆ. ಕರ್ನಾಟಕ ಸರ್ಕಾರವು 2019ರ ಜೂನ್‌ನಲ್ಲಿ ಪರಿಸರ ಸಚಿವಾಲಯಕ್ಕೆ ಈ ಸಂಬಂಧ ಪ್ರಸ್ತಾವ ಸಲ್ಲಿಸಿದೆ. ಈ ಯೋಜನೆಯು ಅಂತರ್ ರಾಜ್ಯ ಜಲ ವಿವಾದವನ್ನು ಒಳಗೊಂಡಿದೆ. ಹೀಗಾಗಿ, ಯೋಜನೆಗೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದಿಂದ (ಸಿಡಬ್ಲ್ಯುಎಂಎ) ಒಪ್ಪಿಗೆ ಸಿಕ್ಕ ಬಳಿಕ ಹಾಗೂ ಜಲಶಕ್ತಿ ಸಚಿವಾಲಯವು ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಅಂತಿಮಗೊಳಿಸಿದ ನಂತರವಷ್ಟೇ ಟಿಒಆರ್‌ಗೆ ಒಪ್ಪಿಗೆ ನೀಡಲು ಪರಿಸರ ಸಚಿವಾಲಯ ತೀರ್ಮಾನಿಸಿದೆ’ ಎಂದೂ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.

‘ಕರ್ನಾಟಕ ಸರ್ಕಾರ ಈಗಾಗಲೇ ಪರಿಸರ ಅನುಮೋದನೆ ಪಡೆದಿದ್ದರೆ ಅರಣ್ಯ ಸಚಿವಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿ ಸ್ಪಷ್ಟನೆ ಪಡೆಯಲು ಅವಕಾಶ ಇದೆ. ಕೇಂದ್ರದ ಈ ಉತ್ತರದಿಂದ ಕಾಮಗಾರಿಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ, ಕೇಂದ್ರದ ಉತ್ತರವು ಯೋಜನೆ ಬಗ್ಗೆ ತಗಾದೆ ಎತ್ತಿರುವ ನೆರೆಯ ರಾಜ್ಯಗಳಿಗೆ ಅಸ್ತ್ರ ನೀಡಿದಂತೆ ಆಗುತ್ತದೆ. ಈ ದಾಖಲೆಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದರೆ ಕರ್ನಾಟಕಕ್ಕೆ ಹಿನ್ನಡೆಯಾಗುವ ಸಾಧ್ಯತೆ ಇದೆ’ ಎಂದು ನೀರಾವರಿ ತಜ್ಞ ಕ್ಯಾಪ್ಟನ್ ರಾಜಾ ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜಲ ಶಕ್ತಿ ಸಚಿವಾಲಯದಲ್ಲಿ ಆಂಧ್ರ ಪ್ರದೇಶ, ತಮಿಳುನಾಡಿನ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕರ್ನಾಟಕದವರು ಇಲ್ಲವೇ ಇಲ್ಲ ಎಂದು ಹೇಳಬಹುದು. ಆ ರಾಜ್ಯಗಳ ಅಧಿಕಾರಿಗಳು ಇಂತಹ ಕಿತಾಪತಿ ಮಾಡುತ್ತಾರೆ. ಇದರಿಂದ ಸಂಕಷ್ಟಕ್ಕೆ ಸಿಲುಕುವುದು ಕರ್ನಾಟಕ’ ಎಂದು ಅವರು ಹೇಳಿದರು.

ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಈ ಯೋಜನೆಗೆ ₹5,300 ಕೋಟಿ ಅನುದಾನ ನೀಡುವುದಾಗಿ ಕೇಂದ್ರ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿದೆ.

‘ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಪರಿಗಣಿಸಲು ಸಚಿವಾಲಯದ ಉನ್ನತಾಧಿಕಾರಿ ಸಮಿತಿ ಈಗಾಗಲೇ ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರದಿಂದ ಯೋಜನೆಗೆ ₹5,300 ಕೋಟಿ ಅನುದಾನ ನೀಡಲು ವೆಚ್ಚ ಇಲಾಖೆಯ ಸಾರ್ವಜನಿಕ ಹೂಡಿಕೆ ಮಂಡಳಿ ಶಿಫಾರಸು ಮಾಡಿದೆ’ ಎಂದೂ ಸಚಿವರು ತಿಳಿಸಿದ್ದಾರೆ.

ಈ ಯೋಜನೆಯಲ್ಲಿ 29.90 ಟಿಎಂಸಿ ಅಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸ-ಲಾಗುತ್ತದೆ. ಈ ಯೋಜನೆಗೆ ತಗಲುವ ವೆಚ್ಚ ₹21,473ಕೋಟಿ. ಕೇಂದ್ರ ಸರ್ಕಾರದಿಂದ ₹9,675ಕೋಟಿ ಅನುದಾನ ಸಿಗಲಿದೆ ಎಂದು ಕರ್ನಾಟಕ ಸರ್ಕಾರ ಹೇಳಿಕೊಂಡಿತ್ತು.

ತಗಾದೆ ಎತ್ತಿರುವ ಆಂಧ್ರ: ‘ಕೃಷ್ಣಾ ನದಿ ನೀರು ಹಂಚಿಕೆ ನ್ಯಾಯಾಧೀಕರಣದ ತೀರ್ಪನ್ನು ಉಲ್ಲಂಘಿಸಿ ಕರ್ನಾಟಕ ಸರ್ಕಾರವು ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆ ಸಂಪೂರ್ಣವಾಗಿ ಅನುಷ್ಠಾನ ಗೊಂಡರೆ ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ ಕಡಿಮೆಯಾಗಲಿದೆ. ಇದರಿಂದ ಆಂಧ್ರ ಪ್ರದೇಶದ ಮೂರು ನೀರಾವರಿ ಯೋಜನೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ’ ಎಂದು ಆಂಧ್ರ ಪ್ರದೇಶ ಸರ್ಕಾರ ತಕರಾರು ಎತ್ತಿದೆ. ಈ ಯೋಜನೆಯನ್ನು ವಿರೋಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗುವುದು ಎಂದು ತಿಳಿಸಿದೆ.

‘ಪರಿಸರ ಅನುಮೋದನೆ ಸಿಕ್ಕಿದೆ’

‘ಭದ್ರಾ ಮೇಲ್ದಂಡೆ ಯೋಜನೆಗೆ 2017ರಲ್ಲೇ ಪರಿಸರ ಅನುಮೋದನೆ ಸಿಕ್ಕಿದೆ. 2020ರ ಆಗಸ್ಟ್ 24ರಂದು ನಡೆದ ಕೇಂದ್ರ ಜಲ ಆಯೋಗದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ಆಗಿದೆ. ಈ ಯೋಜನೆಗೆ ಕೇಂದ್ರ ಜಲ ಆಯೋಗ ಅನುಮೋದನೆ ನೀಡಿದೆ. ಯೋಜನೆಗೆ ಈಗಾಗಲೇ ₹3 ಸಾವಿರ ಕೋಟಿ ವೆಚ್ಚ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ’ ಎಂದು ವಿಶ್ವೇಶ್ವರ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ ರಾವ್ ಪೇಶ್ವೆ ತಿಳಿಸಿದರು.

ಕೇಂದ್ರ ಸಚಿವರ ಉತ್ತರದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರಿಂದ ಪ್ರತಿಕ್ರಿಯೆ ಕೇಳಿದಾಗ, ‘ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಎಲ್ಲ ಅನುಮೋದನೆಗಳನ್ನು ಪಡೆಯಲಾಗಿದೆ’ ಎಂದು ತಿಳಿಸಿದ ಅವರು, ಜಲ ಆಯೋಗದ ಸಭೆಯ ನಡಾವಳಿ ಪ್ರತಿಯನ್ನು ಕಳುಹಿಸಿ ಪುಟ 5ರಲ್ಲಿ ಇದರ ಕುರಿತು ಉಲ್ಲೇಖ ಇದೆ ಎಂದೂ ಸ್ಪಷ್ಟಪಡಿಸಿದರು.

ಯಾವ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ

ಜಿಲ್ಲೆ	ನೀರಾವರಿ (ಹೆಕ್ಟೇರ್‌ಗಳಲ್ಲಿ)
ಚಿಕ್ಕಮಗಳೂರು	44,555
ಚಿತ್ರದುರ್ಗ	1,54,245
ತುಮಕೂರು	19,215
ದಾವಣಗೆರೆ	7,500
ಒಟ್ಟು	2,25,515

ದ್ವಿತೀಯ ಪಿಯುಸಿ ಮರು ಮೌಲ್ಯಮಾಪನ: ಒಂದು ಅಂಕ ಹೆಚ್ಚಿದರೂ ಪರಿಗಣನೆ

ಬೆಂಗಳೂರು: ದ್ವಿತೀಯ ಪಿಯು ಮುಖ್ಯ ಪರೀಕ್ಷೆಯ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ‘ಒಂದು ಅಂಕ’ ಹೆಚ್ಚು ಬಂದರೂ ಪರಿಗಣಿಸಿ, ಹೊಸ ಅಂಕಪಟ್ಟಿ ನೀಡಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಈಗಿದ್ದ ನಿಯಮದ ಪ್ರಕಾರ, ಅರ್ಜಿ ಸಲ್ಲಿಸಿದ ವಿದ್ಯಾರ್ಥಿಯ ಮರು ಮೌಲ್ಯ-ಮಾಪನದಲ್ಲಿ ಪತ್ರಿಕೆಯ ಒಟ್ಟು ಅಂಕಗಳ ಶೇ 6ರಷ್ಟು ಹೆಚ್ಚು ಬಂದರಷ್ಟೇ ಪರಿಗ-ಣಿಸಲಾಗುತ್ತಿತ್ತು. ಹೊಸ ನಿಯಮ ಇದೇ ಶೈಕ್ಷಣಿಕ ವರ್ಷದಿಂದ ಅನ್ವಯವಾಗ ಲಿದ್ದು, ಮಾರ್ಚ್‌ನಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಯ ಮರು ಮೌಲ್ಯ-ಮಾಪನದಿಂದ ಸೌಲಭ್ಯ ದೊರೆಯಲಿದೆ. ‘ಇಂದಿನ ಸ್ಪರ್ಧಾತ್ಮಕ ಕಾಲದಲ್ಲಿ ಒಂದು ಅಂಕವೂ ಮುಖ್ಯ. ಕರ್ನಾಟಕ ಪದವಿಪೂರ್ವ ಶಿಕ್ಷಣ ಇಲಾಖೆಯ ಪಬ್ಲಿಕ್ ಪರೀಕ್ಷೆ ನಿಯಮಗಳು-1997’ಕ್ಕೆ ತಿದ್ದುಪಡಿ ತರಲಾಗುತ್ತಿದೆ’ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

‘ರೂಪಾಯಿ’ಗೆ ನಿಜ ಮೌಲ್ಯ

ಶರತ್ ಹೆಗ್ಡೆ



ವಿಜಯ್ ಜಗದಾಳ್

ನಟನೆಯ ಆಸೆ ಹೊತ್ತು, ಆರ್ಥಿಕ ಭದ್ರತೆಯ ಕಾರಣಕ್ಕೆ ಚಿತ್ರರಂಗದ ತಾಂತ್ರಿಕ ವಿಭಾಗದಲ್ಲಿ ದುಡಿದು ಈಗ ನಿರ್ದೇಶನಕ್ಕೆ ಇಳಿದಿದ್ದಾರೆ ವಿಜಯ್ ಜಗದಾಳ್. ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ನಟನೆಯ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ಅವರ ‘ರೂಪಾಯಿ’ ಸಿನಿಮಾ ತೆರೆಕಂಡಿದ್ದು, ಚಿತ್ರದ ತಿರುಳು, ಮಾರುಕಟ್ಟೆಯ ಸವಾಲುಗಳನ್ನು ವಿಜಯ್ ತೆರೆದಿಟ್ಟದ್ದು ಹೀಗೆ...

● ವಿಜಯ್ ಜಗದಾಳ್ ಯಾರು?

ನಾನು ಮೂಲತಃ ರಂಗಕರ್ಮಿ. ನಟನಾಗುವ ಆಸೆಯಿಂದಲೇ ಸಿನಿಮಾ ಕ್ಷೇತ್ರಕ್ಕೆ ಬಂದೆ. ಆದರೆ, ಯಾವುದೇ ನಟ, ನಿರ್ದೇಶಕನ ಯಶಸ್ಸಿನ ಹಿಂದೆ ಪಳಗಿದ ತಂತ್ರಜ್ಞ ಇರಲೇಬೇಕು. ಜೊತೆಗೆ ಆರ್ಥಿಕ ಸ್ಥಿರತೆಯೂ ಬೇಕಿತ್ತು. ಆ ಕಾರಣದಿಂದ ನಾನು ಸಿನಿಮಾ ನಿರ್ಮಾಣದ ತಾಂತ್ರಿಕ ವಿಭಾಗಕ್ಕೆ ಬಂದೆ. ಕೆಲಕಾಲ ನಟನೆಯನ್ನೂ ಕಲಿತೆ. ಅದರಿಂದೇನೂ ದೊಡ್ಡ ಪ್ರಯೋಜನ ಆಗಲಿಲ್ಲ. ಹೀಗೆ ಕೆಲಸ ಮಾಡಿದ ಸಿನಿಮಾಗಳ ಸಂಖ್ಯೆ ಎಂಟರಷ್ಟಿದೆ.

● ನಿರ್ದೇಶಕರಾಗಿ ಹೇಗೆ ಗುರುತಿಸಿಕೊಂಡಿರಿ?

ನಾನು ಸಿನಿಮಾ ಮಾಡುತ್ತೇನೆ ಎಂದು ನಿರ್ಮಾಪಕರಿಗೆ ಕಥೆ ಹೇಳಿ ನಂಬಿಸಲು ಸಿದ್ಧನಿರಲಿಲ್ಲ. ಬದಲಾಗಿ ‘ಅಂಬಾನಿ ದಿ ಇನ್ವೆಸ್ಟರ್’ ಎನ್ನುವ ಕಿರುಚಿತ್ರ ಮಾಡಿದೆ. ಅದು ಸಾಕಷ್ಟು ಹೆಸರು ತಂದುಕೊಟ್ಟಿತು. ಈಗಲೂ ಆ ಕಿರುಚಿತ್ರವನ್ನು ನೋಡಿದವರು ನನ್ನ ಬಗ್ಗೆ ಗೌರವದಿಂದ ಮಾತನಾಡುತ್ತಾರೆ. ‘ರೂಪಾಯಿ’ ಕಿರುಚಿತ್ರ ಸಿದ್ಧವಾದಾಗ ನಾನೇ ವೆಚ್ಚ ಮಾಡಿ ಒಂದು ಪ್ರಮೋಷನಲ್ ವಿಡಿಯೊ ರೂಪಿಸಿದೆ. ಇವೆರಡನ್ನೂ ನೋಡಿದ ನಿರ್ಮಾಪಕರು ಮನಸ್ಸು ಮಾಡಿದರು. 2019ರ ಕೊನೆಯಲ್ಲಿ ಸೆಟ್ಟೇರಿದ ಚಿತ್ರವಿದು. ಈಗ ಬಿಡುಗಡೆಯಾಗುತ್ತಿದೆ.

ಇದುವರೆಗಿನ ಕೆಲಸಗಳಲ್ಲಿ ನನ್ನ ವಿಶೇಷ ಏನೆಂದರೆ ಒಂದು ಸಿನಿಮಾದ ಕೆಲಸ ಒಪ್ಪಿಕೊಂಡ ನಂತರ ಅದು ಮುಗಿಯುವವರೆಗೆ ಬೇರೆ ಸಿನಿಮಾಗಳನ್ನು ಒಪ್ಪಿಕೊಳ್ಳುವುದಿಲ್ಲ. ಒಂದು ಚಿತ್ರದ ಪರಿಪೂರ್ಣತೆಗೆ ಶ್ರಮಿಸುತ್ತೇನೆ.

● ‘ರೂಪಾಯಿ’ಯ ಮೌಲ್ಯ ಏನು?

ಮೌಲ್ಯ ಎರಡು ರೂಪಾಯಿಗೂ ಇದೆ. ಕೋಟಿ ರೂಪಾಯಿಗೂ ಅದರದ್ದೇ ಮೌಲ್ಯ ಇದೆ. ಅದರ ಜೊತೆಗೆ ಬದುಕಿನ ಮೌಲ್ಯವನ್ನು ತುಂಬಾ ತಮಾಷೆಯಾಗಿ ಹೇಳುತ್ತಾ ಹೋಗಿದ್ದೇವೆ. ಸಿನಿಮಾ ಎಲ್ಲಿಯೂ ಬೋರ್ ಹೊಡೆಸುವುದಿಲ್ಲ. ಎಲ್ಲವೂ ಹೊಸ ಮುಖಗಳು ಇವೆ. ನನ್ನ ಜೊತೆ ರಾಮಚಂದ್ರನ್, ಮೈತ್ರೇಯಿ ಜಗದೀಶ್, ಕೃಷಿ ತಾಪಂಡ ಇದ್ದಾರೆ. ಒಬ್ಬ ನಿರ್ದೇಶಕನಾಗಿ ಇಲ್ಲಿ ಎಲ್ಲ ಐದು ಪಾತ್ರಗಳೂ ಸಮಾನವಾಗಿ ತೂಕ ಹೊಂದಿರುವಂತೆ ರೂಪಿಸಿದ್ದೇನೆ. ಹಾಗಾಗಿ ಅವನೇ ನಾಯಕ, ಇದೇ ಪ್ರಧಾನ ಪಾತ್ರ, ತಾರಾ ವರ್ಚಸ್ಸು ಇತ್ಯಾದಿ ಸಿದ್ಧ ಮಾದರಿಗಳಿಂದ ದೂರ ಉಳಿದಿದ್ದೇವೆ. ಇಡೀ ಚಿತ್ರ ಹೊರಾಂಗಣದಲ್ಲಿಯೇ ಚಿತ್ರೀಕರಣಗೊಂಡಿದೆ. ಪ್ರೇಕ್ಷಕರನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಈ ಪ್ರಯತ್ನ ಸಹಕಾರಿಯಾಗಿದೆ.

ಎರಡು ದಿನಗಳ ಅವಧಿಯಲ್ಲಿ ನಡೆಯುವ ಕಥೆಯಿದು. ಬಹುತೇಕ ಅವಧಿಯಲ್ಲಿ ಪಾತ್ರಗಳು ಒಂದೇ ಉಡುಗೆಯಲ್ಲಿರುವುದನ್ನು ಕಾಣಬಹುದು. ಹೀಗಾಗಿ ಕಥೆಯ ಹರಿವಿನಲ್ಲಿ ಅಡೆತಡೆಗಳಿರುವುದಿಲ್ಲ. ಹೀಗೆ ಹೊಸಬರ ಸಿನಿಮಾದಲ್ಲಿ ಒಂದಿಷ್ಟು ಹೊಸತನ ಕೊಡಲು ಪ್ರಯತ್ನಿಸಿದ್ದೇವೆ.

● ‘ರೂಪಾಯಿ’ ನೋಡಲು ಮೂರು ಕಾರಣಗಳು?

ಎಂಥದ್ದೇ ಗಂಭೀರ ವಿಷಯವೊಂದನ್ನು ನಗಿಸುತ್ತಲೇ ಹೇಳಿದ್ದೇವೆ. 2.20 ಗಂಟೆ ನಿಮ್ಮ ಮನಸ್ಸನ್ನು ಸಂಪೂರ್ಣ ಪ್ರಫುಲ್ಲಗೊಳಿಸುತ್ತದೆ. ಪ್ರತಿ ಚೌಕಟ್ಟಿನಲ್ಲೂ ಹೊಸ ವಿಷಯಗಳನ್ನು ಹೇಳುತ್ತಲೇ ಹೋಗಿದ್ದೇವೆ. ನಾನಂತೂ ಯಾವುದೇ ಸಂಕೋಚವಿಲ್ಲದೇ ಅಭಿನಯಿಸಿದ್ದೇನೆ.

● ಸಿನಿಮಾಗೆ ಎದುರಾದ ಸವಾಲುಗಳು?

‘ರೂಪಾಯಿ’ಗೆ ರೂಪಾಯಿಗಳನ್ನು ಹೊಂದಿಸುವುದೇ ಬಹಳ ಕಷ್ಟವಾಯಿತು. ಟ್ರೈಲರ್ ನೋಡಿ ಇಷ್ಟಪಟ್ಟ ವಿತರಕರು ಸಿನಿಮಾ ವಿತರಣೆಗೆ ಮಾತ್ರ ಮುಂದಾಗಲೇ ಇಲ್ಲ. ಅವರವರ ಲೆಕ್ಕಾಚಾರ ಬೇರೆಯೇ ಇದೆ. ನಾವು ಹೊಸಬರಲ್ಲವೇ? ಇದೆಲ್ಲಾ ಸಹಜ. ಈಗ ನಾವೇ ಬಂಡವಾಳ ಹಾಕಿ ರಾಜ್ಯದಾದ್ಯಂತ ಬಿಡುಗಡೆಗೆ ಹೊರಟಿದ್ದೇವೆ. ಪ್ರೇಕ್ಷಕ ಕೈ ಹಿಡಿಯುತ್ತಾನೆ ಎಂಬ ನಂಬಿಕೆ ನಮಗಿದೆ. ❖

ಪ್ರಜಾವಾಣಿ ನೋಡಿಯೊ

ಸಿನಿಮಾತು

ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಹೊಂದಿಸಿ ಬರೆದ ‘ಐಶಾನಿ’

‘ವಾಸ್ತು ಪ್ರಕಾರ’ ಚಂದನವನಕ್ಕೆ ಕಾಲಿಟ್ಟ ಪುಟಾಣಿ ಮಗುವಿನ ಧ್ವನಿಯ, ಮುಗ್ಧ ಮುಖದ ಕರಾವಳಿಯ ಬೆಡಗಿ ಐಶಾನಿ ಶೆಟ್ಟಿ, ಇದೀಗ ‘ಹೊಂದಿಸಿ ಬರೆಯಿರಿ’ ಎನ್ನುತ್ತಿದ್ದಾರೆ. ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ‘ಶಾಕುಂತಲೆ’ ಆಗಿ ಮಿಂಚುತ್ತಿರುವ ಐಶಾನಿ ತಮ್ಮ ಸಿನಿಪಯಣವನ್ನು ‘ಸಿನಿಮಾ ಪುರವಣಿ’ ಜೊತೆ ಮೆಲುಕು ಹಾಕಿದರು.

ಸಿನಿಮಾ ಆಯ್ಕೆಯ ಕುರಿತು ತಾವೇ ಹಾಕಿಕೊಂಡ ಷರತ್ತುಗಳಿಂದಲೇ ಮಾತು ಆರಂಭಿಸಿದ ಐಶಾನಿ, ‘ವರ್ಷಕ್ಕೆ ಹತ್ತು ಸಿನಿಮಾ ಮಾಡಬೇಕು. ಆದಷ್ಟು ಬೇಗ ನೂರು ಸಿನಿಮಾಗಳಲ್ಲಿ ನಟಿಸಬೇಕು ಎನ್ನುವ ಹೊರೆ ಹೊತ್ತು ನಾನು ಈ ಕ್ಷೇತ್ರಕ್ಕೆ ಇಳಿದಿಲ್ಲ. ಆಫರ್‌ಗಳು ಸಾಕಷ್ಟು ಬಂದಿವೆ. ಆದರೆ ನನಗೆ ಹಿಡಿಸುವ ಕಥೆಗಳು, ಮನಸಾರೆ ಹಿಡಿಸಿದ ಪಾತ್ರಗಳು ಬಂದಾಗ ಒಪ್ಪಿಕೊಂಡಿದ್ದೇನೆ. ಮಾಡುವ ಸಿನಿಮಾಗಳ ಮೂಲಕ ಜನರು ನನ್ನನ್ನು ಗುರುತಿಸಬೇಕು ಎನ್ನುವುದಷ್ಟೇ ನನ್ನ ಗುರಿ. ಇಲ್ಲಿಯವರೆಗೆ ಮಾಡಿರುವ ಪಾತ್ರಕ್ಕೆ ಒಳ್ಳೆಯ ಪ್ರತಿಕ್ರಿಯೆ ದೊರಕಿದೆ’ ಎನ್ನುತ್ತಾರೆ.

‘ಹೊಂದಿಸಿ ಬರೆಯಿರಿ’ ರಾಮೇನಹಳ್ಳಿ ಜಗನ್ನಾಥ್ ಅವರ ನಿರ್ದೇಶನದ ಚೊಚ್ಚಲ ಚಿತ್ರ. ಅವರು ಈ ಕಥೆಯನ್ನು ಹೇಳಿದಾಗ, ಮೊದಲು ನಮ್ಮನ್ನು ಆಕರ್ಷಿಸಿದ್ದು ಶೀರ್ಷಿಕೆ. ಈ ಶೀರ್ಷಿಕೆ ನಮ್ಮನ್ನು ಬಾಲ್ಯಕ್ಕೆ ಕರೆದೊಯ್ಯುತ್ತದೆ. ಈ ಶೀರ್ಷಿಕೆಯನ್ನು ರೂಪಕದ ರೀತಿ ಇಲ್ಲಿ ಬಳಸಿದ್ದಾರೆ. ಚಿತ್ರಕಥೆ ಅಚ್ಚುಕಟ್ಟಾಗಿದೆ. ಇದು ಪ್ರೇಮಕಥೆ ಮತ್ತು ನಾಲ್ಕೈದು ಸ್ನೇಹಿತರ ನಡುವೆ ನಡೆಯುವ ಕಥೆ. ಎಲ್ಲರೂ ಎಂಜಿನಿಯರಿಂಗ್ ವಿದ್ಯಾರ್ಥಿಗಳು. ಓದುವುದರಲ್ಲಿ ತುಂಬಾ ಆಸಕ್ತಿ ಇರುವ, ವಿಜ್ಞಾನಿಯಾಗುವ ಕನಸು ಕಾಣುತ್ತಿರುವ ಮೆಕ್ಯಾನಿಕಲ್ ಎಂಜಿನಿಯರಿಂಗ್ ಹುಡುಗಿಯ ಪಾತ್ರ ನನ್ನದು. ‘ಸನಿಹ ಪೊನ್ನಪ್ಪ’ ನನ್ನ ಪಾತ್ರದ ಹೆಸರು. ನಿಮಗೆ ಗೊತ್ತೇ ಇದೆ, ಮೆಕ್ಯಾನಿಕಲ್ ಬ್ರ್ಯಾಂಚ್ ಎಂದರೆ ಅಲ್ಲಿ ಹುಡುಗಿಯರು ವಿರಳ.(ನಗುತ್ತಾ..) ಅದರಲ್ಲೂ ಚೆಂದದ ಹುಡುಗಿಯರು ಅಪರೂಪ! ನನ್ನ ಇಲ್ಲಿಯವರೆಗಿನ ಸಿನಿಪಯಣದಲ್ಲಿ ಇದೊಂದು ವಿಶೇಷವಾದ ಪಾತ್ರ. ಶಿಕ್ಷಣದ ಮುಂದಿನ ಜೀವನ ಸಿನಿಮಾದಲ್ಲಿದೆ. ಎಲ್ಲರೂ ಮೂರು ಲುಕ್‌ಗಳಲ್ಲಿ ಕಾಣಿಸಿಕೊಂಡಿದ್ದೇವೆ. 12 ವರ್ಷದ ಪಯಣ ಈ ಸಿನಿಮಾದಲ್ಲಿದೆ. ತೆರೆ ಮೇಲೆ ಈ ಅವಧಿಯನ್ನು ಪಾತ್ರದ ಮುಖಾಂತರ ತೋರಿಸುವುದು ಸವಾಲಾಗಿತ್ತು ಎನ್ನುತ್ತಾರೆ ಐಶಾನಿ.

ಚಿತ್ರದಲ್ಲಿನ ನನ್ನ ಲುಕ್‌ಗೆ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿತ್ತು. ಕೆಲವರು ಚೆನ್ನಾಗಿದೆ ಎಂದರು, ಇನ್ನು ಕೆಲವರಿಗೆ ಹಿಡಿಸಿಲ್ಲ. 2008ರಲ್ಲಿ ನಡೆಯುವ ಕಥೆ ಇದಾಗಿರುವ ಕಾರಣ, ಆ ಕಾಲದ ಉಡುಪು, ಹೇರ್‌ಸ್ಟೈಲ್ ಇಲ್ಲಿ ಕಾಣಬಹುದಾಗಿದೆ. ಇದಕ್ಕಾಗಿ ನಾನು ಆ ಸಂದರ್ಭದಲ್ಲಿ ಎಂಜಿನಿಯರಿಂಗ್ ಓದಿದ್ದ ನನ್ನ ಸ್ನೇಹಿತರ ಫೋಟೊಗಳನ್ನು ತರಿಸಿಕೊಂಡಿದ್ದೆ. ಈ ಕಾರಣದಿಂದಾಗಿ ‘ಸನಿಹ’ ಪಾತ್ರ ಮುದ್ದುಮುದ್ದಾಗಿ ಬಂದಿದೆ. ಚಿತ್ರದ ಕಥೆಯು ಬದುಕಿಗೆ ಹತ್ತಿರವಾಗಿದೆ. ಹೀಗಾಗಿ ಎಲ್ಲರಿಗೂ ಈ ಸಿನಿಮಾ ಕನೆಕ್ಟ್ ಆಗುತ್ತದೆ ಎಂದು ಹೇಳುತ್ತಾರೆ.

ನಿರ್ದೇಶನ, ಫಿಲ್ಮ್ ಮೇಕಿಂಗ್ ಬಗ್ಗೆ ನನಗೆ ಆಸಕ್ತಿ ಹುಟ್ಟಿದ್ದು ಮೊದಲ ಸಿನಿಮಾ ಸಂದರ್ಭದಲ್ಲೇ. ಆಗ ನನಗೆ ಎಲ್ಲವೂ ಹೊಸತು. ಕುತೂಹಲವೂ ಹೆಚ್ಚಾಗಿತ್ತು. ಬರವಣಿಗೆಯ ಹವ್ಯಾಸ ನನಗೆ ಮೊದಲಿನಿಂದಲೇ ಇತ್ತು. ಸ್ನಾತಕೋತ್ತರ ಪದವಿ ಪಡೆಯುತ್ತಿರುವ ಸಂದರ್ಭದಲ್ಲಿ ಶೈಕ್ಷಣಿಕ ಪ್ರವಾಸಕ್ಕೆಂದು ಹೋದ ಸಂದರ್ಭದಲ್ಲಿ ನೋಡಿದ, ಅನುಭವಿಸಿದ ಘಟನೆಗಳನ್ನು ಇಟ್ಟುಕೊಂಡು ಒಂದು ಕಥೆ ಮಾಡಿದೆ. ಅದುವೇ ನನ್ನ ಕಿರುಚಿತ್ರ ‘ಕಾಜಿ’. ಅತ್ಯುತ್ತಮ ತಾಂತ್ರಿಕ ತಂಡ ಈ ಪ್ರಾಜೆಕ್ಟ್‌ನಲ್ಲಿತ್ತು. ಇದಾದ ಬಳಿಕ ಒಂದಿಷ್ಟು ಕಿರುಚಿತ್ರಗಳನ್ನು ಮಾಡುವ ಆಸೆ ಇತ್ತು. ಆದರೆ ಕಮರ್ಷಿಯಲ್ ಸಿನಿಮಾಗಳನ್ನು ಮಾಡಲು ಸ್ನೇಹಿತರ ಒತ್ತಾಯವಿತ್ತು. ಸದ್ಯ ಒಂದು ಸ್ಕ್ರಿಪ್ಟ್ ಮೇಲೆ ಕೆಲಸ ಮಾಡುತ್ತಿದ್ದೇನೆ. ಇದರಲ್ಲಿ ನಾನೇ ಲೀಡ್ ಮಾಡುತ್ತಿದ್ದೇನೆ. ಈ ಪ್ರಾಜೆಕ್ಟ್ ಈ ವರ್ಷ ಆರಂಭವಾಗಲಿದೆ ಎಂದು ಮಾಹಿತಿ ನೀಡುತ್ತಾರೆ ಐಶಾನಿ. ❖



ಐಶಾನಿ ಶೆಟ್ಟಿ

ಬೆಳ್ಳಿತೆರೆಯಲ್ಲಿಂದು ಸಿನಿಮಾ ಸುಗ್ಗಿ!

ಸ್ಯಾಂಡಲ್‌ವುಡ್‌ನ ಬೆಳ್ಳಿಪರದೆಗಳಲ್ಲಿ ಈ ವಾರ ಸಿನಿಮಾ ಸುಗ್ಗಿ. ಹತ್ತಕ್ಕೂ ಹೆಚ್ಚು ಕನ್ನಡ ಸಿನಿಮಾಗಳು ಇಂದು(ಫೆ.10) ತೆರೆಕಾಣುತ್ತಿದ್ದು, ಈ ಪೈಕಿ ಬಹುತೇಕ ಸಿನಿಮಾಗಳು ಹೊಸಬರದ್ದಾಗಿವೆ.

‘ಪ್ರೇಮಿಗಳ ದಿನ’ದ ಹಿನ್ನೆಲೆಯಲ್ಲಿ ‘ದೂದ್‌ಪೇಢ’ ದಿಗಂತ್ ಮತ್ತೆ ತೆರೆ ಮೇಲೆ ಬರಲಿದ್ದಾರೆ. ತಮ್ಮ ಮೊದಲನೇ ಸಿನಿಮಾ ‘ಲೈಫು ಇಷ್ಟೇನೆ’ ರಿರಿಲೀಸ್ ಮಾಡುವ ಮೂಲಕ ನಿರ್ದೇಶಕ ಪವನ್ ಕುಮಾರ್ ಪ್ರೇಮಿಗಳಿಗೆ ಉಡುಗೊರೆ ನೀಡುತ್ತಿದ್ದಾರೆ! ಬೆಂಗಳೂರಿನಲ್ಲೇ ಮಲ್ಟಿಪ್ಲೆಕ್ಸ್‌ನ 11 ಪರದೆಗಳಲ್ಲಿ ಈ ಸಿನಿಮಾ ಫೆ.10ಕ್ಕೆ ರಿರಿಲೀಸ್ ಆಗುತ್ತಿದೆ. ಜೊತೆಗೆ ಮೈಸೂರು, ಹುಬ್ಬಳ್ಳಿ, ಮಂಗಳೂರು ಹಾಗೂ ಕುಂದಾಪುರದ ಮಲ್ಟಿಪ್ಲೆಕ್ಸ್‌ನಲ್ಲೂ ಸಿನಿಮಾ ಬಿಡುಗಡೆಯಾಗುತ್ತಿದೆ.



ದಿಗಂತ್

‘ಹೊಂದಿಸಿ ಬರೆಯಿರಿ’: ರಾಮೇನಹಳ್ಳಿ ಜಗನ್ನಾಥ್ ಅವರ ನಿರ್ದೇಶನದ ಚೊಚ್ಚಲ ಚಿತ್ರ ‘ಹೊಂದಿಸಿ ಬರೆಯಿರಿ’ ತೆರೆಕಂಡಿದೆ. ಬಹುತಾರಾಗಣದ ಈ ಚಿತ್ರವು ಐದು ಜನ ಸ್ನೇಹಿತರ ಬದುಕಿನ ಕಥೆ ಹಾಗೂ ಭಾವನಾತ್ಮಕ ಪಯಣವನ್ನು ಒಳಗೊಂಡಿದೆ. ಈ ಚಿತ್ರದಲ್ಲಿ ಪ್ರವೀಣ್ ತೇಜ್, ಭಾವನಾ ರಾವ್, ಸಂಯುಕ್ತ ಹೊರನಾಡು, ಐಶಾನಿ ಶೆಟ್ಟಿ, ನವೀನ್ ಶಂಕರ್, ಶ್ರೀ ಮಹದೇವ್, ಅರ್ಚನಾ ಜೋಯಿಸ್, ಅನಿರುದ್ಧ್ ಆಚಾರ್ಯ ಒಳಗೊಂಡ ಕಲಾವಿದರು ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಶಾಂತಿ ಸಾಗರ್ ಹೆಚ್. ಜಿ. ಛಾಯಾಗ್ರಹಣ ಚಿತ್ರಕ್ಕಿದೆ. ಮಾಸ್ತಿ, ಪ್ರಶಾಂತ್ ರಾಜಪ್ಪ ಹಾಗೂ ರಾಮೇನಹಳ್ಳಿ ಜಗನ್ನಾಥ್ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ.

‘ಲಾಂಗ್‌ಡ್ರೈವ್’: ಗುಡ್‌ವಿಲ್ ಪ್ರೊಡಕ್ಷನ್ಸ್ ಬ್ಯಾನರ್‌ನಡಿ ಮಂಜುನಾಥ್ ಗೌಡ ಬಿ.ಆರ್. ನಿರ್ಮಿಸಿರುವ ರೊಮ್ಯಾಂಟಿಕ್ ಥ್ರಿಲ್ಲರ್ ಜಾನರ್‌ನ ಚಿತ್ರ ‘ಲಾಂಗ್‌ಡ್ರೈವ್’. ಯುವಜನತೆಯಲ್ಲಿ ಹೆಚ್ಚಾಗಿರುವ ಲಾಂಗ್‌ಡ್ರೈವ್ ಹೋಗುವ ಹವ್ಯಾಸವನ್ನೇ ಇಟ್ಟುಕೊಂಡು ಕಥೆ ಹೆಣೆದಿರುವ ಶ್ರೀರಾಜ್, ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಕೂಡಾ ಹೇಳಿದ್ದಾರೆ. ಅರ್ಜುನ್ ಯೋಗಿ, ಸುಪ್ರೀತಾ ಸತ್ಯನಾರಾಯಣ್, ತೇಜಸ್ವಿನಿ ಪ್ರಕಾಶ್ ಹಾಗೂ ಶಬರಿ ಮಂಜು ಈ ನಾಲ್ಕು ಪ್ರಮುಖ ಪಾತ್ರಗಳ ಸುತ್ತ ಚಿತ್ರದ ಕಥೆಯಿದೆ.

‘ಡಿಸೆಂಬರ್ 24’: 2015 ರಿಂದ 2019ರ ನಡುವೆ ಹುಲಿಯೂರು ದುರ್ಗ ಸುತ್ತಮುತ್ತ ಹಲವಾರು ಮಕ್ಕಳು ಉಸಿರಾಟದ ಸಮಸ್ಯೆಯಿಂದ ಸಾವನ್ನಪ್ಪಿದ ನೈಜ ಘಟನೆಯನ್ನು ಇಟ್ಟುಕೊಂಡು ತಯಾರಾದ ಹಾರರ್, ಥ್ರಿಲ್ಲರ್ ಚಿತ್ರ ‘ಡಿಸೆಂಬರ್ 24’. ಚಿತ್ರದಲ್ಲಿ ‘ಭಾಗ್ಯಲಕ್ಷ್ಮಿ’ ಖ್ಯಾತಿಯ ಭೂಮಿಕಾ ರಮೇಶ್, ಅಪ್ಪು ಬಡಿಗೇರ್ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ರಘು ಎಸ್. ನಿರ್ಮಾಣದ ಈ ಚಿತ್ರಕ್ಕೆ ವಿಶಾಲ್ ಆಲಾಪ್ ಸಂಗೀತ ನಿರ್ದೇಶನ ಮಾಡಿದ್ದಾರೆ.

‘18 ಟು 25’: ‘ಬಳ್ಳಾರಿ ದರ್ಬಾರ್’ ಖ್ಯಾತಿಯ ಸ್ಮೈಲ್ ಶ್ರೀನು ನಿರ್ದೇಶನದಲ್ಲಿ ಮೂಡಿಬಂದಿರುವ ಮತ್ತೊಂದು ಚಿತ್ರ ‘18 ಟು 25’. ‘ಓ ಮೈ ಲವ್’ ಬಳಿಕ ನಿರ್ದೇಶಕ ಸ್ಮೈಲ್ ಶ್ರೀನು ಕೈಗೆತ್ತಿಕೊಂಡಿರುವ ಈ ಪ್ರಾಜೆಕ್ಟ್‌ಗೆ ಅವರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಅಭಿ ರಾಮ್ ಚಿತ್ರದ ನಾಯಕ. ಖುಷಿ ತೇಜ, ಅಖಿಲ, ವಿದ್ಯಾಶ್ರೀ, ರಾಕ್‌ಲೈನ್ ಸುಧಾಕರ್, ಫಾರೂಖ್ ಖಾನ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಉಳಿದಂತೆ ಕ್ರಾಂತಿ ಚೈತನ್ಯ ನಿರ್ದೇಶನದ ಶಫಿ, ಅನಿತಾ ಭಟ್ ನಟನೆಯ **‘ಬೆಂಗಳೂರು 69’**, ಕಮಲ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕವಿತಾ ಅರುಣ್ ಕುಮಾರ್ ನಿರ್ಮಿಸಿರುವ, ರಾಜೀವ್ ರಾಥೋಡ್, ದುನಿಯಾ ರಶ್ಮಿ ನಟನೆಯ ಚಿತ್ರ **‘ರಂಗಿನ ರಾಟೆ’**, ವಿಜಯ್ ಜಗದಾಳ್ ನಿರ್ದೇಶಿಸಿ ನಟಿಸಿರುವ **‘ರೂಪಾಯಿ’**, ಎನ್. ಮಂಜುನಾಥ್ ನಿರ್ದೇಶಿಸಿ, ನಟಿಸಿರುವ **‘ಒಂದಾನೊಂದು ಕಾಲದಲ್ಲಿ’** ಸೇರಿದಂತೆ ಇನ್ನೂ ಕೆಲ ಸಿನಿಮಾಗಳು ತೆರೆಕಾಣುತ್ತಿವೆ. ❖



ಹೊಂದಿಸಿ ಬರೆಯಿರಿ
ಭಾವನಾ ರಾವ್



ತೇಜಸ್ವಿನಿ ಶರ್ಮಾ, ಲಿಖಿತ್ ಶೆಟ್ಟಿ ಹಾಗೂ ಖುಷಿ ರವಿ

ರೆಡಿಯಾಗ್ತಿದೆ ಫುಲ್ ಮೀಲ್ಸ್

ಮದುವೆ ಫೋಟೊ ತೆಗೆಯಲು ಬಂದ ಛಾಯಾಗ್ರಾಹಕನಿಗೆ ಮದುಮಗಳ ಮೇಲೆ ಪ್ರೀತಿ ಮೂಡಿದರೆ ಏನಾಗುತ್ತದೆ? ಅದಕ್ಕೆ ಲಿಖಿತ್ ಶೆಟ್ಟಿ ‘ಫುಲ್ ಮೀಲ್ಸ್’ ಸಿನಿಮಾದಲ್ಲಿ ಉತ್ತರಿಸಿದ್ದಾರೆ. ಛಾಯಾಗ್ರಾಹಕನ ಗೆಟಪ್‌ನಲ್ಲಿರುವ ಲಿಖಿತ್‌ಗೆ ನಟಿಯರಾದ ಖುಷಿ ರವಿ ಮತ್ತು ತೇಜಸ್ವಿನಿ ಶರ್ಮಾ ನಾಯಕಿಯರು. ಮುಂದೇನಾಯಿತು ಅನ್ನುವುದನ್ನು ಸಿನಿಮಾದಲ್ಲೇ ನೋಡಬೇಕು ಎಂದು ಕುತೂಹಲ ಉಳಿಸಿದ್ದಾರೆ ಲಿಖಿತ್.

ಅಂದಹಾಗೆ ಲಿಖಿತ್ ಅವರು ನಟ, ದಿವಂಗತ ಪುನೀತ್ ರಾಜ್‌ಕುಮಾರ್ ನಿರ್ಮಾಣದ ‘ಫ್ಯಾಮಿಲಿ ಪ್ಯಾಕ್’ ಚಿತ್ರದಲ್ಲಿ ಅಭಿನಯಿಸಿ ಗಮನಸೆಳೆದವರು. ಇತ್ತೀಚೆಗಷ್ಟೇ ಸೆಟ್ಟೇರಿರುವ ಚಿತ್ರ ‘ಫುಲ್‌ಮೀಲ್ಸ್’. ಈಗ ಚಿತ್ರೀಕರಣ ಭರದಿಂದ ಸಾಗಿದೆ. ಇತ್ತೀಚೆಗೆ ಬೆಂಗಳೂರಿನ ಅರಮನೆಯಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ.

‘ಇದೊಂದು ಸಂಪೂರ್ಣ ಮನರಂಜನಾತ್ಮಕ ಚಿತ್ರ. ನನ್ನ ನಿರ್ದೇಶನದ ಮೊದಲ ಚಿತ್ರ ಕೂಡ. ರಂಗಾಯಣ ರಘು, ಸಾಧುಕೋಕಿಲ, ಚಂದ್ರಕಲಾ ಮೋಹನ್, ರಮೇಶ್ ಪಂಡಿತ್, ಗಣೇಶ್ ರಾವ್, ವಿಜಯ್ ಚೆಂಡೂರ್ ಸೇರಿದಂತೆ ಅನೇಕ ಅನುಭವಿ ಕಲಾವಿದರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಮನೋಹರ್ ಜೋಷಿ ಛಾಯಾಗ್ರಹಣ ಹಾಗೂ ಗುರುಕಿರಣ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಬೆಂಗಳೂರು, ರಾಮನಗರ ಹಾಗೂ ಮಂಗಳೂರಿನಲ್ಲಿ ಚಿತ್ರೀಕರಣ ನಡೆಯಲಿದೆ’ ಎಂದಿದ್ದಾರೆ ನಿರ್ದೇಶಕ ಎನ್.ವಿನಾಯಕ. ಮನೋಹರ್ ಜೋಶಿ ಛಾಯಾಗ್ರಹಣ, ಹರೀಶ್ ರಾಜಣ್ಣ ಸಂಭಾಷಣೆ ಈ ಚಿತ್ರಕ್ಕಿದೆ. ❖

‘ವೇದ’ ಒಟಿಟಿಗೆ

‘ಸೆಂಚುರಿ ಸ್ಟಾರ್’ ಶಿವರಾಜ್‌ಕುಮಾರ್ ಅಭಿನಯದ ‘ವೇದ’ ಇಂದು (ಫೆ. 10) ಜೀ 5 ಒಟಿಟಿಗೆ ಪ್ರವೇಶಿಸಿದೆ. ಶಿವರಾಜ್ ಕುಮಾರ್ ಅವರ ವೃತ್ತಿ ಬದುಕಿನ ವಿಶೇಷ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಈ ಚಿತ್ರ. ಅವರ ಅಭಿನಯದ 125ನೇ ಚಿತ್ರವೂ ಹೌದು. ಡಿ. 23ರಂದು ತೆರೆ ಕಂಡ ಈ ಚಿತ್ರವನ್ನು ಗೀತಾ ಶಿವರಾಜ್‌ಕುಮಾರ್ ನಿರ್ಮಾಣ ಮಾಡಿದ್ದಾರೆ. ಎ.ಹರ್ಷ ನಿರ್ದೇಶನದಲ್ಲಿ ಶಿವರಾಜ್ ಕುಮಾರ್ ಅಭಿನಯಿಸಿದ ನಾಲ್ಕನೇ ಸಿನಿಮಾ ಇದಾಗಿದೆ.

ಗಾನವಿ ಲಕ್ಷ್ಮಣ್, ಶ್ವೇತ ಚೆಂಗಪ್ಪ, ಉಮಾಶ್ರೀ, ಅದಿತಿ ಸಾಗರ್, ವೀಣಾ ಪೊನ್ನಪ್ಪ, ಕುರಿ ಪ್ರತಾಪ್, ಲಾಸ್ಯ ನಾಗರಾಜ್ ತಾರಾಗಣದಲ್ಲಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಸ್ವಾಮಿ ಜೆ. ಗೌಡ ಛಾಯಾಗ್ರಹಣ, ದೀಪು ಎಸ್. ಕುಮಾರ್ ಸಂಕಲನ ಚಿತ್ರಕ್ಕಿದೆ. ❖





ಕಾಸಿನಸರ
ವಿಜಯ ರಾಘವೇಂದ್ರ
ಹರ್ಷಿಕಾ ಪೂಣಚ್ಚ

ರೈತನ ಬದುಕು, ಬವಣೆಯ ಚಿತ್ರ ಕಾಸಿನಸರ

ನಿರ್ದೇಶಕ ಎನ್.ಆರ್. ನಂಜುಂಡೇಗೌಡ ಅವರ ನಿರ್ದೇಶನದಲ್ಲಿ ನಟ ವಿಜಯ ರಾಘವೇಂದ್ರ ಪ್ರಗತಿಪರ ರೈತನಾಗಿ ನಟಿಸಿರುವ ಚಿತ್ರ ‘ಕಾಸಿನಸರ’. ಚಿತ್ರದ ‘ಭೂತಾಯಿಯ ಕಾಸಿನಸರ’ ಹಾಡನ್ನು ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆಗೊಳಿಸಿದರು.

‘Is not a jewel’ ಎನ್ನುವ ಅಡಿಬರಹವಿರುವ ಈ ಚಿತ್ರದ ಶೀರ್ಷಿಕೆಯನ್ನು ರೂಪಕದ ರೀತಿ ಬಳಸಿಕೊಳ್ಳಲಾಗಿದೆ. ‘ಇಲ್ಲಿ ಕಾಸಿನಸರಕ್ಕೆ ಅದರದೇ ಮೌಲ್ಯ, ಪರಂಪರೆ, ಸಂಪ್ರದಾಯವಿದೆ. ಅದೇ ರೀತಿ ಕೃಷಿಗೂ ತನ್ನದೇ ಆದ ಪರಂಪರೆ ಸಂಪ್ರದಾಯವಿದೆ. ಅದನ್ನು ಇಲ್ಲಿ ಕೃಷಿಭೂಮಿಗೆ ಹೋಲಿಸಿದ್ದೇನೆ’ ಎನ್ನುತ್ತಾರೆ ನಿರ್ದೇಶಕ ನಂಜುಂಡೇಗೌಡ.

ನಾಯಕ ವಿಜಯ ವಿಜಯ ರಾಘವೇಂದ್ರ ಮಾತನಾಡಿ, ‘ಒಬ್ಬ ನಟನಿಗೆ ಎಲ್ಲಾ ರೀತಿಯ ಪಾತ್ರಗಳನ್ನು ಮಾಡುವ ಅವಕಾಶ ಸಿಗುತ್ತದೆ. ಆದರೆ ಒಬ್ಬ ರೈತನ ಪಾತ್ರ ಸಿಗುವುದು ಅಪರೂಪ. ನಂಜುಂಡೇಗೌಡರು ಈ ಸಿನಿಮಾದ ಕಥೆ, ಶೀರ್ಷಿಕೆ ಹೇಳಿದಾಗ ತುಂಬಾ ಖುಷಿಯಾಯಿತು. ಕಾಸಿನಸರ ತುಂಬಾ ತೂಕವಾದ ಹೆಸರು. ಅದರ ಹಿಂದೆ ದೊಡ್ಡ ಶ್ರಮವಿದೆ. ಇಲ್ಲಿ ಕಾಸಿನಸರ ಎನ್ನುವುದು ಬರೀ ಒಡವೆಯಲ್ಲ. ಅದಕ್ಕೊಂದು ಒಳ ಅರ್ಥವಿದೆ. ವೇಣು ಈ ಚಿತ್ರವನ್ನು ಅದ್ಭುತವಾಗಿ ಸೆರೆಹಿಡಿದಿದ್ದಾರೆ. ಚಿತ್ರದಲ್ಲಿ ‘ಸುಂದರೇಶ’ ಎಂಬ ವ್ಯವಸಾಯದ ಮೇಲೆ ಭರವಸೆ ಇಟ್ಟಿರುವ ರೈತ ಹೋರಾಟಗಾರನಾಗಿ ನಟಿಸಿದ್ದೇನೆ’ ಎಂದು ತಮ್ಮ ಪಾತ್ರದ ವಿವರಣೆ ನೀಡಿದರು.

‘ಚಿತ್ರದಲ್ಲಿ ನಾನು ಕೃಷಿ ವಿದ್ಯಾರ್ಥಿನಿ ‘ಸಂಪಿಗೆ’ ಎಂಬ ಪಾತ್ರ ಮಾಡಿದ್ದೇನೆ. ಈಗಿನ ಹುಡುಗಿಯರು ಓದು ಮುಗಿಸಿ ಐಟಿ ಕಂಪನಿಗಳಲ್ಲಿ, ವಿದೇಶಗಳಲ್ಲಿ ಕೆಲಸ ಹುಡುಕುತ್ತಾರೆ, ಆದರೆ ನಾನು ಕೃಷಿ ಕ್ಷೇತ್ರ ಆಯ್ದುಕೊಳ್ಳುತ್ತೇನೆ. ಅಭಿನಯಕ್ಕೆ ಹೆಚ್ಚಿನ ಆದ್ಯತೆ ಇರುವ ಪಾತ್ರ ನನ್ನದು’ ಎಂದರು ನಟಿ ಹರ್ಷಿಕಾ ಪೂಣಚ್ಚ.

ಚಿತ್ರದಲ್ಲಿ ಪಾತ್ರವೊಂದನ್ನು ನಿರ್ವಹಿಸಿರುವ ಸಚಿವ ಎಸ್.ಟಿ. ಸೋಮಶೇಖರ್ ಮಾತನಾಡಿ, ‘ಗ್ರಾಮೀಣ ಸೊಗಡಿನಲ್ಲಿ ನಡೆಯುವ ಕೌಟುಂಬಿಕ ಕಥಾಹಂದರ ಈ ಚಿತ್ರದಲ್ಲಿದೆ. ನನ್ನ ಸ್ನೇಹಿತ, ನಿರ್ಮಾಪಕ ಈ. ದೊಡ್ಡನಾಗಯ್ಯ ಅವರಿಗೆ ಕೃಷಿ ಎಂದರೆ ಅಚ್ಚುಮೆಚ್ಚು. ಗ್ರಾಮೀಣ ಭಾಗದಿಂದಲೇ ಬಂದ ಅವರು ಅನೇಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ. ಈಗ ಚಿತ್ರ ನಿರ್ಮಾಣಕ್ಕೂ ಕೈಹಾಕಿದ್ದಾರೆ’ ಎಂದರು. ❖

ಪರಿಶಿಷ್ಟರ ಮೀಸಲು ಹೆಚ್ಚಳ: ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

9ನೇ ಪರಿಚ್ಛೇದಕ್ಕೆ ಸೇರಿಸಲು ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲು ಪ್ರಮಾಣವನ್ನು ಹೆಚ್ಚಿಸಿ ಈಗಾಗಲೇ ತೆಗೆದುಕೊಂಡಿರುವ ನಿರ್ಣಯವನ್ನು ಸಂವಿಧಾನದ 9 ನೇ ಪರಿಚ್ಛೇದಕ್ಕೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನ ತೆಗೆದುಕೊಂಡಿದೆ.

ಸರ್ಕಾರದ ಕ್ರಮದಿಂದ ಉದ್ಯೋಗ ಮತ್ತು ಶಿಕ್ಷಣದಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಪರಿಶಿಷ್ಟ ಜಾತಿಗೆ ಶೇ 15 ರಿಂದ ಶೇ 17, ಪರಿಶಿಷ್ಟ ಪಂಗಡಕ್ಕೆ ಶೇ 3 ರಿಂದ ಶೇ 7 ರಷ್ಟು ಹೆಚ್ಚಳವಾಗಲಿದೆ.

ಈ ಕ್ರಮಕ್ಕೆ ಸಾಂವಿಧಾನಿಕ ರಕ್ಷಣೆ ಪಡೆಯಲು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸುವುದು ಅಗತ್ಯವಾಗಿದೆ. ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಕೇಂದ್ರಕ್ಕೆ ಶಿಫಾರಸು ಕಳಿಸಲು ವಿರೋಧ ಪಕ್ಷಗಳು ಸರ್ಕಾರವನ್ನು ಒತ್ತಾಯಿಸಿದ್ದವು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಅದಕ್ಕೆ ಸಮ್ಮತಿಯನ್ನು ನೀಡಿದ್ದರು.

ಬೆಳಗಾವಿ ಅಧಿವೇಶನದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಒಟ್ಟಾರೆ ಶೇ 6 ರಷ್ಟು ಹೆಚ್ಚಿಸುವ ಮಸೂದೆಗೆ ಸರ್ವಾನುಮತದ ಒಪ್ಪಿಗೆ ನೀಡಿದ್ದವು. ಇದಕ್ಕೂ ಮೊದಲೇ ಸುಗ್ರೀವಾಜ್ಞೆಯ ಮೂಲಕ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿತ್ತು. ಇದರಿಂದ ಇವೆರಡೂ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 24 ರಷ್ಟು ಮೀಸಲಾತಿ ಸಿಗುತ್ತದೆ.

2019ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ, ಸರ್ಕಾರಿ, ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗಗಳಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸುವ ಸಂಬಂಧ ವರದಿ ನೀಡಲು ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿತ್ತು. ಆಯೋಗವು ತನ್ನ ವರದಿಯಲ್ಲಿ ಒಟ್ಟು ಶೇ 6 ರಷ್ಟು ಹೆಚ್ಚಿಸಲು ಶಿಫಾರಸು ಮಾಡಿತ್ತು.

ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸುವುದರಿಂದ ಮೀಸಲಾತಿ ಪ್ರಮಾಣ ಹೆಚ್ಚಿರುವುದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರೂ ಕಾನೂನಿನ ಬಲ ಸಿಗಲಿದೆ.

ಬಜೆಟ್ ಅಧಿವೇಶನದಲ್ಲಿಯೇ ಜಾರಿಯಾಗಲಿ: ಸಿದ್ದರಾಮಯ್ಯ




ಹರಿಹರ (ದಾವಣಗೆರೆ ಜಿಲ್ಲೆ): ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಹಾಗೂ ವಿರೋಧ ಪಕ್ಷಗಳ ಹೋರಾಟಕ್ಕೆ ಮಣಿದ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದೆ. ಈಗ ನಡೆಯುತ್ತಿರುವ ಸಂಸತ್‌ನ ಬಜೆಟ್ ಅಧಿವೇಶನದಲ್ಲೇ ಸಂವಿಧಾನದ ಪರಿಚ್ಛೇದ- 9ಕ್ಕೆ ಸೇರಿಸಿ ಮೀಸಲಾತಿ ಹೆಚ್ಚಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

ವಾಲ್ಮೀಕಿ ಜಾತ್ರೆ ಅಂಗವಾಗಿ ಗುರುವಾರ ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಅಧಿವೇಶನದಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಳದ ಮಸೂದೆ ಪಾಸ್ ಅಂಗೀಕರಿಸಬೇಕು. ಇಲ್ಲದಿದ್ದರೆ ಮೀಸಲಾತಿ ಪ್ರಮಾಣ ಹೆಚ್ಚಿಸಲಾಗಿದೆ ಎಂಬುದು ಹಣೆಗೆ ತುಪ್ಪ ಹಚ್ಚಿದಂತಾಗಲಿದೆ' ಎಂದು ಟೀಕಿಸಿದರು.

'ಸಂವಿಧಾನವನ್ನು ಬದಲಿಸುವ ಹಾಗೂ ಹಾಳು ಮಾಡುವ ಬಗ್ಗೆ ಯಾರೇ ಮಾತನಾಡಿದರೂ ಶೂದ್ರರು ಕೂಡಲೇ ವಿರೋಧಿಸಬೇಕು. ಯಾವುದೇ ಹೋರಾಟ ನಡೆಸದಿದ್ದರೂ ಸಂವಿಧಾನಕ್ಕೆ ವಿರುದ್ಧವಾಗಿ ಸಾಮಾನ್ಯ ವರ್ಗದವರಿಗೆ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಆದರೂ ಲೋಕಸಭೆ, ರಾಜ್ಯಸಭೆಯಲ್ಲಿ ಒಂದೇ ದಿನ ನಿರ್ಧಾರ ಕೈಗೊಳ್ಳಲಾಗಿದೆ. ಮೀಸಲಾತಿ ಹೆಚ್ಚಳದ ಜಾರಿಯನ್ನೂ 2 ದಿನಗಳಲ್ಲಿ ಮಾಡಬೇಕು ಎಂದರು.

ಪರಿಚ್ಛೇದ 9ಕ್ಕೆ ಸೇರಿಸುವ ಪ್ರಕ್ರಿಯೆ ಜಾರಿಯಲ್ಲಿದೆ: ಬೊಮ್ಮಾಯಿ



ಹರಿಹರ (ದಾವಣಗೆರೆ ಜಿಲ್ಲೆ): 'ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಇದುವರೆಗೂ ಆಗ್ರಹಿಸುತ್ತಿದ್ದವರು ಈಗ ಸಂವಿಧಾನದ ಪರಿಚ್ಛೇದ- 9ಕ್ಕೆ ಸೇರಿಸುವಂತೆ ಒತ್ತಾಯಿಸುತ್ತಿದ್ದಾರೆ. ಮೀಸಲಾತಿ ಹೆಚ್ಚಳದ ಮೊದಲ ಹೆಜ್ಜೆ ಇರಿಸಿರುವ ನಮಗೆ ಎರಡನೇ ಹೆಜ್ಜೆ ಇಡೋದು ಗೊತ್ತು. ಪರಿಚ್ಛೇದ- 9ಕ್ಕೆ ಸೇರಿಸುವ ಪ್ರಕ್ರಿಯೆ ಜಾರಿಯಲ್ಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಹರಿಹರ ತಾಲ್ಲೂಕಿನ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ನಡೆದ ವಾಲ್ಮೀಕಿ ಜಾತ್ರೆಯಲ್ಲಿ ಗುರುವಾರ ಮಧ್ಯಾಹ್ನ ಮಾತನಾಡಿದ ಅವರು, ಬೆಳಿಗ್ಗೆ ಸಿದ್ದರಾಮಯ್ಯ ಅವರ ಆಗ್ರಹ ಕುರಿತು ಪ್ರತಿಕ್ರಿಯೆ ನೀಡಿದರು.

'ನೀವು ಅಧಿಕಾರದಲ್ಲಿ ಇರುವಾಗ ಮೀಸಲಾತಿ ಹೆಚ್ಚಿಸದೇ ಈಗ ಮಾತನಾಡುತ್ತಿದ್ದೀರಿ. ಮಾತು, ಭಾಷಣದಿಂದ ಸಾಮಾಜಿಕ ನ್ಯಾಯ ಸಿಗುವುದಿಲ್ಲ. ಮಾತಿನಲ್ಲಿ ಮರುಳು ಮಾಡುವವರು ನಾವಲ್ಲ. ಸಾಮಾಜಿಕ ನ್ಯಾಯ ಒದಗಿಸಲು ಹೃದಯವಂತಿಕೆ ಬೇಕು. ನಾವು ಜನರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸವನ್ನು ಮಾಡುತ್ತಿದ್ದೇವೆ' ಎಂದರು.

'ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹೆಚ್ಚಳ ಮಾಡಲಾಗಿರುವ ಹೊಸ ಮೀಸಲಾತಿಯ ಆಧಾರದಲ್ಲಿಯೇ ಮುಂದಿನ ನೇಮಕಾತಿ, ಬಡ್ತಿಗಳು ನಡೆಯಬೇಕು ಎಂಬ ಆದೇಶವನ್ನೂ ಹೊರಡಿಸಿದ್ದೇನೆ' ಎಂದರು.

ಜಲಜೀವನ್ ಮಿಷನ್: ₹1,031 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಲಜೀವನ್ ಮಿಷನ್ ಮತ್ತು ಬಹುಗ್ರಾಮ ಯೋಜನೆಯಡಿ 756 ಕ್ಕೂ ಹೆಚ್ಚು ಗ್ರಾಮಗಳು ಮತ್ತು ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸಲು ಒಟ್ಟು ₹1,031 ಕೋಟಿ ಅನುದಾನ ನೀಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಅನುದಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲು ಇದೆ ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ ಬಹುಗ್ರಾಮ ಯೋಜನೆಯಡಿ ₹26 ಕೋಟಿ ವೆಚ್ಚದಲ್ಲಿ 166 ಗ್ರಾಮಗಳು, ಉತ್ತರಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ 15 ಗ್ರಾಮಗಳಲ್ಲಿ ₹28 ಕೋಟಿ ವೆಚ್ಚದಲ್ಲಿ ಜಲ್‌ಜೀವನ್ ಮಿಷನ್ ಅಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

ಹೊಸದುರ್ಗ ತಾಲ್ಲೂಕಿನ 366 ಗ್ರಾಮಗಳು, ತರೀಕೆರೆ ತಾಲ್ಲೂಕಿನ 117 ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸಲು ₹350 ಕೋಟಿ, ಚಿಕ್ಕೋಡಿ ತಾಲ್ಲೂಕಿನ 12 ಗ್ರಾಮಗಳಿಗೆ ₹32 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು ಒದಗಿಸಲು ಅನುಮೋದನೆ ನೀಡಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಮತ್ತು ಹೊರಗೆ ಬರುವ 92 ಬಹು ಗ್ರಾಮಗಳು ಮತ್ತು ಜನ ವಸತಿ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವ ₹595 ಕೋಟಿ ಅಂದಾಜಿನ ಪರಿಷ್ಕೃತ ಯೋಜನೆಗೆ ಒಪ್ಪಿಗೆ ನೀಡಲಾಗಿದೆ ಎಂದರು.

ಪ್ರಮುಖ ತೀರ್ಮಾನಗಳು

- ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಡಿ ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿ ಹೊಸ ಕೃಷಿ ಕಾಲೇಜು ಸ್ಥಾಪನೆಗೆ ಒಟ್ಟು ₹25 ಕೋಟಿ ಅನುದಾನಕ್ಕೆ ಒಪ್ಪಿಗೆ.
- ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಅಧಿಕ ರೆಸಲ್ಯೂಷನ್‌ನ ಉಪಗ್ರಹ ದತ್ತಾಂಶ ಖರೀದಿಗೆ ₹18 ಕೋಟಿ
- ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022–27 ಕ್ಕೆ ತಿದ್ದುಪಡಿಗೆ ಒಪ್ಪಿಗೆ. ಪವನ ವಿದ್ಯುತ್ ಕಂಪನಿಗಳು ಕಾರ್ಯಾರಂಭ ಮಾಡುವ ಅವಧಿಯನ್ನು 3 ವರ್ಷಗಳಿಂದ 2 ವರ್ಷಗಳ ಅವಧಿಗೆ ಇಳಿಕೆ.
- ಹೊನ್ನಾಳಿ ತಾಲ್ಲೂಕು ಆಸ್ಪತ್ರೆಯ ಸಾಮರ್ಥ್ಯವನ್ನು 100 ಹಾಸಿಗೆಗಳಿಂದ 250 ಹಾಸಿಗೆಗಳಿಗೆ ಏರಿಸಲು ತೀರ್ಮಾನ.
- ಚಿಕ್ಕಬಳ್ಳಾಪುರ– ನೆಲಮಂಗಲ 54 ನೇ ಕಿ.ಮೀ ನಿಂದ 62 ನೇ ಕಿ.ಮೀ.ವರೆಗೆ ರಸ್ತೆ ಅಭಿವೃದ್ಧಿಗೆ ₹10.13 ಕೋಟಿ ಮೊತ್ತದ ಪರಿಷ್ಕೃತ ಅಂದಾಜಿಗೆ ಅನುಮೋದನೆ.
- ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರದ ಮೂಲಸೌಕರ್ಯದ ಅಭಿವೃದ್ಧಿಯ ಅಂಗವಾಗಿ ಹಾವೇರಿ ಜಿಲ್ಲೆ ಹಿರೇಕೆರೂರಿನ ಮಾಸೂರಿನಲ್ಲಿ ₹25 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ರಸ್ತೆ, ತಡೆಗೋಡೆ, ಭವನ, ಪ್ರವೇಶ ಕಮಾನು ಇತ್ಯಾದಿಗಳ ನಿರ್ಮಾಣವಾಗಲಿದೆ.
- ಮುಖ್ಯಮಂತ್ರಿ ಅವರ ಸ್ವಕ್ಷೇತ್ರ ಶಿಗ್ಗಾವಿಯ ಕಲ್ಯಾಣ ಗ್ರಾಮದಲ್ಲಿ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ ಸ್ಥಾಪನೆಗೆ ₹73.75 ಕೋಟಿ. ಹಾವೇರಿ ಜಿಲ್ಲೆ ನೆಲಗೊಳ ಗ್ರಾಮದಲ್ಲಿ ಬಹು ಕೌಶಲ್ಯ ತರಬೇತಿ ಕೇಂದ್ರ ಬಾಲಕರ ವಿದ್ಯಾರ್ಥಿನಿಲಯ ಸ್ಥಾಪನೆಗೆ ₹35.55 ಕೋಟಿ.
- ಮಡಿಕೇರಿಯಲ್ಲಿ ಹೊಸದಾಗಿ ಎಸ್ಪಿ ಕಚೇರಿ ಕಟ್ಟಡ ನಿರ್ಮಾಣಕ್ಕೆ ₹12 ಕೋಟಿ
- ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಮತ್ತು ಬಹುಮಹಡಿ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ₹26 ಕೋಟಿ ನೀಡಲು ಒಪ್ಪಿಗೆ.
- ಕರ್ನಾಟಕ ಲೋಕಸೇವಾ ಆಯೋಗಕ್ಕೆ ಒಂದು ಸದಸ್ಯ ಹುದ್ದೆ ತುಂಬಲು ಮುಖ್ಯಮಂತ್ರಿಗೆ ಅಧಿಕಾರ.
- ನರಗುಂದದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಸಮುದಾಯ ಭವನ ನಿರ್ಮಾಣಕ್ಕೆ ಪಂಚಮಸಾಲಿ ಸಮುದಾಯಕ್ಕೆ 2 ಎಕರೆ ಭೂಮಿ ನೀಡಲು ತೀರ್ಮಾನ.
- ರಾಜ್ಯದ 30 ಐಟಿಐಗಳನ್ನು ಟಾಟಾ ಟೆಕ್ನಾಲಜಿ ಕಂಪನಿಯ ಸಹಯೋಗದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಪ್ರತಿ ಐಟಿಐಗೆ ತಲಾ ₹ 27.20 ಕೋಟಿ ವೆಚ್ಚ

ಅಭ್ಯರ್ಥಿ ಆಯ್ಕೆಯೇ ಸವಾಲು

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಕನಿಷ್ಠ 150 ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿ ಕೇಂದ್ರ ಚುನಾವಣಾ ಸಮಿತಿಗೆ ಸಲ್ಲಿಸಲು ಕಾಂಗ್ರೆಸ್ ಪರಿಶೀಲನಾ (ಸ್ಕ್ರೀನಿಂಗ್) ಸಮಿತಿ ರಚನೆಯಾಗಿದೆ. ಆದರೆ, ಟಿಕೆಟ್ ಆಕಾಂಕ್ಷಿಗಳನ್ನು ಅಳೆದುತೂಗಿ, ಪಟ್ಟಿ ಸಿದ್ಧಪಡಿಸಲು ರಾಜ್ಯ ಕಾಂಗ್ರೆಸ್ ನಾಯಕರಿಗೆ ಹಲವು ಸವಾಲುಗಳು ಎದುರಾಗಿವೆ.

ರಾಜ್ಯ ಬಿಜೆಪಿ ಸರ್ಕಾರದ ಆಡಳಿತ ವಿರೋಧಿ ಅಲೆಯನ್ನು ಮತಗಳಾಗಿ ಪರಿವರ್ತಿಸಿ ಕ್ಷೇತ್ರ ಗೆಲ್ಲಲು ತಂತ್ರಗಾರಿಕೆ ರೂಪಿಸಿರುವ ಕಾಂಗ್ರೆಸ್ ಮುಖಂಡರು, ಹಲವು ಕ್ಷೇತ್ರಗಳಿಗೆ ಇನ್ನೂ ಸೂಕ್ತ ಅಭ್ಯರ್ಥಿಯ ಹುಡುಕಾಟದಲ್ಲಿದ್ದಾರೆ.

'ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿ ಸಚಿವರಾದ ಶಾಸಕರು, ಪಕ್ಷದ ತಳಮಟ್ಟದ ಕಾರ್ಯಕರ್ತರನ್ನೂ ತಮ್ಮ ಜೊತೆ ಕರೆದೊಯ್ದಿದ್ದಾರೆ. ಈ ಕ್ಷೇತ್ರಗಳಲ್ಲಿ ಸೂಕ್ತ ಅಭ್ಯರ್ಥಿ ಇಲ್ಲದಿರುವುದು ಬಹುದೊಡ್ಡ ಹಿನ್ನಡೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

'ಬೆಂಗಳೂರಿನ ಎಲ್ಲ 28 ವಿಧಾನಸಭಾ ಕ್ಷೇತ್ರಗಳನ್ನೂ ಗೆಲ್ಲುವುದು ಕಷ್ಟ. ಆದರೆ, 20 ಕ್ಷೇತ್ರಗಳಲ್ಲಿ ಮತದಾರರ ಒಲವು ಪಕ್ಷದ ಪರ ಇರುವುದು ಗೊತ್ತಾಗಿದೆ. ಈ ಪೈಕಿ, ಕೆಲವು ಕ್ಷೇತ್ರಗಳಲ್ಲಿ ಪ್ರತಿ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಬದಲಾಯಿಸುತ್ತಲೇ ಬಂದಿರುವುದು ಪಕ್ಷಕ್ಕೆ ಮುಳುವಾಗುತ್ತ ಬಂದಿದೆ. ಕಳೆದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕೆಲವು ಅಭ್ಯರ್ಥಿಗಳು ಈ ಬಾರಿ ಸ್ಪರ್ಧಿಸಲು ಹಿಂದೇಟು ಹಾಕುತ್ತಿದ್ದಾರೆ' ಎಂದೂ ಹೇಳಿದರು.

> **ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು 10 ದಿನಗಳಲ್ಲಿ ಸಿದ್ಧಪಡಿಸಲಾಗುವುದು. ಪರಿಶೀಲನಾ ಸಮಿತಿಯ ಸಭೆಗಳ ಬಳಿಕ ಅಂತಿಮ ಪಟ್ಟಿ ಸಿದ್ಧ ಮಾಡಲಾಗುವುದು**
>
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

'ಕೆಲವು ಕ್ಷೇತ್ರಗಳಲ್ಲಿ ಟಿಕೆಟ್ ನೀಡುವಂತೆ ಅಲ್ಪಸಂಖ್ಯಾತ ಸಮುದಾಯದ ಮುಖಂಡರು ಒತ್ತಡ ಹಾಕುತ್ತಿದ್ದಾರೆ. ಅವರು ಕೇಳಿದ ಕ್ಷೇತ್ರಗಳಲ್ಲಿ ಟಿಕೆಟ್ ನೀಡಿದರೆ ಗೆಲುವು ದಕ್ಕಿಸಿಕೊಳ್ಳುವುದು ಕಷ್ಟ. ಟಿಕೆಟ್ ನಿರಾಕರಿಸಿದರೂ ಸಮಸ್ಯೆ. ಅಲ್ಲದೆ, ಕಳೆದ ಹಲವು ಚುನಾವಣೆಗಳಲ್ಲಿ ಅಲ್ಪಸಂಖ್ಯಾತರ ಮತ ಚಲಾವಣೆ ಪ್ರಮಾಣ ಶೇ 50ರ ಆಸುಪಾಸಿನಲ್ಲಿರುತ್ತದೆ. ಗೆಲ್ಲುವ ಅಲ್ಪಸಂಖ್ಯಾತ ಅಭ್ಯರ್ಥಿಗೇ ಟಿಕೆಟ್ ನೀಡುವ ಜೊತೆಗೆ, ಪ್ರತಿ ಕ್ಷೇತ್ರದಲ್ಲಿ ಆ ಸಮುದಾಯದ ಕನಿಷ್ಠ ಶೇ 80ರಷ್ಟು ಮತಗಳು ಚಲಾವಣೆ ಆಗುವಂತೆ ಖಚಿತಪಡಿಸಿಕೊಳ್ಳುವುದೂ ಮುಖ್ಯ. ಈ ಬಗ್ಗೆಯೂ ಪಕ್ಷದ ವಲಯದಲ್ಲಿ ಚರ್ಚೆ ನಡೆದಿದೆ' ಎಂದರು.

ಕೆಲವು ಕ್ಷೇತ್ರಗಳಲ್ಲಿ ಟಿಕೆಟ್‌ಗಾಗಿ ಅಭ್ಯರ್ಥಿಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿರುವುದೂ ತಲೆನೋವಾಗಿ ಪರಿಣಮಿಸಿದೆ. ಭಿನ್ನಮತ ಸರಿಪಡಿಸದೇ ಇದ್ದರೆ ಮತಗಳು ಚದುರಿ ಹೋಗುವ ಆತಂಕವೂ ಕಾಂಗ್ರೆಸ್ ನಾಯಕರಲ್ಲಿದೆ.

'2004ರ ಚುನಾವಣೆಯಲ್ಲಿ ಬಹುತೇಕ ಎಲ್ಲ ಸಮೀಕ್ಷೆಗಳು ಕಾಂಗ್ರೆಸ್ ಬಹುಮತ ಪಡೆಯಲಿದೆ ಎಂದೇ ಹೇಳಿದ್ದವು. ಆದರೆ, ಫಲಿತಾಂಶ ಬೇರೆಯೇ ಆಗಿತ್ತು. ಜನರ ಒಲವು ಪಕ್ಷದ ಪರ ಇದ್ದರೂ ಅದರ ಲಾಭ ಪಡೆಯಲು ಯೋಜನೆ ರೂಪಿಸಿಕೊಳ್ಳಬೇಕಿದೆ. ಹಳೆ ಮೈಸೂರು ಭಾಗದಲ್ಲಿ ಶೇ 3ರಷ್ಟು ಮತಗಳನ್ನು ಪಕ್ಷದತ್ತ ಸೆಳೆದರೂ ಹೆಚ್ಚಿನ ಸಂಖ್ಯೆಯ ಸೀಟುಗಳನ್ನು ಗೆಲ್ಲಬಹುದು' ಎಂದು ಮತ್ತೊಬ್ಬ ಮುಖಂಡರು ಹೇಳುತ್ತಾರೆ.

'ಲಿಂಗಾಯತರು, ಬ್ರಾಹ್ಮಣರನ್ನೇ ಏಕೆ ಸಿ.ಎಂ ಮಾಡುತ್ತೀರಿ?'

ಕೋಲಾರ: 'ಬಿಜೆಪಿಯಲ್ಲಿ ಬ್ರಾಹ್ಮಣರು, ಲಿಂಗಾಯತರನ್ನೇ ಏಕೆ ಮುಖ್ಯಮಂತ್ರಿ ಮಾಡುತ್ತೀರಿ?'

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಚಿಂತನಾ ವೇದಿಕೆ ನಗರದಲ್ಲಿ ಗುರುವಾರ ಆಯೋಜಿಸಿದ್ದ 'ಅಂತ್ಯೋದಯದಿಂದ ಸರ್ವೋದಯ' ಚಿಂತನ-ಮಂಥನ ಕಾರ್ಯಕ್ರಮದಲ್ಲಿ ದಲಿತ ಮುಖಂಡರೊಬ್ಬರು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರಿಗೆ ಪ್ರಶ್ನೆ ಕೇಳಿದರು.

ಮತ್ತೊಬ್ಬ ದಲಿತ ಮುಖಂಡ, 'ದಲಿತರನ್ನು ಮುಖ್ಯಮಂತ್ರಿ ಮಾಡುವುದಾಗಿ ಘೋಷಿಸಿ, ಆಗ ಬಿಜೆಪಿಗೆ ಮತ ಹಾಕುತ್ತೇವೆ' ಎಂದು ಸವಾಲು ಎಸೆದರು.

ಆಗ ಶಾಸಕ ಸಿ.ಟಿ.ರವಿ ಉತ್ತರಿಸಿ, 'ನಾಯಕತ್ವ ಬೆಳೆಯುತ್ತಾ ಎಲ್ಲಾ ಸಮುದಾಯಕ್ಕೂ ಸಮನಾದ ಅವಕಾಶ ಸಿಗಲಿದೆ. ಜಾತಿ ಆಧಾರದಲ್ಲಿ ಅಲ್ಲ. ಬದಲಾಗಿ ನೀತಿ, ನಿಯತ್ತು ಹಾಗೂ ನಿಷ್ಠೆಯಿಂದ ಇದ್ದವರಿಗೆ ಅವಕಾಶ ಒಲಿಯಲಿದೆ' ಎಂದರು.

ಮತ್ತೊಬ್ಬ ದಲಿತ ಮುಖಂಡ, 'ಮೀಸಲಾತಿ ವಿರೋಧಿ ಅಲ್ಲ ಎನ್ನುತ್ತೀರಿ, ಏಕೆ ಎಲ್ಲವನ್ನೂ ಖಾಸಗೀಕರಣ ಮಾಡುತ್ತಿದ್ದೀರಿ? ದೆಹಲಿಯ ಜಂತರ್ ಮಂತರ್ ಬಳಿ ನಿಮ್ಮದೇ ಹಿಂದೂ ಕಾರ್ಯಕರ್ತರು ಸಂವಿಧಾನ ಪ್ರತಿ ಸುಟ್ಟಾಗ ಏನು ಮಾಡಿದಿರಿ? ನಾವು ಬಂದಿರುವುದೇ ಸಂವಿಧಾನ ಬದಲಾಯಿಸಲು ಎಂದು ರಾಜ್ಯದ ಬಿಜೆಪಿ ಸಂಸದರೊಬ್ಬರು ಹೇಳಿದ್ದು ಏಕೆ' ಎಂದು ಪ್ರಶ್ನಿಸಿದರು.

'ವಿಧಾನಸೌಧಕ್ಕೆ ಪೇಶ್ವೆ ನಾಯಕ; ಬಿಜೆಪಿ ಉತ್ತರಿಸಲಿ'

ಬೆಂಗಳೂರು: 'ವಿಧಾನಸೌಧದಲ್ಲಿ ಪೇಶ್ವೆ ವಂಶದ ನಾಯಕನ ಪ್ರತಿಷ್ಠಾಪನೆ ಮಾಡಲು ಹೊರಟಿರುವ ಬಿಜೆಪಿ ನನ್ನ ಪ್ರಶ್ನೆಗೆ ಉತ್ತರ ಕೊಡುವ ದಮ್ಮು, ತಾಕತ್ತು ತೋರಿಸುತ್ತಿಲ್ಲ ಏಕೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸರಣಿ ಟ್ವೀಟ್ ಮಾಡಿ, 'ಶೃಂಗೇರಿ ಮಠದ ಮೇಲೆ ದಾಳಿ ನಡೆಸಿದ್ದ ಪೇಶ್ವೆಗಳ ವಂಶದ ವ್ಯಕ್ತಿಯನ್ನು ಸಿ.ಎಂ ಮಾಡಲು ಬಿಜೆಪಿ ಹುನ್ನಾರ ನಡೆಸಿದೆ ಎಂಬ ನನ್ನ ಹೇಳಿಕೆಯಲ್ಲಿ ಗೊಂದಲವಿಲ್ಲ, ಬ್ರಾಹ್ಮಣ ಸಮೂಹವನ್ನು ನಿಂದಿಸಿಲ್ಲ. ಗರ್ಭಗುಡಿಯಲ್ಲಿ ಏನು ನಡೆಯುತ್ತಿದೆ ಎಂಬುದು ಬಿಜೆಪಿಯವರಿಗೂ ಚೆನ್ನಾಗಿ ಗೊತ್ತು' ಎಂದಿದ್ದಾರೆ. 'ಹೇಳಿಕೆಯನ್ನು ಕೆಲವರು ತಿರುಚಿ ಅಪಪ್ರಚಾರ ನಡೆಸುತ್ತಿದ್ದಾರೆ. ಬಸವೇಶ್ವರರು, ಬುದ್ಧ,ಶಿವಾಜಿ, ಗಾಂಧೀಜಿ ಮತ್ತು ಅಂಬೇಡ್ಕರ್ ಅವರನ್ನೇ ಇವರು ಬಿಟ್ಟಿಲ್ಲ. ನನ್ನನ್ನು ಬಿಡುತ್ತಾರೆಯೇ?' ಎಂದು ಹೇಳಿದ್ದಾರೆ.

'ಕಾಂಗ್ರೆಸ್ ಸೇರಿದ್ರೆ 50 ಸಾವಿರ ಅಂತರದಲ್ಲಿ ಗೆಲ್ತೀನಿ'


ಹಾಸನ: ಜೆಡಿಎಸ್ ಬಿಡುವ ಕುರಿತು ಇದುವರೆಗೆ ಮೌನವಾಗಿದ್ದ ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡರು, ಕಾಂಗ್ರೆಸ್ ಸೇರುವ ಬಗ್ಗೆ ಮಾತನಾಡಿರುವ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಜೆಡಿಎಸ್ ಕಾರ್ಯಕರ್ತರ ಜೊತೆ ಮೊಬೈಲ್‌ನಲ್ಲಿ ಮಾತನಾಡಿರುವ ಶಿವಲಿಂಗೇಗೌಡ, 'ಯಾವನಲ್ಲಾ ಯಾವನಪ್ಪಾ ಬಂದ್ರು, ನಾನು ಕಾಂಗ್ರೆಸ್ ಸೇರಿದ್ರೆ ಐವತ್ತು ಸಾವಿರ ಲೀಡ್‌ನಲ್ಲಿ ಗೆಲ್ತೀನಿ' ಎಂದಿದ್ದಾರೆ.

ತಿಲಕ್ ಕುಮಾರ್ ಸೇರಿ ನಾಲ್ವರಿಗೆ ಜೀವಮಾನ ಸಾಧನೆ ವಿಶೇಷ ಪ್ರಶಸ್ತಿ

ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪ್ರಕಟ: ಪ್ರಜಾವಾಣಿಯ 11 ಮಂದಿ ಆಯ್ಕೆ


ಪ್ರಜಾವಾಣಿ ವಾರ್ತೆ



ಕೆ.ಎನ್. ತಿಲಕ್ ಕುಮಾರ್



ವಿಜಯ ಸಂಕೇಶ್ವರ



ಎಚ್‌.ಆರ್‌. ರಂಗನಾಥ್



ಸುಶೀಲ ಸುಬ್ರಮಣ್ಯಂ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿ ವಾರ್ಷಿಕ ಪ್ರಶಸ್ತಿಗಳನ್ನು ಗುರುವಾರ ಪ್ರಕಟಿಸಿದ್ದು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ (ಟಿಪಿಎಂಎಲ್) ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ಅವರು 2019ನೇ ಸಾಲಿನ ಜೀವಮಾನ ಸಾಧನೆಯ ವಿಶೇಷ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಮಾಧ್ಯಮ ಕ್ಷೇತ್ರದಲ್ಲಿನ ಸಾಧನೆಯನ್ನು ಪರಿಗಣಿಸಿ ನಾಲ್ಕು ವರ್ಷಗಳ (2019, 2020, 2021, 2022) ಪ್ರಶಸ್ತಿಗಳನ್ನು ಘೋಷಿಸಲಾಗಿದೆ. ಜೀವಮಾನ ಸಾಧನೆಯ ವಿಶೇಷ ಪ್ರಶಸ್ತಿ, ಮಾಧ್ಯಮ ವಾರ್ಷಿಕ ಪ್ರಶಸ್ತಿ ಮತ್ತು ದತ್ತಿ ಪ್ರಶಸ್ತಿಗಳಿಗೆ ನಾಡಿನ ಪತ್ರಕರ್ತರನ್ನು ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಕೆ. ಸದಾಶಿವ ಶೆಣೈ ತಿಳಿಸಿದ್ದಾರೆ.

ಜೀವಮಾನ ಸಾಧನೆಯ ವಿಶೇಷ ಪ್ರಶಸ್ತಿಗೆ ವಿಜಯವಾಣಿ ಮುಖ್ಯಸ್ಥರಾದ ವಿಜಯ ಸಂಕೇಶ್ವರ (2020), ಪಬ್ಲಿಕ್ ಟಿ.ವಿ. ಮುಖ್ಯಸ್ಥ ಎಚ್‌.ಆರ್. ರಂಗನಾಥ್ (2021) ಮತ್ತು ಆರ್ಥಿಕ ತಜ್ಞರಾದ ಸುಶೀಲ ಸುಬ್ರಮಣ್ಯಂ (2022) ಅವರು ಆಯ್ಕೆಯಾಗಿದ್ದಾರೆ.

ಜೀವಮಾನ ಸಾಧನೆಯ ವಿಶೇಷ ಪ್ರಶಸ್ತಿಯು ತಲಾ ₹50 ಸಾವಿರ, ವಾರ್ಷಿಕ ಪ್ರಶಸ್ತಿಯು ತಲಾ ₹25 ಸಾವಿರ ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ನಾಲ್ಕು ವರ್ಷಗಳೂ ಸೇರಿ 124 ಪತ್ರಕರ್ತರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಒಟ್ಟು 21 ಪತ್ರಕರ್ತರನ್ನು ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ದತ್ತಿ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಬಹುಮಾನ ಒಳಗೊಂಡಿವೆ.

ವಿವಿಧ ಪ್ರಶಸ್ತಿಗಳಿಗೆ 'ಪ್ರಜಾವಾಣಿ'ಯ ಒಟ್ಟು 11 ಪತ್ರಕರ್ತರು ಆಯ್ಕೆಯಾಗಿದ್ದಾರೆ. ವಾರ್ಷಿಕ ಪ್ರಶಸ್ತಿಗೆ ಎಸ್‌. ರವಿಪ್ರಕಾಶ್, ಎ.ಎಂ. ಸುರೇಶ, ಸೂರ್ಯಪ್ರಕಾಶ ಪಂಡಿತ್, ವಿ.ಎಸ್‌. ಸುಬ್ರಹ್ಮಣ್ಯ, ಚಂದ್ರಹಾಸ ಹಿರೇಮಳಲಿ, ಜಿ.ಎಚ್‌. ವೆಂಕಟೇಶ್, ಎಲ್‌. ಮಂಜುನಾಥ, ಚನ್ನಪ್ಪ ಮಾದರ ಆಯ್ಕೆಯಾಗಿದ್ದಾರೆ.

ಅತ್ಯುತ್ತಮ ಸಿನಿಮಾ ಪತ್ರಕರ್ತರಿಗೆ ನೀಡುವ 'ಅರಗಿಣಿ' ಪ್ರಶಸ್ತಿಗೆ 'ಸುಧಾ' ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. (2021) ಆಯ್ಕೆಯಾಗಿದ್ದಾರೆ. ಸಾಮಾಜಿಕ ಸಮಸ್ಯೆ ಲೇಖನಕ್ಕೆ ನೀಡುವ 'ಅಭಿಮಾನಿ' ಪ್ರಶಸ್ತಿಗೆ ಬಸವರಾಜ ಹವಾಲ್ದಾರ್ ಅವರ 'ದಾಖಲೆಯಲ್ಲಷ್ಟೇ ಬಯಲು ಶೌಚಾಲಯ' (2019) ಲೇಖನ ಆಯ್ಕೆಯಾಗಿದೆ. ಪ್ರದೀಶ್ ಎಚ್‌. ಮರೋಡಿ ಅವರ 'ಕೇಳುತ್ತಿಲ್ಲ ಮಲೆ ಮಕ್ಕಳ ಅಳಲು' (2020) ಅತ್ಯುತ್ತಮ ಮಾನವೀಯ ವರದಿಯು 'ಮೈಸೂರು ದಿಗಂತ' ಪ್ರಶಸ್ತಿಗೆ ಆಯ್ಕೆಯಾಗಿದೆ.

ತಳಸಮುದಾಯದ ಬಗೆಗಿನ ಬರಹಗಳ ಅಂಕಣಕಾರರಿಗೆ ನೀಡುವ ಡಾ.ಬಿ. ಆರ್‌. ಅಂಬೇಡ್ಕರ್ 'ಮೂಕ ನಾಯಕ ಪ್ರಶಸ್ತಿ'ಗೆ ದಲಿತ ವಾಯ್ಸ್ ಸಂಪಾದಕ ವಿ.ಟಿ. ರಾಜಶೇಖರ್ (2019), ಮೈಸೂರು ವಿ.ವಿಯ ಪ್ರಾಧ್ಯಾಪಕಿ ಆರ್‌. ಇಂದಿರಾ (2020), ದೀನಬಂಧು ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥ ಜಿ.ಎಸ್‌. ಜಯದೇವ (2021), ಮೈಸೂರು ವಿ.ವಿ ಯ ಪ್ರಾಧ್ಯಾಪಕ ಮುಜಾಫರ್ ಅಸ್ಸಾದಿ (2022) ಅವರನ್ನು ಆಯ್ಕೆ ಮಾಡಲಾಗಿದೆ.

ವಿಮಾನ ನಿಲ್ದಾಣಕ್ಕೆ ನನ್ನ ಹೆಸರು ಬೇಡ: ಬಿಎಸ್‌ವೈ

ಬೆಂಗಳೂರು: ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರು ಇಡುವುದು ಬೇಡ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಪುನರುಚ್ಚರಿಸಿದ್ದಾರೆ.

ಈ ಸಂಬಂಧ ಗುರುವಾರ ಟ್ವೀಟ್ ಮಾಡಿರುವ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತೀರ್ಮಾನದಿಂದ ಮನದುಂಬಿ ಬಂದಿದೆ. ಈ ವಿಮಾನ ನಿಲ್ದಾಣಕ್ಕೆ ನನ್ನ ಹೆಸರು ಇಡುವುದು ಬೇಡ. ಕರ್ನಾಟಕದ ಯಾವುದೇ ಗಣ್ಯ ವ್ಯಕ್ತಿಗಳ ಹೆಸರು ಇಡುವುದು ಸೂಕ್ತ ಎಂದು ವಿನಯದಿಂದ ಮನವಿ ಮಾಡುತ್ತೇನೆ' ಎಂದು ಹೇಳಿದರು.

ಈ ಹಿಂದೆ ಪ್ರಸ್ತಾವ ಬಂದಾಗ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಪತ್ರ ಬರೆದು ತಮ್ಮ ಹೆಸರು ಇಡುವುದು ಬೇಡ, ಬೇರೆ ಯಾವುದೇ ಗಣ್ಯರ ಹೆಸರನ್ನಿಡುವಂತೆ ಸೂಚಿಸಿದ್ದರು.

ಡಯಟ್ ಹುದ್ದೆ ಕಡಿತ ಪ್ರಸ್ತಾವ ಹಿಂದಕ್ಕೆ; ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ರಾಜ್ಯದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಗಳಲ್ಲಿನ ಶೇ 70ರಷ್ಟು ಹುದ್ದೆಗಳನ್ನು ಕಡಿತಗೊಳಿಸುವ ಪ್ರಸ್ತಾವವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ವಾಪಸ್ ಕಳುಹಿಸಿದ್ದಾರೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯ ನಂತರ ಡಯಟ್‌ಗಳ ಸಿಬ್ಬಂದಿ ಸಂಖ್ಯೆ ಹೆಚ್ಚಿಸಿರುವ ಕೇರಳ, ಗುಜರಾತ್ ಹಾಗೂ ಸಾಂಸ್ಥಿಕ ಸ್ವರೂಪ ಬದಲಾವಣೆಗೊಂಡಿರುವ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಿಂದ ಮಾಹಿತಿ ಪಡೆದು ವರದಿ ಸಲ್ಲಿಸಲು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ನೇತೃತ್ವದಲ್ಲಿ ಸಮಿತಿ ರಚಿಸಲು ಸೂಚಿಸಿದ್ದಾರೆ.

'ಡಯಟ್‌ಗಳಲ್ಲಿನ ಅನಗತ್ಯ ಸಿಬ್ಬಂದಿ ಹೊರೆ ತಗ್ಗಿಸಬೇಕಿದ್ದು, ಪ್ರತಿ ಡಯಟ್‌ನಲ್ಲೂ ಒಬ್ಬರು ಪ್ರಾಂಶುಪಾಲ, ತಲಾ ನಾಲ್ವರು ಹಿರಿಯ ಉಪನ್ಯಾಸಕರು ಹಾಗೂ ಉಪನ್ಯಾಸಕರಿಗೆ ಸೀಮಿತಗೊಳಿಸಬೇಕಿದ್ದು, ಅದಕ್ಕಾಗಿ ಶೇ 70ರಷ್ಟು ಹುದ್ದೆ ರದ್ದು ಮಾಡಬಹುದು' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರು ಈಚೆಗೆ ಸಚಿವ ನಾಗೇಶ್ ಅವರಿಗೆ ಪ್ರಸ್ತಾವ ಸಲ್ಲಿಸಿದ್ದರು. ಈ ಕುರಿತು 'ಪ್ರಜಾವಾಣಿ' ಫೆ. 3ರ ಸಂಚಿಕೆಯಲ್ಲಿ 'ಡಯಟ್: ಶೇ 70ರಷ್ಟು ಹುದ್ದೆ ಕಡಿತ' ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಜೀವನವು ಸಜೀವವಾಗಿ ಇರಬೇಕಾದರೆ ಅದು ಪುರಾತನವಾದ ಸತ್ವಸಾರವನ್ನು ಕ್ಷಣಕ್ಷಣಕ್ಕೂ ಸಂಗ್ರಹಿಸುತ್ತಾ ನೂತನಕ್ಕೆ ಹರಿಯುತ್ತಿರಬೇಕು.

-ಕುವೆಂಪು

ಅದಾನಿ ಪ್ರಕರಣ: ಸರ್ಕಾರದ ಮೇಲಿನ ಆರೋಪಗಳಿಗೆ ಪ್ರಧಾನಿ ಉತ್ತರಿಸಬೇಕಿತ್ತು

ರಾಷ್ಟ್ರಪತಿಯವರು ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತ ಚರ್ಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ಬುಧವಾರ ಮತ್ತು ರಾಜ್ಯಸಭೆಯಲ್ಲಿ ಗುರುವಾರ ಉತ್ತರ ನೀಡಿದ್ದಾರೆ. ಈ ಭಾಷಣದಲ್ಲಿ ಅವರು ಏನನ್ನು ಹೇಳಿಲ್ಲ ಎಂಬುದೇ ಈ ಭಾಷಣದ ಅತ್ಯಂತ ಗಮನಾರ್ಹವಾದ ಅಂಶ. ಅಕ್ರಮಗಳನ್ನು ಎಸಗಿದೆ ಎಂಬ ಆರೋಪ ಹೊತ್ತಿರುವ ಗುಜರಾತ್‌ನ ಅದಾನಿ ಸಮೂಹಕ್ಕೆ ಪ್ರಧಾನಿ ಮತ್ತು ಅವರ ನೇತೃತ್ವದ ಸರ್ಕಾರವು ನ್ಯಾಯೋಚಿತವಲ್ಲದ ರೀತಿಯಲ್ಲಿ ಹಲವು ಅನುಕೂಲಗಳನ್ನು ಮಾಡಿಕೊಟ್ಟಿದೆ ಎಂಬ ಆರೋಪಕ್ಕೆ ಪ್ರಧಾನಿ ಉತ್ತರ ನೀಡಬಹುದು ಎಂಬ ನಿರೀಕ್ಷೆ ಇತ್ತು. ವಿರೋಧ ಪಕ್ಷಗಳ ಸದಸ್ಯರು, ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಈ ವಿಚಾರವನ್ನು ಸಂಸತ್ತಿನಲ್ಲಿ ಎತ್ತಿದ್ದರು. ಪ್ರಧಾನಿಯವರು ಈ ವಿಚಾರವನ್ನು ಪ್ರಸ್ತಾಪಿಸಲೇ ಇಲ್ಲ. ಬದಲಿಗೆ, ಜನರ ವಿಶ್ವಾಸದ ರಕ್ಷಾಕವಚ ಇರುವುದರಿಂದ 'ವಿರೋಧ ಪಕ್ಷಗಳ ಸುಳ್ಳುಗಳು ಮತ್ತು ನಿಂದನೆಗಳು' ತಮ್ಮನ್ನು ಬಾಧಿಸವು ಎಂದು ಹೇಳಿದರು. ಸರ್ಕಾರವು ಜನರಿಗಾಗಿ ರೂಪಿಸಿದ ಉಚಿತ ಆಹಾರಧಾನ್ಯ, ರೈತರಿಗೆ ಆರ್ಥಿಕ ನೆರವು ಮತ್ತು ಇತರ ಉಚಿತ ಕೊಡುಗೆಗಳಂತಹ ಜನಕಲ್ಯಾಣದ ಹಲವು ಯೋಜನೆಗಳಿಂದಾಗಿ ತಾವು ಈ ರಕ್ಷಾಕವಚವನ್ನು ಗಳಿಸಿಕೊಂಡಿದ್ದಾಗಿಯೂ ಮೋದಿ ಹೇಳಿದ್ದಾರೆ. ಜನಪ್ರಿಯತೆ ಇದೆ ಎಂಬುದನ್ನು ಆಧಾರವಾಗಿ ಇರಿಸಿಕೊಂಡು ರಾಜಕಾರಣಿಗೆ ಪ್ರಜಾಸತ್ತಾತ್ಮಕ ಉತ್ತರದಾಯಿತ್ವ ಮತ್ತು ಪ್ರಾಮಾಣಿಕತೆ ಇದೆ ಎಂದು ಹೇಳಲಾಗದು. ಸರ್ಕಾರದ ಯೋಜನೆಗಳಿಂದಾಗಿ ಪ್ರಧಾನಿಯು ಒಳ್ಳೆಯ ಹೆಸರು ಗಳಿಸಿಕೊಂಡಿದ್ದಾರೆ ಎಂಬ ಕಾರಣವನ್ನು ಮುಂದೊಡ್ಡಿ ಪ್ರಶ್ನೆಗಳಿಗೆ ಉತ್ತರಿಸುವುದನ್ನು ನಿರಾಕರಿಸುವುದು ಸರಿಯಲ್ಲ.



ತನ್ನ ನೀತಿಗಳು ಮತ್ತು ನಡವಳಿಕೆಗಳ ಬಗ್ಗೆ ಎತ್ತಲಾದ ಪ್ರಶ್ನೆಗಳಿಗೆ ಸರ್ಕಾರವು ಪ್ರಾಮಾಣಿಕವಾಗಿ ಮತ್ತು ನೇರವಾಗಿ ಉತ್ತರ ಹೇಳಬೇಕು

ಅದಾನಿ ಪ್ರಕರಣದ ಕುರಿತು ಎತ್ತಲಾದ ಪ್ರಶ್ನೆಗಳಿಗೆ ಉತ್ತರಿಸುವ ಬದಲು, ವಿರೋಧ ಪಕ್ಷಗಳನ್ನು ಟೀಕಿಸಿದರು ಮತ್ತು ಈ ಹಿಂದೆ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರದ ವೈಫಲ್ಯಗಳ ಕುರಿತು ವಾಗ್ದಾಳಿ ನಡೆಸಿದರು. ಹೀಗೆ ನಡೆಸಿದ ವಾಗ್ದಾಳಿಯಿಂದಾಗಿ ಸರ್ಕಾರದ ಮೇಲೆ ಹೊರಿಸಲಾದ ಆರೋಪಗಳು ಮರೆಯಾಗುವುದಿಲ್ಲ. ಅದಾನಿ ಸಮೂಹವು ಪ್ರಧಾನಿಯವರಿಗೆ ಆಪ್ತವಾಗಿರುವುದರಿಂದ ಆ ಸಮೂಹಕ್ಕೆ ಅಪಾರ ಲಾಭ ದೊರೆತಿದೆ ಎಂಬುದೂ ಸೇರಿದಂತೆ ಆ ಸಮೂಹದ ಮೇಲೆ ಹೊರಿಸಲಾದ ಆರೋಪಗಳು ಸಾರ್ವಜನಿಕವಾಗಿ ಚರ್ಚೆಗೆ ಒಳಗಾಗುತ್ತಿವೆ. ಹಾಗಾಗಿ, ವಿರೋಧ ಪಕ್ಷಗಳು ಮಾತ್ರವಲ್ಲದೆ ಇತರರು ಕೂಡ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. 'ನೀವು ಹಾಗೆ ಮಾಡಿಲ್ಲವೇ' ಎಂದು ಕೇಳುವುದು, ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವುದು, ಸ್ವಪ್ರತಿಷ್ಠೆ ತೋರುವುದು, ಟೊಳ್ಳು ಮಾತು ಆಡುವುದು ರಾಜಕೀಯ ವೇದಿಕೆಯೊಂದರಲ್ಲಿನ ಬೋಧನೆಗೆ ಸೂಕ್ತವಾಗಬಹುದೇನೋ. ಆದರೆ, ಸಂಸದೀಯ ವೇದಿಕೆಯಲ್ಲಿ ಇವು ನುಣುಚಿಕೊಳ್ಳುವಿಕೆ ಮತ್ತು ದಾರಿತಪ್ಪಿಸುವಿಕೆ ಎಂದೇ ಪರಿಗಣಿತವಾಗುತ್ತವೆ.

ಸಂಸತ್ತು ಇರುವುದು ದೇಶ ಮತ್ತು ಜನರಿಗೆ ಮಹತ್ವದ್ದಾದ ವಿಚಾರಗಳ ಕುರಿತು ತರ್ಕಬದ್ಧವಾದ ಚರ್ಚೆ ಮತ್ತು ಸಂವಾದ ನಡೆಸುವುದಕ್ಕೆ. ಇಂತಹ ವಿಚಾರಗಳನ್ನು ಪ್ರಸ್ತಾಪಿಸುವ ಹೊಣೆಗಾರಿಕೆ ವಿರೋಧ ಪಕ್ಷಗಳಿಗೆ ಇದೆ; ಸರ್ಕಾರದಿಂದ ಆಗಿರಬಹುದಾದ ತಪ್ಪುಗಳು ಮತ್ತು ಲೋಪಗಳಿಗೆ ಆಡಳಿತ ನಡೆಸುತ್ತಿರುವವರನ್ನು ಹೊಣೆಗಾರರನ್ನಾಗಿ ಮಾಡುವುದೂ ವಿರೋಧ ಪಕ್ಷಗಳ ಕೆಲಸ. ತನ್ನ ನೀತಿಗಳು ಮತ್ತು ನಡವಳಿಕೆಗಳ ಬಗ್ಗೆ ಎತ್ತಲಾದ ಪ್ರಶ್ನೆಗಳಿಗೆ ಸರ್ಕಾರವು ಪ್ರಾಮಾಣಿಕವಾಗಿ ಮತ್ತು ನೇರವಾಗಿ ಉತ್ತರ ಹೇಳಬೇಕು. ಅದಾನಿ ಸಮೂಹಕ್ಕೆ ಸಂಬಂಧಿಸಿದಂತೆ ಆ ಸಮೂಹದ ವಹಿವಾಟು ಹಾಗೂ ರಾಜಕಾರಣ ಮತ್ತು ವ್ಯಾಪಾರದ ನಡುವಣ ನಂಟಿನ ಕುರಿತು ಕೇಳಲಾಗುತ್ತಿರುವ ಪ್ರಶ್ನೆಗಳು ಉತ್ತರಿಸಲು ಅರ್ಹವಲ್ಲ ಮತ್ತು ಪ್ರಧಾನಿಯವರು ಎಲ್ಲವನ್ನೂ ಮೀರಿದವರು ಎಂದು ಘೋಷಿಸಿ ತಳ್ಳಿಹಾಕುವುದು ಸರಿಯಲ್ಲ. ರಾಷ್ಟ್ರದ ಸ್ವತ್ತುಗಳನ್ನು ಪರಭಾರೆ ಮಾಡುವುದಕ್ಕಾಗಿ ನಡೆದ ಟೆಂಡರ್‌ಗಳಲ್ಲಿ ಅದಾನಿ ಸಮೂಹಕ್ಕೆ ಯಶಸ್ಸು ಸಿಕ್ಕಿದೆ; ಸಂಪತ್ತಿನ ಶ್ರೇಯಾಂಕದಲ್ಲಿ ಅದಾನಿ ಅವರ ಮೇಲೇರಿಕೆ ವಿಸ್ಮಯ ಮೂಡಿಸುವಂತಿದೆ; ಅದಾನಿ ಸಮೂಹದ ವ್ಯವಹಾರಗಳ ಕುರಿತು ಪರಿಶೀಲನೆ ನಡೆಸಬೇಕಿದ್ದ ನಿಯಂತ್ರಣ ಮತ್ತು ತನಿಖಾ ಸಂಸ್ಥೆಗಳು ಇತ್ತೀಚಿನ ವರ್ಷಗಳಲ್ಲಿ ಈ ಕೆಲಸಗಳನ್ನು ಮಾಡಿಲ್ಲ. ಮೋದಿ ಅವರು ಅದಾನಿ ಸಮೂಹದ ಹಿಂದೆ ಗಟ್ಟಿಯಾಗಿ ನಿಂತಿರುವುದೇ ಈ ಎಲ್ಲದಕ್ಕೂ ಕಾರಣ ಎಂಬ ಭಾವನೆ ಜನರಲ್ಲಿ ಬಲವಾಗಿ ನೆಲೆಯೂರಿದೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವುದರಿಂದ ಮೋದಿ ಅವರು ಪಲಾಯನ ಮಾಡಬಾರದು. ಹಾಗೆ ಪಲಾಯನ ಮಾಡಿದರೆ ಅವರು ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಾರೆ.

ದಿನದ ಟ್ವೀಟ್

ಅರ್ಹತೆಗೆ ಸಂದ ಗೌರವ



ಕ್ರೀಡಾಪ್ರೇಮಿಗಳಿಗೆ ಇದೊಂದು ಮಹತ್ವದ ಕ್ಷಣ... ಚಾಂಪಿಯನ್ ಓಟಗಾರ್ತಿ ಹಾಗೂ ನಮ್ಮ ಅಗ್ರಪಂಕ್ತಿಯ ಒಲಿಂಪಿಯನ್ ಅಥ್ಲೀಟ್ ಪಿ.ಟಿ.ಉಷಾ ಅವರು ರಾಜ್ಯಸಭಾ ಕಲಾಪದ ಅಧ್ಯಕ್ಷತೆ ವಹಿಸಿದ್ದರು. ನಿಜಕ್ಕೂ ಇದು ಅರ್ಹವಾದ ಮನ್ನಣೆ!

ಡಾ. ಸಂಗೀತಾ ರೆಡ್ಡಿ, ಜಂಟಿ ವ್ಯವಸ್ಥಾಪಕ ನಿರ್ದೇಶಕಿ, ಅಪೋಲೊ ಹಾಸ್ಪಿಟಲ್ಸ್ ಗ್ರೂಪ್

ಕಿಡಿನುಡಿ



ರಾಜ್ಯಸಭೆಯು ಹಿರಿಯರ ಸದನ. ಆದರೆ ಅಲ್ಲಿನ ಗದ್ದಲವನ್ನು ನೋಡಿ. ಎಷ್ಟೊಂದು ಅಬ್ಬರ ಮತ್ತು ಕಿರುಚಾಟ. ದೇಶದ ಪ್ರಧಾನ ಮಂತ್ರಿಗೆ ಅಲ್ಲಿ ಮಾತನಾಡಲು ಅವಕಾಶ ಕೊಡುತ್ತಿಲ್ಲ. ಇದು ಅನುಭವಿಗಳ ಹಾಗೂ ಗೌರವಾನ್ವಿತರ ಸದನವಲ್ಲವೇ? ನಿಜವಾಗಲೂ ವ್ಯಥೆಯಾಗುತ್ತದೆ. ಇಂತಹವರಿಗಾಗಿ ತೆರಿಗೆದಾರರ ಹಣ ವ್ಯರ್ಥವಾಗುತ್ತಿದೆ.

ಸ್ಮಿತಾ ದೇಶಮುಖ್, ಸಂವಹನ ತಜ್ಞೆ

25 ವರ್ಷಗಳ ಹಿಂದೆ

ಮಂಗಳವಾರ, 10–2–1998

• ಅರಣ್ಯ ಸಚಿವ ನಾಗಮಾರಪಲ್ಲಿ ರಾಜೀನಾಮೆ

ಬೆಂಗಳೂರು, ಫೆ. 9– ಜೆ.ಎಚ್.ಪಟೇಲ್ ಸಚಿವ ಸಂಪುಟಕ್ಕೆ ನಿರೀಕ್ಷಿತವಾದರೂ ಅನಿರೀಕ್ಷಿತ ಸಂದರ್ಭದಲ್ಲಿ ಅರಣ್ಯ ಸಚಿವ ಗುರುಪಾದಪ್ಪ ನಾಗಮಾರಪಲ್ಲಿ ಅವರು ತಮ್ಮ ಸಚಿವ ಸ್ಥಾನಕ್ಕೆ ಇಂದಿಲ್ಲಿ ರಾಜೀನಾಮೆ ಸಲ್ಲಿಸಿದರು.

ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ನಾಗಮಾರಪಲ್ಲಿ ಅವರ ರಾಜೀನಾಮೆಯನ್ನು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಶಿಫಾರಸಿನ ಅನ್ವಯ ಇಂದು ರಾತ್ರಿ ಅಂಗೀಕರಿಸಿದ್ದಾರೆ.

ನಾಗಮಾರಪಲ್ಲಿ ಅವರ ರಾಜೀನಾಮೆಯಿಂದಾಗಿ ಇಲ್ಲಿಯವರೆಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದವರ ಸಂಖ್ಯೆ ನಾಲ್ಕಕ್ಕೇರಿದ್ದು, ಸದ್ಯದಲ್ಲೇ ಅವರು ಲೋಕಶಕ್ತಿಯನ್ನು ಸೇರುವ ಸೂಚನೆಗಳಿವೆ.

• ಕೆರೆಗೆ ವ್ಯಾನ್ ಬಿದ್ದು 7 ಮಂದಿ ಸಾವು

ಬೆಂಗಳೂರು, ಫೆ. 9– ಮೆಟಡಾರ್ ವ್ಯಾನಿನ ಆ್ಯಕ್ಸೆಲ್ ತುಂಡಾಗಿ ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮವಾಗಿ ಚನ್ನಪಟ್ಟಣ ಬಳಿಯ ರಾಮಮ್ಮನ ಕೆರೆಯಲ್ಲಿ ಮುಳುಗಿದ್ದರಿಂದ ಇಬ್ಬರು ಮಕ್ಕಳೂ ಸೇರಿದಂತೆ ಒಟ್ಟು ಏಳು ಮಂದಿ ಮೃತಪಟ್ಟಿದ್ದು, ಇತರ 12 ಮಂದಿ ಗಾಯಗೊಂಡಿದ್ದಾರೆ.

ಚನ್ನಪಟ್ಟಣದಲ್ಲಿ ನಡೆಯಬೇಕಾಗಿದ್ದ ಭಾರತೀಯ ಜನತಾ ಪಕ್ಷದ ಚುನಾವಣಾ ಸಭೆಯಲ್ಲಿ ಪಾಲ್ಗೊಳ್ಳಲು ಚನ್ನಪಟ್ಟಣ ತಾಲ್ಲೂಕು ಬೇವೂರಿನಿಂದ ಕುಂತೂರು ದೊಡ್ಡಿ, ನಾಗವಾರ, ದಶಾವರ ಹಾಗೂ ತಿಟ್ಟಮಾರನಹಳ್ಳಿ ಮುಖಾಂತರ ವ್ಯಾನ್ ಬರುತ್ತಿದ್ದಾಗ ಕೆರೆ ಏರಿ ಮೇಲೆ ದುರಂತ ಸಂಭವಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 10–2–1973

• ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರದ ಆರ್ಥಿಕ ನೆರವಿನ ಭರವಸೆ

ದಾವಣಗೆರೆ, ಫೆ. 9 – ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಇರುವ ಅವಕಾಶಗಳನ್ನು ಮನಗಂಡಿರುವ ಕೇಂದ್ರ ಸರ್ಕಾರ ಹೊಸ ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕ ನೆರವು ನೀಡಲು ಮುಂದೆ ಬಂದಿದೆ.

ಇಲ್ಲಿಗೆ ಸಮೀಪದ ಕುಕ್ಕವಾಡ ಗ್ರಾಮದಲ್ಲಿ ದಾವಣಗೆರೆ ಸಕ್ಕರೆ ಕಾರ್ಖಾನೆ ಶಂಕುಸ್ಥಾಪನೆಯನ್ನು ಇಂದು ನೆರವೇರಿಸಿದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಈ ವಿಷಯವನ್ನು ತಿಳಿಸಿ, ಕೇಂದ್ರ ಯೋಜನಾ ಸಚಿವ ಶ್ರೀ ಡಿ.ಪಿ.ಧರ್ ಅವರು ಇತ್ತೀಚೆಗೆ ಆ ಬಗ್ಗೆ ಆಶ್ವಾಸನೆ ನೀಡಿದ್ದಾರೆ ಎಂದರು.

'ರಾಜ್ಯದಲ್ಲಿ ಪ್ರಸ್ತುತ ಹದಿಮೂರು ಸಕ್ಕರೆ ಕಾರ್ಖಾನೆಗಳಿವೆ. ಎಂಟಕ್ಕೆ ಲೈಸೆನ್ಸ್ ದೊರೆತಿದೆ. ಅವುಗಳಲ್ಲಿ ಜಂಟಿ ಕ್ಷೇತ್ರದ ಕಾರ್ಖಾನೆಯ ಶಂಕುಸ್ಥಾಪನೆಯನ್ನು ಇಂದು ನೆರವೇರಿಸಲಾಗಿದೆ' ಎಂದು ತಿಳಿಸಿದರು.

• ಖಂಡನೆ ದೃಷ್ಟಿಯಿಂದ ವಿಯೆಟ್ನಾಂ ಒಪ್ಪಂದ ಟೀಕಿಸಲಿಲ್ಲ; ಇಂದಿರಾ

ಕಠಮಂಡು, ಫೆ. 9– ವಿಯೆಟ್ನಾಂ ಕದನವಿರಾಮ ಒಪ್ಪಂದ ಏರ್ಪಟ್ಟ ವಿಧಾನ ಕುರಿತು ಈಚೆಗೆ ಐಕ್ಯ ಏಷ್ಯಾ ಸಮ್ಮೇಳನದಲ್ಲಿ ತಾವು ಮಾಡಿದ ಭಾಷಣದ ಕೆಲವು ಅಂಶಗಳ ಬಗ್ಗೆ ಅಮೆರಿಕ ಸರ್ಕಾರದಿಂದ ಅಹಿತ ಪ್ರತಿಕ್ರಿಯೆ ಉಂಟಾಗಿರುವುದಕ್ಕೆ ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ವಿಷಾದ ವ್ಯಕ್ತಪಡಿಸಿದರು.

ವಿಯೆಟ್ನಾಂ ಒಪ್ಪಂದದ ಕುರಿತ ತಮ್ಮ ಅಭಿಪ್ರಾಯಗಳು ಯಾವ ರಾಷ್ಟ್ರವನ್ನೂ ಉದ್ದೇಶಿಸಿ ಮಾಡಲಾದ ಟೀಕೆಗಳಲ್ಲವೆಂದು ವಿಶ್ವ ವ್ಯವಹಾರ ಕುರಿತ ನೇಪಾಳ ಮಂಡಲಿಯಲ್ಲಿ ಮಾಡಿದ ಭಾಷಣದಲ್ಲಿ ವಿವರಿಸಿದರು.

ಪ್ರಲ್ಹಾದ ಜೋಶಿ ಕುರಿತು ಎಚ್‌ಡಿಕೆ ಆಡಿದ ಮಾತು ರಾಜಕೀಯ ಕೊಳವನ್ನು ಕದಡಿದೆ

ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ಏಕಿಲ್ಲ?!



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ರಾಜ್ಯ ವಿಧಾನಸಭಾ ಚುನಾವಣೆಗೆ ದಿನಗಣನೆಯು ನಿಜಕ್ಕೂ ಶುರುವಾಗಿದೆ. ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಅಭಿಯಾನವನ್ನು ಇನ್ನಷ್ಟು ಎದ್ದುಕಾಣುವಂತೆ ಮಾಡುತ್ತಿವೆ. ಅಲ್ಲದೆ, ಚುನಾವಣೆಯ ಹೊತ್ತಿನ ಬೆಳವಣಿಗೆಗಳು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿವೆ. ಪಕ್ಷದಿಂದ ಪಕ್ಷಕ್ಕೆ ಹಾರುವುದು ಶುರುವಾಗಿದೆ, ಅದು ಮುಂದುವರಿಯಲಿದೆ. ಫಲಿತಾಂಶ ಬಂದ ನಂತರದಲ್ಲಿ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಚರ್ಚೆಗಳೂ ಈಗ ಶುರುವಾಗಿವೆ. ಈ ಪ್ರಶ್ನೆಗೆ ಉತ್ತರವು ಬಹುಮತದ ಗಡಿಗೆ ಯಾರು ಸನಿಹ ಬರುತ್ತಾರೆ ಅಥವಾ ಯಾರು ಆ ಗಡಿಯನ್ನು ದಾಟುತ್ತಾರೆ ಎಂಬುದನ್ನು ಆಧರಿಸಿದೆ. ಹೀಗಿದ್ದರೂ, ಸಂಭಾವ್ಯ ಮುಖ್ಯಮಂತ್ರಿ ಯಾರು ಎಂಬ ಊಹೆಗಳು ಎಲ್ಲ ಪಕ್ಷಗಳಲ್ಲಿಯೂ ಇವೆ.

ಬಿಜೆಪಿಯಾಗಲಿ, ಕಾಂಗ್ರೆಸ್ಸಾಗಲಿ ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ಈವರೆಗೂ ಘೋಷಿಸದೇ ಇರುವುದು ಕುತೂಹಲಕರ. ಜೆಡಿಎಸ್‌ನಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿ ಅಭ್ಯರ್ಥಿ ಎಂಬುದರಲ್ಲಿ ಎರಡನೆಯ ಮಾತಿಲ್ಲ ಎಂಬಂತಿದೆ. ಆದರೆ ಜೆಡಿಎಸ್‌ಗೆ ಸರ್ಕಾರ ರಚಿಸುವ ವಿಚಾರದಲ್ಲಿ ಇರುವ ಒಂದೇ ಆಶಾಭಾವನೆಯೆಂದರೆ, ವಿಧಾನಸಭೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಸಿಗದಿರುವುದು ಹಾಗೂ ತಾನು ಕಿಂಗ್‌ಮೇಕರ್ ಆಗುವುದು. ಹೀಗಿದ್ದರೂ, ಮುಖ್ಯಮಂತ್ರಿ ಯಾರಾಗಬಹುದು ಎಂಬುದರ ಸುತ್ತಲಿನ ಚರ್ಚೆಗಳು ಚುನಾವಣಾ ಕಣದಲ್ಲಿನ ಪ್ರಮುಖ ಪ್ರಶ್ನೆಗಳ ಸುತ್ತ ಗಿರಕಿ ಹೊಡೆಯುತ್ತಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಲಿದ್ದಾರೆ ಎಂದು ಬಿಜೆಪಿ ಹೇಳುತ್ತ ಬಂದಿದೆ. ಫಲಿತಾಂಶ ಬಂದ ನಂತರದಲ್ಲಿ ಮುಂದಿನ ನಾಯಕ ಯಾರು ಎಂಬುದನ್ನು ತೀರ್ಮಾನಿಸಲಾಗುತ್ತದೆ ಎಂಬ ನಿಲುವನ್ನು ಪಕ್ಷ ತಾಳಿದೆ. ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಇದೇ ಬಗೆಯ ನಿಲುವು ತಾಳಿತ್ತು. ಚುನಾವಣೆಯವರೆಗೆ ಸರ್ಬಾನಂದ ಸೋನೊವಾಲ್ ಅವರನ್ನು ನಾಯಕನ ಸ್ಥಾನದಲ್ಲಿರಿಸಿತ್ತು. ಗೆದ್ದ ನಂತರದಲ್ಲಿ ಹಿಮಂತ ಬಿಸ್ವ ಶರ್ಮ ಅವರನ್ನು ಮುಖ್ಯಮಂತ್ರಿಯನ್ನಾಗಿಸಲಾಯಿತು. ಕುಮಾರಸ್ವಾಮಿ ಹಾಗೂ ಪ್ರಲ್ಹಾದ ಜೋಶಿ ನಡುವಿನ ಈಚಿನ ಮಾತಿನ ಸಮರದಲ್ಲಿ, ಕುಮಾರಸ್ವಾಮಿ ಅವರು ಆರ್‌ಎಸ್‌ಎಸ್‌ನ ಆಯ್ಕೆ ಜೋಶಿ ಎಂದು ಹೇಳಿದ್ದಾರೆ. ಲಿಂಗಾಯತ ಮತಬ್ಯಾಂಕ್ ಗಟ್ಟಿಯಾಗಿ ಇರಿಸಿಕೊಂಡು, ಒಕ್ಕಲಿಗ ಸಮುದಾಯವನ್ನು ಸೆಳೆಯಲು ಬಿಜೆಪಿ ಯತ್ನಿಸುತ್ತಿದೆ. ಈ ಹೊತ್ತಿನಲ್ಲಿ ಕುಮಾರಸ್ವಾಮಿ ನೀಡಿರುವ ಹೇಳಿಕೆಯು ರಾಜಕೀಯದ ಕೊಳವನ್ನು ಕದಡಿದೆ. ಯಡಿಯೂರಪ್ಪ ಅವರ ಸ್ಥಾನಕ್ಕೆ ಬೊಮ್ಮಾಯಿ ಅವರನ್ನು ತಂದು ಕೂರಿಸಿದಾಗ, ಲಿಂಗಾಯತ ಸಮುದಾಯದ ಮೇಲೆ ಒಂದು ಕಣ್ಣು ಇತ್ತು ಎಂಬುದು ಸ್ಪಷ್ಟ. ಬೊಮ್ಮಾಯಿ ಅವರು ಬಿಜೆಪಿಯ ಕೇಂದ್ರ ನಾಯಕರ ಆಯ್ಕೆ, ಅದಕ್ಕೆ ಯಡಿಯೂರಪ್ಪ ಅವರ ಅನುಮೋದನೆ ಮಾತ್ರ ಇತ್ತು; ಯಡಿಯೂರಪ್ಪ ಆಯ್ಕೆಯನ್ನು ಕೇಂದ್ರ ನಾಯಕರು ಅನುಮೋದಿಸಿದ್ದಲ್ಲ ಎಂಬುದನ್ನು ಈ ಲೇಖಕ ಹಿಂದಿನಿಂದಲೂ ಹೇಳಿರುವುದುಂಟು.

ಬೊಮ್ಮಾಯಿ ಅವರಿಗೆ ತಾವೊಬ್ಬ ನಾಯಕ ಎಂಬುದನ್ನು ಪೂರ್ಣ ಪ್ರಮಾಣದಲ್ಲಿ ತೋರಿಸಿಕೊಳ್ಳಲು ಆಗದಿರುವ ಕಾರಣಕ್ಕೆ, ಕೇಂದ್ರದ ನಾಯಕರ ವಿಶ್ವಾಸ ಗಳಿಸಿಕೊಳ್ಳಲು ಆಗದಿರುವ ಕಾರಣಕ್ಕೆ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಾಗಿಲ್ಲ. 2018ರಲ್ಲಿ ಬಿಜೆಪಿ ಅಧ್ಯಕ್ಷರಾಗಿದ್ದ ಅಮಿತ್ ಶಾ ಅವರು ಯಡಿಯೂರಪ್ಪ ಅವರನ್ನು ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಚುನಾವಣೆಗೆ ಒಂದು ವರ್ಷಕ್ಕೂ ಹೆಚ್ಚಿನ ಅವಧಿ ಇದ್ದಾಗಲೇ ಘೋಷಿಸಿದ್ದರು ಎಂಬುದು ಇಲ್ಲಿ ಉಲ್ಲೇಖಾರ್ಹ. ಈ ಬಾರಿ ಪಕ್ಷವು ಹೆಚ್ಚು ಎಚ್ಚರಿಕೆಯಿಂದ ಹೆಜ್ಜೆ ಇರಿಸಿದೆ. ಇಲ್ಲಿರುವ ಕಾರಣ ಸ್ಪಷ್ಟ. ರಾಜ್ಯದ ಜಾತಿ ಲೆಕ್ಕಾಚಾರ ಗಮನಿಸಿದರೆ, ಪಕ್ಷಕ್ಕೆ ಲಿಂಗಾಯತ ಸಮುದಾಯದ ಬೆಂಬಲ ಅಗತ್ಯ. ಪ್ರಬಲ ಒಕ್ಕಲಿಗ ಸಮುದಾಯ ಹಾಗೂ ಹಿಂದುಳಿದ ವರ್ಗಗಳ ಪೈಕಿ ಪ್ರಬಲವಲ್ಲದ ಸಮುದಾಯಗಳ ಬೆಂಬಲವೂ ಪಕ್ಷಕ್ಕೆ ಬೇಕು. ದಲಿತರು ಮತ್ತು ಬುಡಕಟ್ಟು ಸಮುದಾಯಗಳ ಮತಗಳೂ ಪಕ್ಷಕ್ಕೆ ಬೇಕಿವೆ. ಇವೆಲ್ಲ ಆಗಬೇಕು ಎಂದಾದರೆ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸದೇ ಇರುವುದು ಒಳಿತು ಎಂದು ಪಕ್ಷ ಭಾವಿಸಿರಬಹುದು.

ಯಡಿಯೂರಪ್ಪ ಅವರ ವಿಚಾರವೇ ಬೇರೆ. ಅವರು ಲಿಂಗಾಯತ ಸಮುದಾಯದ ಪ್ರಭಾವಿ ನಾಯಕ ಹೌದಾದರೂ, ಅವರಿಗೆ ತಮ್ಮ ಜಾತಿಯ ಆಚೆಗೂ ಮಾನ್ಯತೆ ಹಾಗೂ ಬೆಂಬಲ ಇದೆ. ಅದರಲ್ಲೂ, ಬಿಜೆಪಿ ಬಗ್ಗೆ ಸಹಾನುಭೂತಿ ಹೊಂದಿರುವವರ ನಡುವೆ ಯಡಿಯೂರಪ್ಪ ಅವರಿಗೆ ಬೆಂಬಲವಿದೆ. ಆದರೆ ಇದೇ ಮಾತನ್ನು ಈಗಿನ ಮುಖ್ಯಮಂತ್ರಿಯ ವಿಚಾರದಲ್ಲಿ ಹೇಳುವುದು ಕಷ್ಟ. ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸದೇ ಇದ್ದರೆ, ವಿಧಾನಸಭೆಯಲ್ಲಿ ಬಹುಮತ ದೊರೆತ ಸಂದರ್ಭದಲ್ಲಿ, ಅಚ್ಚರಿಯ ಆಯ್ಕೆಯೊಂದಕ್ಕೆ ಅವಕಾಶ ಇರುತ್ತದೆ.

ಬಿಜೆಪಿಯ ಕೇಂದ್ರ ನಾಯಕತ್ವವು ಯಾವಾಗಲೂ 'ಅಚ್ಚರಿಯ ಆಯ್ಕೆ'ಗೆ ಹೆಚ್ಚಿನ ಒಲವು ತೋರಿಸಿದೆ ಎಂಬುದನ್ನು ಗಮನಿಸಬೇಕು. ಪ್ರಮುಖ ಹುದ್ದೆಗಳಿಗೆ ಅಭ್ಯರ್ಥಿ ಆಗುವವರು ಎಂದು ಮಾಧ್ಯಮಗಳಲ್ಲಿ ಬಿಂಬಿತರಾಗುವುದೇ (ಅಂದರೆ, ಮುಖ್ಯಮಂತ್ರಿ ಸ್ಥಾನಕ್ಕೆ, ಕೇಂದ್ರದಲ್ಲಿ ಪ್ರಮುಖ ಹುದ್ದೆಗಳಿಗೆ, ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಹುದ್ದೆಗಳಿಗೆ) ಮುಂದೊಂದು ದಿನ ತಮಗೆ ಸಮಸ್ಯೆ ತರುತ್ತದೆ ಎಂಬುದನ್ನು ಬಿಜೆಪಿ ನಾಯಕರ ಪೈಕಿ ಬಹುತೇಕ ಮಂದಿ ಗೊತ್ತುಮಾಡಿಕೊಂಡಿದ್ದಾರೆ. ಇದು ಕರ್ನಾಟಕದ ಸಂದರ್ಭದಲ್ಲಿಯೂ ನಿಜವಾಗಬಹುದು.




ಕಾಂಗ್ರೆಸ್ಸಿನ ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ತಾವು ಬದ್ಧ ಎಂದು ಹೇಳುತ್ತಲೇ, ಮುಖ್ಯಮಂತ್ರಿ ಸ್ಥಾನಕ್ಕೆ ತಾವು ಆಕಾಂಕ್ಷಿಗಳು ಎಂಬುದನ್ನು ಬಹಿರಂಗವಾಗಿ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷವು ಬೆಂಬಲವನ್ನು ಕೋರುವ ಎರಡು ಪ್ರಮುಖ ಸಮುದಾಯಗಳನ್ನು ಈ ಇಬ್ಬರು ಪ್ರತಿನಿಧಿಸುತ್ತಾರೆ. 2013ರಲ್ಲಿ ಕಾಂಗ್ರೆಸ್ಸಿನ ಗೆಲುವಿಗೆ ಅಹಿಂದ ವರ್ಗಗಳು ಮುಖ್ಯವಾಗಿದ್ದವು. 2018ರಲ್ಲಿ ಈ ಸಮುದಾಯಗಳ ಮತವು ಕಾಂಗ್ರೆಸ್ಸಿಗೆ ಸಿಕ್ಕ ಪ್ರಮಾಣದಲ್ಲಿ ಕುಸಿತ ಆಗಿತ್ತು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಒಳ್ಳೆಯ ಸಾಧನೆ ತೋರಬೇಕು ಎಂದಾದರೆ, ಅಹಿಂದ ಸಮುದಾಯಗಳ ಮತವು ಮತ್ತೆ ಪಕ್ಷಕ್ಕೆ ಸಿಗಬೇಕು. ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗ ಮತಗಳು ಮೂರು ಭಾಗಗಳಾಗಿ ಹಂಚಿಹೋಗಿದ್ದವು. ಒಕ್ಕಲಿಗರ ಮತಗಳು ತನಗೆ ಹೆಚ್ಚು ಸಿಗಲಿ ಎಂದು ಕಾಂಗ್ರೆಸ್ ಕೂಡ ಬಯಸುತ್ತಿದೆ. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ಚುನಾವಣಾ ಪ್ರಚಾರಗಳಲ್ಲಿ ಸಕ್ರಿಯವಾಗಿ ಇರಿಸಬೇಕಾದ ಅಗತ್ಯ ಪಕ್ಷಕ್ಕೆ ಏಕಿದೆ ಎಂಬುದನ್ನು ಇದು ವಿವರಿಸುತ್ತದೆ. ಅದಕ್ಕಿಂತ ಹೆಚ್ಚಾಗಿ, ಮುಖ್ಯಮಂತ್ರಿ ಅಭ್ಯರ್ಥಿಯ ಪ್ರಶ್ನೆಯನ್ನು ಮುಕ್ತವಾಗಿ ಇರಿಸಿಕೊಂಡಿರುವುದು ಏಕೆ ಎಂಬುದನ್ನೂ ಇದು ಹೇಳುತ್ತದೆ.

ಕಾಂಗ್ರೆಸ್ಸಿನಲ್ಲಿ ಈ ಸ್ಥಾನಕ್ಕೆ ಇತರ ನಾಯಕರೂ ಆಕಾಂಕ್ಷಿಗಳು. ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿರುವುದು ಇಲ್ಲಿ ಪರಿಸ್ಥಿತಿಯನ್ನು ಸಂಕೀರ್ಣವಾಗಿಸಿದೆ. ಅವರಿಗೆ ರಾಷ್ಟ್ರಮಟ್ಟದಲ್ಲಿ ಜವಾಬ್ದಾರಿಗಳು ಇರುವ ಕಾರಣ, ಅವರು ಮುಖ್ಯಮಂತ್ರಿ ಅಭ್ಯರ್ಥಿ ಆಗುವ ಸಾಧ್ಯತೆ ಇಲ್ಲ. ಆದರೆ, ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯ ಗಳಿಸಿದರೆ, ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬುದನ್ನು ತೀರ್ಮಾನಿಸುವಲ್ಲಿ ಖರ್ಗೆ ಅವರು ಮುಖ್ಯ ಪಾತ್ರವನ್ನು ವಹಿಸುವುದು ಖಚಿತ.

ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ಘೋಷಿಸದೇ ಇರುವುದು ಪಕ್ಷದ ಒಗ್ಗಟ್ಟಿನ ಮೇಲೆ ಪರಿಣಾಮ ಬೀರುತ್ತದೆಯೇ, ಚುನಾವಣಾ ಅಭಿಯಾನದ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದನ್ನು ತೀರ್ಮಾನಿಸುವ ಪ್ರಮುಖ ಘಟ್ಟ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಹಂತ. ಮುಖ್ಯಮಂತ್ರಿ ಆಗುವ ಆಕಾಂಕ್ಷೆ ಇರುವ ಯಾವ ನಾಯಕ ತನ್ನ ಬೆಂಬಲಿಗರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ಕೊಡಿಸುತ್ತಾನೆ ಎಂಬುದು ಮಹತ್ವದ್ದು. ಇದು ಬಿಜೆಪಿಗಿಂತಲೂ ಕಾಂಗ್ರೆಸ್ಸಿಗೆ ಹೆಚ್ಚು ಮುಖ್ಯವಾಗಬಹುದು. ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಕೆಲಸವನ್ನು ಬಿಜೆಪಿಯಲ್ಲಿ ಕೇಂದ್ರದ ನಾಯಕರೇ ಮಾಡಲಿದ್ದಾರೆ ಎಂಬುದು ಸ್ಪಷ್ಟ. ಹೀಗಿದ್ದರೂ, ಅಸಮಾಧಾನದ ಪರಿಣಾಮ ಇದ್ದೇ ಇರುತ್ತದೆ.

ಕರ್ನಾಟಕದ ಮತದಾರರು ತಮ್ಮ ಮುಖ್ಯಮಂತ್ರಿ ಯಾರು ಎಂಬುದನ್ನು ತಿಳಿದುಕೊಳ್ಳಲು, ಚುನಾವಣಾ ಫಲಿತಾಂಶ ಹಾಗೂ ನಂತರದ ಬೆಳವಣಿಗೆಗಳಿಗೆ ಕಾಯಬೇಕಾಗುತ್ತದೆ.

ಚುರುಮುರಿ



ಭೂಕಂಪ ಭವಿಷ್ಯ!

• ಬಿ.ಎನ್.ಮಲ್ಲೇಶ್

'ಹಲೋ... ಗುರೂಜಿ ನಮಸ್ತೆ, ಟರ್ಕಿಯಲ್ಲಿ ಭೂಕಂಪ ಆಗುತ್ತೆ ಅಂತ ಒಂದು ವರ್ಷ ಮೊದ್ಲೇ ನೀವು ಭವಿಷ್ಯ ನುಡಿದಿದ್ರಿ ಅಂತ ಟಿ.ವಿ.ಯಲ್ಲಿ ಬರ್ತಿತ್ತು, ನಿಜಾನಾ ಗುರೂಜಿ?'

'ನಿಜ, ಈ ಜಗತ್ತಿನಲ್ಲಿ ಎಲ್ಲಿ ಏನೇ ನಡೆದ್ರೂ ನಮಗೆ ಮೊದಲೇ ಗೊತ್ತಾಗಿಬಿಡುತ್ತೆ. ಯಾರು ನೀವು?'

'ನಾನು ತೆಪರೇಸಿ ಅಂತ, ಪತ್ರಕರ್ತ. ಅಲ್ಲ, ಎಲ್ಲಿ ಏನೇ ನಡೆದ್ರೂ ನಿಮಗೆ ಮೊದ್ಲೇ ಗೊತ್ತಾಗಿಬಿಡುತ್ತಾ? ಅದೆಂಗೆ?'

'ಅಂಥ ಶಕ್ತಿ ನಮ್ಮಲ್ಲಿದೆ, ನಾನು ಹೇಳಿದ್ದೆಲ್ಲ ನಿಜವಾಗ್ಲೇಬೇಕು. ಈ ವರ್ಷ ಇನ್ನೂ ಘೋರ ಆಗೋದಿದೆ, ಭೂಮಿ ಕದಲುತ್ತೆ, ಕತ್ತಲು ಕವಿಯುತ್ತೆ...'

'ಗುರೂಜಿ ಹೆದರಿಸಬೇಡಿ, ನಂಗೆ ಕೆಲವು ಪ್ರಶ್ನೆ ಕೇಳೋದಿದೆ, ದುಡ್ಡು ಎಷ್ಟಾದ್ರು ಪರ್ವಾಗಿಲ್ಲ'.

'ಸರಿ ಅದೇನು ಕೇಳು'.

'ಗುರೂಜಿ, ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಯಾರು? ಈ ಚುನಾವಣೆ ಒಳಗೆ ಯಾರ್‍ಯಾರು ಯಾವ ಪಕ್ಷದಿಂದ ಎಲ್ಲೆಲ್ಲಿಗೆ ಹಾರ್ತಾರೆ? ನಮ್ಮ ಭವಾನಮ್ಮಂಗೆ ಜೆಡಿಎಸ್ ಟಿಕೆಟ್ ಸಿಗುತ್ತಾ ಇಲ್ವಾ? ಕಾಂಗ್ರೆಸ್ ಹಸ್ತದಲ್ಲಿ ಒಂದು ಗೆರೆ ಜಾಸ್ತಿ ಆಗಿದೆಯಲ್ಲ, ಆ ಅದೃಷ್ಟದ ಗೆರೆ ಸಿದ್ರಾಮಯ್ಯ ಅವರದೋ ಡಿಕೆಶಿ ಅವರದೋ? ಒಂದು ವೇಳೆ ಅತಂತ್ರ ಫಲಿತಾಂಶ ಬಂದ್ರೆ ಕುಮಾರಣ್ಣ ಯಾರಿಗೆ ಸಪೋರ್ಟ್ ಮಾಡ್ತಾರೆ? ಅವರೇ ಮತ್ತೆ ಮುಖ್ಯಮಂತ್ರಿ ಆಗ್ತಾರೋ ಅಥ್ವ ಕಿಂಗ್ ಮೇಕರ್ ಆಗ್ತಾರೋ?'

'ಲೋ ಮೂರ್ಖ, ಈ ಭವಿಷ್ಯನೆಲ್ಲ ನನಗಿಂತ ನೀವು ಪತ್ರಕರ್ತರೇ ಚೆನ್ನಾಗಿ ಹೇಳ್ತೀರಿ. ನಾನೇನಿದ್ರು ಭೂಕಂಪ, ಪ್ರಳಯದ ಭವಿಷ್ಯ ಹೇಳೋನು'.

'ಛೆ, ಎಂಥ ಕೆಲ್ಸ ಆಯ್ತಲ್ಲ ಗುರೂಜಿ. ಹೋಗ್ಲಿ, ಭೂಕಂಪದ ಭವಿಷ್ಯ ಹೇಳ್ತೀನಿ ಅಂದ್ರಲ್ಲ, ನಮ್ಮ ಅಡುಗೆ ಮನೇಲಿ ಭೂಕಂಪ ಯಾವ್ಯಾವಾಗ ಆಗುತ್ತೆ ಮೊದ್ಲೇ ಹೇಳೋಕಾಗುತ್ತಾ?'

'ಲೋ ಮೂರ್ಖ ಶಿಖಾಮಣಿ, ಈ ಭವಿಷ್ಯನ ನಾನಲ್ಲ, ಯಾವನಿಗೂ ಹೇಳೋಕಾಗಲ್ಲ, ಇಡು ಫೋನು...'

ತೆಪರೇಸಿ ಪಿಟಿಕ್ಕೆನ್ನಲಿಲ್ಲ.

ಸಂಗತ

ರೈತನಲ್ಲಿವೆ ಪ್ರಶ್ನೆ: ಉತ್ತರದಾಯಿ ಯಾರು?

ರೈತರು ಕಾಲಕಾಲಕ್ಕೆ ಮುನಿಸಿಕೊಳ್ಳಲು ಅನೇಕ ಕಾರಣಗಳಿವೆ

• ರಾಜಕುಮಾರ ಕುಲಕರ್ಣಿ

ಈ ವರ್ಷ ಜೋಳದ ಉತ್ಪಾದನೆ ಕ್ಷೀಣಿಸಲಿದೆ ಎನ್ನುವ ಆತಂಕ ಬಾಗಲಕೋಟೆ ಜಿಲ್ಲೆಯ ಸಾರ್ವಜನಿಕರಲ್ಲಿ ಮನೆಮಾಡಿದೆ. ಜಿಲ್ಲೆಯಲ್ಲಿ ಹಿಂದಿನ ವರ್ಷ ಬಿತ್ತನೆಯಾದ 1.20 ಲಕ್ಷ ಹೆಕ್ಟೇರ್ ಕೃಷಿಭೂಮಿಗೆ ಹೋಲಿಸಿದರೆ ಈ ಬಾರಿ ಪ್ರತಿಶತ 50ರಷ್ಟು ಕಡಿಮೆ ಪ್ರಮಾಣದಲ್ಲಿ ಜೋಳ ಬಿತ್ತನೆಯಾಗಿದೆ. ರೈತರು ವಾಣಿಜ್ಯ ಬೆಳೆಗಳಾದ ಕಬ್ಬು, ರೇಷ್ಮೆ, ಮೆಣಸಿನಕಾಯಿಯನ್ನು ಹೆಚ್ಚು ನೆಚ್ಚಿಕೊಂಡಿರುವುದೇ ಇದಕ್ಕೆ ಕಾರಣ.

ಒಣಬೇಸಾಯವನ್ನು ಆಶ್ರಯಿಸಿರುವ ರೈತರು ಮಾತ್ರ ಜೋಳದ ಬಿತ್ತನೆ ಮಾಡುತ್ತಿದ್ದಾರೆ. ನೀರಾವರಿ ಸೌಲಭ್ಯ ಹೊಂದಿರುವ ರೈತರು ಹೆಚ್ಚಾಗಿ ಬೆಳೆಯುತ್ತಿರುವುದು ವಾಣಿಜ್ಯ ಬೆಳೆಗಳನ್ನು. ಜೋಳ ಮುಖ್ಯ ಆಹಾರ ಬೆಳೆಯಾಗಿರುವುದರಿಂದ ಅದರ ಉತ್ಪಾದನೆ ಕ್ಷೀಣಿಸುತ್ತಿರುವುದು ಸಹಜವಾಗಿಯೇ ಜನರಲ್ಲಿ ಆತಂಕಕ್ಕೆ ಕಾರಣವಾಗಿದೆ. ಈ ಆತಂಕ ಬಾಗಲಕೋಟೆ ಜಿಲ್ಲೆಗಷ್ಟೇ ಸೀಮಿತವಾಗಿಲ್ಲ, ಅದು ಇಡೀ ಉತ್ತರ ಕರ್ನಾಟಕ ಭಾಗಕ್ಕೆ ಅನ್ವಯಿಸುತ್ತದೆ.

ಒಂದರ್ಥದಲ್ಲಿ, 'ನಾನೇಕೆ ಆರ್ಥಿಕ ನಷ್ಟ ಅನುಭವಿಸಿಕೊಂಡು ಬೇರೆಯವರ ಹಸಿವು ತಣಿಸಲಿ' ಎಂದು ಅನ್ನದಾತ ಮುನಿಸಿಕೊಂಡಂತಿದೆ. ಸಾರ್ವಜನಿಕರ ಆತಂಕವನ್ನೇ ಆಧಾರವಾಗಿ ಇಟ್ಟುಕೊಂಡು, ಆಹಾರ ಬೆಳೆಗಳನ್ನೇ ಗಣನೀಯ ಪ್ರಮಾಣದಲ್ಲಿ ಬೆಳೆಯುವಂತೆ ರೈತರನ್ನು ಆಗ್ರಹಿಸುವಂತಿಲ್ಲ. ಆ ಒಂದು ನೈತಿಕತೆಯನ್ನು ಸರ್ಕಾರ ಮತ್ತು ಸಾರ್ವಜನಿಕರು ಎಂದೋ ಕಳೆದುಕೊಂಡಾಗಿದೆ.

ದಶಕದ ಹಿಂದೆ ಆಂಧ್ರಪ್ರದೇಶದಲ್ಲಿ ಕೃಷಿಗೆ ಸಂಬಂಧಿಸಿದಂತೆ ವಿಚಿತ್ರ ಸನ್ನಿವೇಶ ಎದುರಾಗಿತ್ತು. 2011ರಲ್ಲಿ ಪೂರ್ವ ಗೋದಾವರಿ ಪ್ರಾಂತ್ಯದಲ್ಲಿನ ರೈತರು ಸಾಮೂಹಿಕವಾಗಿ ಕೃಷಿ ಚಟುವಟಿಕೆಯನ್ನು ಸ್ಥಗಿತಗೊಳಿಸಿದ್ದರು. ಒಂದು ವರ್ಷದ ಕಾಲ ವ್ಯವಸಾಯ ಮಾಡದಿರಲು ನಿರ್ಧರಿಸಿದ್ದರು. ಈ ಕಾಲಾವಧಿಯನ್ನು ಅವರು ರಜೆ ಎಂದು ಘೋಷಿಸಿಕೊಂಡರು. ನಿರಂತರ ಕೃಷಿ ಚಟುವಟಿಕೆಯಿಂದ ಬಳಲಿರುವ ತಮಗೆ ವಿಶ್ರಾಂತಿಯ ಅಗತ್ಯವಿದೆ ಎನ್ನುವುದು ಅವರ ಬೇಡಿಕೆಯಾಗಿತ್ತು. ಪರಿಣಾಮವಾಗಿ, ಆ ರಾಜ್ಯದ ಮುಖ್ಯ ಆಹಾರ ಬೆಳೆಯಾದ ಭತ್ತದ ಕೊರತೆ ಎದುರಾಗಲಿದೆ ಎನ್ನುವ ಆತಂಕ ಜನರಲ್ಲಿ ಮೂಡಿ, ಆನಂತರ ಸರ್ಕಾರವೇ ಮುಂದಾಗಿ ರೈತರ ಮನವೊಲಿಸಬೇಕಾದ ಸಂದರ್ಭ ಸೃಷ್ಟಿಯಾಗಿತ್ತು.

ರೈತರು ಹೀಗೆ ಕಾಲಕಾಲಕ್ಕೆ ಮುನಿಸಿಕೊಳ್ಳಲು ಅನೇಕ ಕಾರಣಗಳಿವೆ. ರೈತರಿಗೆ ಕೃಷಿ ಚಟುವಟಿಕೆಯಿಂದ ಅದರಲ್ಲೂ ಒಣಬೇಸಾಯವನ್ನೇ ಆಶ್ರಯಿಸಿರುವವರಿಗೆ ಹೇಳಿಕೊಳ್ಳುವಂಥ ಆದಾಯ ದೊರೆಯುತ್ತಿಲ್ಲ. ಕಳಪೆ ಬೀಜಗಳ ಬಳಕೆ, ಅಧಿಕ ಬೆಲೆಗೆ ಖರೀದಿಸಿದ ರಸಗೊಬ್ಬರ, ಸಕಾಲಕ್ಕೆ ಆಗದ ಮಳೆ, ಕ್ರಿಮಿಕೀಟಗಳಿಂದ ಹಾನಿಗೊಳಗಾಗುವ ಬೆಳೆ ಇಷ್ಟೆಲ್ಲ ತೊಂದರೆಗಳನ್ನು ಎದುರಿಸಿ ಬೆಳೆ ಕೈಗೆ ಬರುವ ಹೊತ್ತಿಗೆ ಬಡ ರೈತರ ಸ್ಥಿತಿ ಚಿಂತಾಜನಕವಾಗಿರುತ್ತದೆ. ಸಾಲದ ಹೊರೆಯಿಂದ ಬೆನ್ನು ಬಾಗಿರುತ್ತದೆ. ಬೆಳೆಯನ್ನು ಹೊಲದಿಂದಲೇ ನೇರವಾಗಿ ಮಾರುಕಟ್ಟೆಗೆ ಸಾಗಿಸುವ ಪರಿಸ್ಥಿತಿ ರೈತನದು. ಗಗನಕ್ಕೇರಿದ್ದ ಬೆಲೆಯು ಬೆಳೆ ರೈತನ ಕೈಗೆ ಬರುವ ಹೊತ್ತಿಗೆ ಪಾತಾಳಕ್ಕೆ ಇಳಿದಿರುತ್ತದೆ.

ರೈತ ತನ್ನ ಬೆಳೆಯನ್ನು ಮಧ್ಯವರ್ತಿಗಳು ನಿಗದಿಪಡಿಸಿದ ಬೆಲೆಗೆ ಮಾರಾಟ ಮಾಡಬೇಕು. ಅನೇಕ ಮಾರಾಟಗಾರರು ರೈತರಿಂದ ಕಡಿಮೆ ಬೆಲೆಗೆ ದವಸ ಧಾನ್ಯಗಳನ್ನು ಖರೀದಿಸಿ ನಂತರ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಸಾರ್ವತ್ರಿಕ ಸತ್ಯ.

ಒಂದೆಡೆ ಮಧ್ಯವರ್ತಿಗಳ ಹಾವಳಿ, ಇನ್ನೊಂದೆಡೆ ರೈತರಿಂದಲೇ ನೇರವಾಗಿ ಖರೀದಿಸಲು ಸಿದ್ಧರಿಲ್ಲದ ಗ್ರಾಹಕರು. ಈ ನಡುವೆ, ಸರ್ಕಾರವು ಅವರ ಸಮಸ್ಯೆಗಳಿಗೆ ಕಿವುಡಾಗುತ್ತದೆ. ರಾತ್ರಿಯೆಲ್ಲ ನಿದ್ದೆ ಇಲ್ಲದೆ ಹೊಲಗಳಿಗೆ ನೀರುಣಿಸುವ ರೈತರ ಸಂಖ್ಯೆ ಹೇರಳವಾಗಿದೆ. ಅದೆಷ್ಟೋ ರೈತರು ರಾತ್ರಿ ವೇಳೆ ವಿಷಜಂತುಗಳಿಗೆ ಬಲಿಯಾದ ಉದಾಹರಣೆಗಳೂ ಇವೆ.



ಹಳ್ಳಿಗಳಲ್ಲಿ ವ್ಯವಸಾಯ ಮಾಡಿಕೊಂಡಿರುವ ರೈತರ ಮಕ್ಕಳಿಗೆ ಅಲ್ಲಿ ಉತ್ತಮ ಶೈಕ್ಷಣಿಕ ಸೌಲಭ್ಯ ದೊರೆಯುತ್ತಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯರ ಕೊರತೆಯಿಂದಾಗಿ ಸೂಕ್ತ ಆರೋಗ್ಯ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ರಸ್ತೆ ಸಂಪರ್ಕದ ಕೊರತೆಯಿಂದ ಅನೇಕ ಹಳ್ಳಿಗಳು ಮಳೆಗಾಲದಲ್ಲಿ ದ್ವೀಪಗಳಾಗುತ್ತಿವೆ. ಹಳ್ಳಿಗರೆಲ್ಲ ದಿನಗೂಲಿಗಳಾಗಿ ನಗರ ಪ್ರದೇಶಗಳಿಗೆ ವಲಸೆ ಬರುತ್ತಿರುವುದರಿಂದ ಹಳ್ಳಿಗಳಲ್ಲಿ ಕೃಷಿ ಚಟುವಟಿಕೆಗೆ ಕೆಲಸಗಾರರು ದೊರೆಯದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆ ಬಂದು ಪ್ರವಾಹಕ್ಕೆ ಬೆಳೆ ಕೊಚ್ಚಿ ಹೋದಾಗ ಇಲ್ಲವೆ ಭೀಕರ ಬರಗಾಲ ತಲೆದೋರಿದಾಗಲೂ ಸಂಕಷ್ಟಕ್ಕೆ ಒಳಗಾಗುವುದು ರೈತನ ಬದುಕೇ.

ಬೆಳೆ ಬೆಳೆದು ಸಕಾಲದಲ್ಲಿ ಲಾಭವಾಗದೇ ಇದ್ದರೆ ರಸಗೊಬ್ಬರಗಳ ಸಾಲ ಗಂಭೀರ ಸಮಸ್ಯೆಯನ್ನು ತಂದೊಡ್ಡುತ್ತದೆ. ಈಗ ಕೃಷಿಭೂಮಿಯು ವಸತಿ ಪ್ರದೇಶವಾಗಿ ಪರಿವರ್ತನೆಯಾಗುತ್ತಿದೆ. ರಿಯಲ್ ಎಸ್ಟೇಟ್ ಉದ್ದಿಮೆಯಿಂದ ರೈತರ ಭೂಮಿಗೆ ಬಂಗಾರದ ಬೆಲೆ ಬಂದಿದೆ. ಅದೆಷ್ಟೋ ರೈತರು ಬಂಡವಾಳದಾರರಿಗೆ ಕೃಷಿಭೂಮಿಯನ್ನು ಮಾರಾಟ ಮಾಡಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ಈಗಾಗಲೇ ಜಗತ್ತಿನಲ್ಲಿ ಆಹಾರದ ಕೊರತೆ ಉಂಟಾಗಿದೆ. ಜೊತೆಗೆ ಕೃಷಿಭೂಮಿ ಕ್ಷೀಣಿಸುತ್ತಿರುವುದು ಮತ್ತಷ್ಟು ಕಳವಳಕಾರಿ. ಈ ಗಂಭೀರ ಸಮಸ್ಯೆಯನ್ನು ಹೋಗಲಾಡಿಸಲು ಮೊದಲು ರೈತರ ಸಮಸ್ಯೆಗಳು ಪರಿಹಾರ ಕಾಣುವಂತೆ ಆಗಬೇಕು. ಕೇವಲ ವೇದಿಕೆಗಳಲ್ಲಿನ ಚರ್ಚೆ ಮತ್ತು ಸಂವಾದಗಳಿಂದಾಗಲಿ, ಪ್ರದರ್ಶನ ಮೇಳಗಳಿಂದಾಗಲಿ ರೈತರ ಸಮಸ್ಯೆಗಳು ಪರಿಹಾರವಾಗಲಾರವು. ಸರ್ಕಾರ ಮತ್ತು ಸಾರ್ವಜನಿಕರು ಜೊತೆಗೂಡಿ ರೈತರ ಪ್ರಶ್ನೆಗಳು ಮತ್ತು ಸಮಸ್ಯೆಗಳಿಗೆ ಉತ್ತರದಾಯಿಯಾಗಬೇಕಿದೆ.

ವಾಚಕರ ವಾಣಿ

ಈ ಸಂಪುಟಗಳೂ ಬಿಡುಗಡೆಯಾಗಲಿ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ತುಳಸಿದಾಸರ ಶ್ರೀರಾಮಚರಿತ ಮಾನಸದ ಹತ್ತು ಸಂಪುಟಗಳು ಬಿಡುಗಡೆಯಾಗಿರುವುದು ತುಂಬಾ ಸಂತೋಷದ ಸಂಗತಿ. ಅದೇ ರೀತಿ ವಾಲ್ಮೀಕಿ ರಾಮಾಯಣದ ಏಳು ಕಾಂಡಗಳನ್ನು ಒಳಗೊಂಡ ಸಂಪುಟಗಳೂ ಪ್ರಾಧಿಕಾರದಿಂದ ಬಿಡುಗಡೆಯಾಗಲಿ. ಸಾಮಾನ್ಯ ಜನರಿಗೆ ಕೊಂಡು ಓದಲು ತುಂಬಾ ಅನುಕೂಲವಾಗುತ್ತದೆ.

ಗಣೇಶ ಟಿ.ಸಿ., ತಾಟಪರ್ತಿ, ಶಿಡ್ಲಘಟ್ಟ

ಮತ್ತೆ ಮತ್ತೆ ನೆನಪಿಸುವ ಅಗತ್ಯ ಇದೆಯೇ?

ಗದ್ಯ ಪ್ರಕಾರದಲ್ಲಿಯೂ ಸಾಹಿತ್ಯ ಸೃಷ್ಟಿಸಿರುವ ದೊಡ್ಡರಂಗೇಗೌಡ ಅವರಿಗೆ ಚಿತ್ರಸಾಹಿತಿ ಎಂಬ ಹಣೆಪಟ್ಟಿ ಕಟ್ಟಲಾಗಿದೆ ಎಂದು ಮನು ಬಳಿಗಾರ ಅವರು ಬೇಸರ ವ್ಯಕ್ತಪಡಿಸಿರುವುದು ವರದಿಯಾಗಿದೆ (ಪ್ರ.ವಾ., ಫೆ. 8). ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡರಂಗೇಗೌಡರು ತಮ್ಮದೇ ಆದ ಛಾಪು ಮೂಡಿಸಿರುವ ಸಾಧಕರು. ಗದ್ಯ, ಪದ್ಯ, ನಾಟಕ, ಮಹಾಕಾವ್ಯದ ಜೊತೆಗೆ ಚಿತ್ರ ಸಾಹಿತ್ಯಕ್ಕೂ ಒತ್ತು ಕೊಟ್ಟವರು. ಅವರಿಗೆ ಸಲ್ಲಬೇಕಾದ ಹಲವಾರು ಪ್ರಶಸ್ತಿ, ಗೌರವಗಳೂ ಸಿಕ್ಕಿವೆ. ಚಲನಚಿತ್ರ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡದ್ದು, ಅವರಿಗಿರುವ ವಿಶೇಷ ಕರ್ತೃತ್ವ ಶಕ್ತಿ. ಈ ವಿಷಯದಲ್ಲಿ ಯಾವ ಬರಹಗಾರರಿಗೂ ಅವರ ಬಗ್ಗೆ ಹಗುರ ಭಾವನೆ ಇರಲಾರದು.

ಎಂದೋ ಯಾರೋ ಹೇಳಿಕೊಂಡದ್ದನ್ನು ಪದೇಪದೇ ಹೇಳೀ ಹೇಳಿ, ವಾಸಿಯಾದ ಗಾಯವನ್ನು ಮತ್ತೆ ಮತ್ತೆ ಕಿತ್ತು ಹೊಸದಾಗಿ ಮುಲಾಮು ಹಚ್ಚುವುದನ್ನು, ಅವರ ಬಗ್ಗೆ ಕಾಳಜಿ ತೋರುವ ಅಭಿಮಾನಿಗಳು, ಸ್ನೇಹಿತರು ಇನ್ನಾದರೂ ಬಿಡುವುದು ಸೂಕ್ತ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ರೋಪ್‌ವೇ ಬದಲು ಇರಲಿ ಡೋಲಿ

ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಪರ್ವತಕ್ಕೆ ರೋಪ್‌ವೇ ನಿರ್ಮಿಸುವ ಸರ್ಕಾರದ ನಿರ್ಧಾರವು ಅಭಿವೃದ್ಧಿಯ ಹೆಸರಿನಲ್ಲಿ ಪರಿಸರದ ಸೊಬಗನ್ನು ಹಾಳುಮಾಡಲು ದಾರಿ ಮಾಡಿಕೊಡುತ್ತದೆ. ಇದರ ಬದಲು ಡೋಲಿಗಳ ವ್ಯವಸ್ಥೆ ಮಾಡಿದರೆ, ಪ್ರವಾಸಿಗರಿಗೆ ಕಡಿಮೆ ಖರ್ಚಿನಲ್ಲಿ ಸೌಲಭ್ಯ ಸಿಗುವುದರ ಜೊತೆಗೆ ಸ್ಥಳೀಯರ ಉದ್ಯೋಗಕ್ಕೂ ಅನುಕೂಲವಾಗಬಹುದು.

ಚಂದ್ರು ಪಾಟೀಲ, ಸಿಂಧನೂರು

ಅಭಿಮಾನಿಗಳ ಒತ್ತಾಯ ಸಮಸ್ತರ ಒತ್ತಾಯವಲ್ಲ

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಿ.ಎಸ್.ಯಡಿಯೂರಪ್ಪ ಅವರ ಹೆಸರನ್ನು ಇಡಲಾಗುತ್ತಿದ್ದು, ಇದಕ್ಕೆ ಯಡಿಯೂರಪ್ಪ ಅವರು ಒಪ್ಪಿಲ್ಲವಾದರೂ ಅವರ ಅಭಿಮಾನಿಗಳ ಒತ್ತಾಯದ ಮೇರೆಗೆ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ (ಪ್ರ.ವಾ., ಫೆ. 9). ಶಿವಮೊಗ್ಗಕ್ಕೆ ವಿಮಾನ ನಿಲ್ದಾಣ ತರಲು ಯಡಿಯೂರಪ್ಪನವರ ಪ್ರಯತ್ನ ಮೆಚ್ಚುವಂಥದ್ದೆ, ನಿಜ. ಆದರೆ ಇಂತಹ ಕೆಲಸ ಮಾಡಬೇಕಾದುದು ಯಾವುದೇ ಜನಪ್ರತಿನಿಧಿಯ ಕರ್ತವ್ಯವಾಗಿರುತ್ತದೆ. ಒಬ್ಬ ರಾಜಕಾರಣಿಯ ವಿಷಯದಲ್ಲಿ 'ಆತನ ಅಭಿಮಾನಿಗಳ' ಒತ್ತಾಯವು ಸಮಸ್ತರ ಒತ್ತಾಯವಾಗಲಾರದು. ಹಾಗೆ ನೋಡಿದರೆ, ಈ ಜಿಲ್ಲೆಯು ಅನೇಕ ಪ್ರಬುದ್ಧ ರಾಜಕಾರಣಿಗಳನ್ನು ರಾಜ್ಯಕ್ಕೆ ನೀಡಿದೆ. ಈಗ ನಿಷ್ಕಳಂಕ ರಾಜಕಾರಣಿಗಳು ಅಪರೂಪ ಎನ್ನುವಂತಾಗಿದೆ. ರಾಜಕಾರಣಿಗಳ ವಿಷಯದಲ್ಲಿ ಆರೋಪಗಳು ಸರ್ವೇಸಾಮಾನ್ಯ ಎನ್ನುವುದೂ ಸತ್ಯ. ಅಂಥವರಲ್ಲಿ ಅನೇಕರು ಮುಂದೊಮ್ಮೆ ಕಳಂಕಮುಕ್ತರಾದರೂ, ಕಳಂಕ ಹೊತ್ತಿದ್ದರು ಎನ್ನುವುದು ದುರ್ದೈವವಶಾತ್ ಉಳಿಯುತ್ತದೆ!

ಯಡಿಯೂರಪ್ಪನವರೇ ಅಸಮ್ಮತಿ ವ್ಯಕ್ತಪಡಿಸಿರುವಾಗ ಅವರ ಹೆಸರನ್ನೇ ಇಟ್ಟು ಯಾಕೆ ಅವರಿಗೆ ಮುಜುಗರ ಉಂಟುಮಾಡಬೇಕೋ ಗೊತ್ತಾಗುವುದಿಲ್ಲ. ಆದ್ದರಿಂದ, ಸರಳವಾಗಿ 'ಶಿವಮೊಗ್ಗ ವಿಮಾನ ನಿಲ್ದಾಣ' ಎಂದಾಗಲೀ 'ಸಹ್ಯಾದ್ರಿ ವಿಮಾನ ನಿಲ್ದಾಣ' ಎಂದಾಗಲೀ ಅಥವಾ ಜಿಲ್ಲೆಯ ಪ್ರಸಿದ್ಧಿಗೆ ಕಾರಣವಾಗಿರುವ ಬೇರೆ ಯಾವುದಾದರೂ ಒಂದು ಹೆಸರನ್ನು ಇಡುವುದು ಉಚಿತ. ರಾಜಕಾರಣಿಗಳ ಹೆಸರನ್ನು ಶಾಶ್ವತವಾದವುಗಳಿಗೆ ಇಡುವ ಅನಗತ್ಯ ಪದ್ಧತಿಯನ್ನು ಬಿಡಬೇಕು.

ಸಾಮಗ ದತ್ತಾತ್ರಿ, ಬೆಂಗಳೂರು

ಬಂಜರು ಭೂಮಿಯಲ್ಲಿ ಹಸಿರು ವೃದ್ಧಿಗೆ ಬೇಕು ಯೋಜನೆ

ರಾಜ್ಯದ ಕೆಲ ಜಿಲ್ಲೆಗಳಲ್ಲಿ ಶೇಕಡ 70ಕ್ಕಿಂತಲೂ ಹೆಚ್ಚು ಅರಣ್ಯ ಪ್ರದೇಶ ಇರುವುದು ಖುಷಿಯ ವಿಚಾರವಾದರೂ ಇನ್ನುಳಿದ ಕೆಲವು ಜಿಲ್ಲೆಗಳಲ್ಲಿ ಶೇ 10ಕ್ಕಿಂತಲೂ ಕಡಿಮೆ ಅರಣ್ಯ ಪ್ರದೇಶ ಇರುವುದು ಕಳವಳದ ಸಂಗತಿಯಾಗಿದೆ. ಹಸಿರು ಕಡಿಮೆ ಹೊಂದಿರುವ ಪ್ರದೇಶಗಳಲ್ಲಿ ಅರಣ್ಯ ಅಭಿವೃದ್ಧಿಗೆ ಪರ್ಯಾಯ ವ್ಯವಸ್ಥೆಗಳ ಮೂಲಕ ಸರ್ಕಾರವು ಯೋಜನೆ ರೂಪಿಸಬೇಕಾಗಿದೆ. ಬಹುತೇಕ ಜಿಲ್ಲೆಗಳಲ್ಲಿ ತಕ್ಕಮಟ್ಟಿಗೆ ಅರಣ್ಯ ಭೂಮಿ ಇದೆ. ಆದರೆ, ಇದರಲ್ಲಿ ಬಂಜರು ಭೂಮಿ, ಬೋಳುಗುಡ್ಡಗಳೇ ಹೆಚ್ಚು. ಇಂತಹ ಪ್ರದೇಶಗಳಲ್ಲಿ ಗಿಡಮರಗಳನ್ನು ಬೆಳೆಸಲು ಇದುವರೆಗೆ ಮುಂದಾಗದಿರುವುದಕ್ಕೆ ಸರ್ಕಾರದ ಇಚ್ಛಾಶಕ್ತಿಯ ಕೊರತೆಯೇ ಮುಖ್ಯ ಕಾರಣ. ರಾಜ್ಯದಲ್ಲಿ ಶೇಕಡಾವಾರು ಕಡಿಮೆ ಹಸಿರು ಹೊಂದಿರುವ ಅರಣ್ಯ ಪ್ರದೇಶಗಳಲ್ಲಿ ಗಿಡಮರಗಳನ್ನು ಬೆಳೆಸಬೇಕು. ಅದಕ್ಕಾಗಿ ವೈಜ್ಞಾನಿಕ ಯೋಜನೆ ರೂಪಿಸಬೇಕಾಗಿದೆ. ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಅರಣ್ಯ ಇಲಾಖೆಯು ಒದಗಿಸಿದರೆ, ಬಂಜರು ಭೂಮಿಯಲ್ಲೂ ಹಸಿರು ವೃದ್ಧಿ ಅಸಾಧ್ಯವೇನಲ್ಲ.

ಈ ಪ್ರದೇಶಗಳಲ್ಲಿ ಯಾವ ಪ್ರಭೇದದ ಗಿಡಮರಗಳನ್ನು ಬೆಳೆಸುವುದು ಸೂಕ್ತ ಎಂಬ ಬಗ್ಗೆ ಪರಿಸರ, ವನ್ಯ ತಜ್ಞರು ಹಾಗೂ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ತೀರ್ಮಾನಿಸಬೇಕಾಗಿದೆ.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರತಿಸ್ಪರ್ಧಿ ದೇಶಗಳ ಗುಟ್ಟು ತಿಳಿಯಲು ಬಲೂನು

ಅಮೆರಿಕದ ಆಗಸದಲ್ಲಿ ಇತ್ತೀಚೆಗೆ ಕಾಣಿಸಿಕೊಂಡ ಬೃಹತ್ ಬಲೂನ್ ಒಂದನ್ನು ಅಲ್ಲಿನ ಸೇನೆಯು ಹೊಡೆದುರುಳಿಸಿದೆ. ಇದು ಚೀನಾ ಕಳುಹಿಸಿದ ಬೇಹುಗಾರಿಕಾ ಬಲೂನು ಎಂದು ಅಮೆರಿಕ ಹೇಳಿದೆ. ಬಲೂನು ತನ್ನದು ಎಂದು ಚೀನಾ ಕೂಡ ಒಪ್ಪಿಕೊಂಡಿದೆ. ಆದರೆ, ಅದು ಬೇಹುಗಾರಿಕಾ ಬಲೂನು ಅಲ್ಲ, ಹವಾಮಾನ ಅಧ್ಯಯನಕ್ಕಾಗಿ ಕಳುಹಿಸಿದ್ದ ಬಲೂನು ಎಂದಿದೆ. ಅದು ತನ್ನ ಪಥವನ್ನು ಬಿಟ್ಟು ಅಮೆರಿಕದ ವಾಯುಪ್ರದೇಶ ಪ್ರವೇಶಿಸಿದೆ ಎಂದು ಚೀನಾ ಹೇಳಿದೆ. ಅಮೆರಿಕ-ಚೀನಾ ನಡುವೆ ವಾಕ್ಸಮರಕ್ಕೂ ಇದು ಕಾರಣವಾಗಿದೆ. ಪ್ರಕರಣವನ್ನು ಅಮೆರಿಕ ಗಂಭೀರವಾಗಿ ಪರಿಗಣಿಸಿದೆ. ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರ ಚೀನಾ ಭೇಟಿಯನ್ನು ಮುಂದೂಡಿದೆ. ಉಪಗ್ರಹ ಮತ್ತು ಇತರ ಅತ್ಯಾಧುನಿಕ ಬೇಹುಗಾರಿಕಾ ಸಾಧನಗಳಿರುವ ಈ ಕಾಲದಲ್ಲಿಯೂ ಗೂಢಚಾರಿಕೆಗೆ ಬಲೂನುಗಳನ್ನು ಬಳಸಲಾಗುತ್ತಿದೆ. ಬಲೂನು ಬೇಹುಗಾರಿಕೆಯ ಕುರಿತ ಒಂದು ನೋಟ ಇಲ್ಲಿದೆ:

ಪ್ರಜಾವಾಣಿ ವಾರ್ತೆ

ಸ್ಥಳೀಯ ಹವಾಮಾನ ಅಧ್ಯಯನಕ್ಕಾಗಿ ಬಲೂನುಗಳನ್ನು ಬಳಸುವುದು ಸಾಮಾನ್ಯ ಸಂಗತಿ. ಬಲೂನುಗಳನ್ನು ಬೇಹುಗಾರಿಕೆಗೂ ಬಳಸಲಾಗುತ್ತಿದೆ. ಈ ಬಲೂನುಗಳಲ್ಲಿ ಕ್ಯಾಮೆರಾ, ರೇಡಾರ್ ಮತ್ತು ಇತರ ಉಪಕರಣಗಳನ್ನು ಅವಳಡಿಸಲಾಗುತ್ತದೆ. ಕೆಳಮುಖ ಮಾಡಿ ಅಳವಡಿಸಲಾಗಿರುವ ಕ್ಯಾಮೆರಾ ಮತ್ತು ಇತರ ಸಾಧನಗಳು ನೆಲದಲ್ಲಿ ನಡೆಯುವ ಚಟುವಟಿಕೆಗಳ ಮಾಹಿತಿಯನ್ನು ಫೋಟೊ ಮೂಲಕ ಸಂಗ್ರಹಿಸುತ್ತವೆ. ಈ ಬಲೂನುಗಳಲ್ಲಿರುವ ಸಾಧನಗಳು ಸೌರಶಕ್ತಿಯಿಂದ ಕಾರ್ಯನಿರ್ವಹಿಸುವಂತೆ ಮಾಡಲಾಗುತ್ತದೆ.

ಸ್ಪೈ ಬಲೂನುಗಳು ಅಥವಾ ಹವಾಮಾನ ಅಧ್ಯಯನ ಬಲೂನುಗಳು ನಾಗರಿಕ ವಿಮಾನಗಳು ಹಾರಾಟ ನಡೆಸುವುದಕ್ಕಿಂತ ಬಹಳ ಎತ್ತರದಲ್ಲಿ ಸಂಚರಿಸುತ್ತವೆ. ಸಾಮಾನ್ಯವಾಗಿ ನಾಗರಿಕ ವಿಮಾನಗಳ ಹಾರಾಟದ ಗರಿಷ್ಠ ಎತ್ತರ 42,000 ಅಡಿಗಳು. ಆದರೆ, ಬಲೂನುಗಳು ಸುಮಾರು 80 ಸಾವಿರ ಅಡಿಯಿಂದ 1.20 ಲಕ್ಷ ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತವೆ.

ಬಲೂನು ಬಳಕೆ ಏಕೆ?


ಬೇಹುಗಾರಿಕೆ ಮತ್ತು ಇತರ ಉದ್ದೇಶಗಳಿಗೆ ಉಪಗ್ರಹಗಳನ್ನು ಬಳಸಲು ಸಾಧ್ಯವಿರುವ ಈ ಯುಗದಲ್ಲಿ ಬಲೂನುಗಳನ್ನು ಏಕೆ ಬಳಸುತ್ತಾರೆ ಎಂಬ ಪ್ರಶ್ನೆ ಸಹಜ. ಬಲೂನುಗಳನ್ನು ಬಳಸಲು ತಗಲುವ ವೆಚ್ಚ ಅತ್ಯಂತ ಕಡಿಮೆ. ಇವುಗಳನ್ನು ಹಾರಿಬಿಡಲು ಉಡ್ಡಯನ ವಾಹನದಂತಹ ಸಂಕೀರ್ಣ ವ್ಯವಸ್ಥೆಯ ಅಗತ್ಯ ಇಲ್ಲ. ಉಪಗ್ರಹಕ್ಕಿಂತ ಹೆಚ್ಚು ಹತ್ತಿರದಿಂದ ನೆಲದಲ್ಲಿರುವ ಸ್ಥಾವರಗಳ ಮೇಲೆ ನಿಗಾ ಇರಿಸುವುದು ಸಾಧ್ಯವಾಗುತ್ತದೆ. ಬಲೂನುಗಳನ್ನು ಹಿಂದಕ್ಕೆ ಕರೆಸಿಕೊಳ್ಳಬಹುದು, ದುರಸ್ತಿ ಮಾಡಬಹುದು ಮತ್ತು ಮರುಬಳಕೆ ಕೂಡ ಸಾಧ್ಯವಿದೆ.

ಉಪಗ್ರಹವನ್ನು ಒಂದು ಬಾರಿ ಕಕ್ಷೆಗೆ ಸೇರಿಸಿದ ಬಳಿಕ, ಅದು ಯಾವ ಹೊತ್ತಿನಲ್ಲಿ ಯಾವ ಪ್ರದೇಶವನ್ನು ಹಾದು ಹೋಗುತ್ತದೆ ಎಂಬುದರ ಮೇಲೆ ನಿಗಾ ಇರಿಸಲು ಸಾಧ್ಯವಿದೆ. ಆದರೆ ಬಲೂನುಗಳನ್ನು ಗುರುತಿಸುವುದು ಕಷ್ಟ. ಮೃದುವಾದ ವಸ್ತುಗಳನ್ನು ಬಳಸಿ ಬಲೂನುಗಳನ್ನು ತಯಾರಿಸಲಾಗುತ್ತದೆ. ಆದ್ದರಿಂದ ಅವುಗಳು ರೇಡಾರ್ ಕಣ್ಣಿಗೂ ಬೀಳುವುದಿಲ್ಲ.


ಅಷ್ಟಲ್ಲದೆ, ಬಲೂನುಗಳನ್ನು ಒಂದೇ ಸ್ಥಳದಲ್ಲಿ ಹೆಚ್ಚು ಹೊತ್ತು ಇರಿಸುವುದಕ್ಕೂ ಸಾಧ್ಯವಿದೆ. ಅತ್ಯಾಧುನಿಕ ಬೇಹುಗಾರಿಕೆ ಸಾಧನಗಳನ್ನು ಈ ಬಲೂನುಗಳಲ್ಲಿ ಅಳವಡಿಸಲು ಸಾಧ್ಯವಿದೆ. ಬಲೂನು ಅಗ್ಗದ ವಸ್ತುವಾದ ಕಾರಣ, ಸಂಪೂರ್ಣವಾಗಿ ನಾಶವಾಗಿ ಹೋದರೂ ದೊಡ್ಡ ನಷ್ಟವೇನೂ ಆಗದು.

ಬೇಹುಗಾರಿಕೆಗಾಗಿ ಬಲೂನುಗಳನ್ನು ಬಳಸುವ ತಂತ್ರವು ಇತ್ತೀಚಿನದ್ದೇನೂ ಅಲ್ಲ. ಆಸ್ಟ್ರಿಯಾ ಮತ್ತು ನೆದರ್‌ಲ್ಯಾಂಡ್ ಮೇಲೆ ಫ್ರಾನ್ಸ್ 1794ರಲ್ಲಿ ನಡೆಸಿದ ಫ್ಲಿಯುರೂಸ್ ಯುದ್ಧದಲ್ಲಿ ಮೊದಲ ಬಾರಿಗೆ ಬೇಹುಗಾರಿಕೆಗೆ ಬಲೂನುಗಳನ್ನು ಬಳಸಲಾಯಿತು ಎಂದು ಹೇಳಲಾಗುತ್ತಿದೆ. 1860ರ ದಶಕದಲ್ಲಿ ಅಮೆರಿಕದ ಆಂತರಿಕ ಯುದ್ಧದ ಸಂದರ್ಭದಲ್ಲಿಯೂ ಬಲೂನುಗಳನ್ನು ಬಳಸಲಾಗಿತ್ತು. ಜನರು ಬಲೂನುಗಳಲ್ಲಿ ಕುಳಿತು ಬೈನಾಕ್ಯುಲರ್ ಹಿಡಿದು ದೂರದ ಪ್ರದೇಶದಲ್ಲಿನ ಚಟುವಟಿಕೆಗಳನ್ನು ತಿಳಿದುಕೊಂಡಿದ್ದರು.

ಅಮೆರಿಕ ಕೂಡ ಬಲೂನು ಬಳಕೆಯನ್ನು ಮತ್ತೆ ಆರಂಭಿಸಿದೆ. ಆದರೆ, ತನ್ನ ವಾಯುಗಡಿಯೊಳಗೆ ಮಾತ್ರ ಇದನ್ನು ಬಳಸುತ್ತಿರುವುದಾಗಿ ಹೇಳಿಕೊಂಡಿದೆ. ಚೀನಾ ದೇಶವು ಬೇಹುಗಾರಿಕೆಗಾಗಿ ದೊಡ್ಡ ಸಂಖ್ಯೆಯಲ್ಲಿ ಬಲೂನು ಬಳಸುತ್ತಿದೆ ಮತ್ತು ಚೀನಾದ ಸೇನೆಯೇ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದೆ ಎನ್ನಲಾಗುತ್ತಿದೆ.



ನಕ್ಷೆ ಕೃಪೆ: ಗೂಗಲ್ ಅರ್ಥ್



ಆಧಾರ: ರಾಯಿಟರ್ಸ್ ಗ್ರಾಫಿಕ್ಸ್, ಬಿಬಿಸಿ, ದಿ ಗಾರ್ಡಿಯನ್ | ಪ್ರಜಾವಾಣಿ ಗ್ರಾಫಿಕ್ಸ್ ಮಂಜುನಾಥ ಹುಲಕೊಪ್ಪದ


ಬಲೂನು ಹೊಡೆದುರುಳಿಸಿದ್ದಕ್ಕೆ ಅಮೆರಿಕದ ಸಮರ್ಥನೆಗಳು

ಈ ಬಲೂನು 'ವಾಯುಮಾಪನ' ಉದ್ದೇಶದ, ವಾತಾವರಣ ಅಧ್ಯಯನ ಬಲೂನು ಎಂದು ಚೀನಾ ಹೇಳುತ್ತಿದೆ. ಆದರೆ, ಅಮೆರಿಕದ ವಿಜ್ಞಾನಿಗಳು ಮತ್ತು ಭದ್ರತಾ ಸಂಸ್ಥೆಗಳು ಚೀನಾದ ಈ ಪ್ರತಿಪಾದನೆಯನ್ನು ನಿರಾಕರಿಸುತ್ತಿದ್ದಾರೆ. ಇದು ವಾತಾವರಣ ಅಧ್ಯಯನ ಬಲೂನು ಅಲ್ಲ ಎಂದು ಪ್ರತಿಪಾದಿಸಲು ಅಮೆರಿಕದ ವಿಜ್ಞಾನಿಗಳು ಹಲವಾರು ಅಂಶಗಳನ್ನು ಭದ್ರತಾ ಸಂಸ್ಥೆಗಳ ಮುಂದಿರಿಸಿದ್ದಾರೆ. ಈ ಕಾರಣದಿಂದಲೇ ಚೀನಾದ ಬಲೂನನ್ನು ಹೊಡೆದುರುಳಿಸಲು ಭದ್ರತಾ ಸಂಸ್ಥೆಗಳು ಶಿಫಾರಸು ಮಾಡಿದವು ಎಂದು ಬಿಬಿಸಿ ಮತ್ತು ರಾಯಿಟರ್ಸ್‌ಗೆ ನೀಡಿರುವ ಪ್ರತಿಕ್ರಿಯೆಯಲ್ಲಿ ಅಮೆರಿಕದ ರಕ್ಷಣಾ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

'ಸಾಮಾನ್ಯವಾಗಿ ವಾತಾವರಣ ಅಧ್ಯಯನ ಬಲೂನುಗಳ ಎತ್ತರವು 20 ಅಡಿಗಳಷ್ಟು ಇರುತ್ತದೆ. ಅಂತಹ ಬಲೂನುಗಳಿಗೆ ಹೋಲಿಸಿದರೆ, ಚೀನಾದ ಬಲೂನಿನ ಗಾತ್ರ ತೀರಾ ದೊಡ್ಡದು. ಚೀನಾದ ಬಲೂನಿನ ಎತ್ತರ ಅಂದಾಜು 200 ಅಡಿಗಳಷ್ಟು ಇತ್ತು. ಬಲೂನಿನ ದೊಡ್ಡ ಗಾತ್ರವೇ, ಅದು ವಾತಾವರಣ ಅಧ್ಯಯನ ಬಲೂನು ಅಲ್ಲ ಎಂಬುದನ್ನು ಸೂಚಿಸುತ್ತದೆ' ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ವಾತಾವರಣ ಅಧ್ಯಯನ ಬಲೂನುಗಳನ್ನು 'ಲ್ಯಾಟೆಕ್ಸ್' ಫ್ಯಾಬ್ರಿಕ್‌ಗಳನ್ನು ಬಳಸಿ ನಿರ್ಮಿಸಲಾಗುತ್ತದೆ. ಆಗಸಕ್ಕೆ ಹಾರಿಬಿಟ್ಟ ಕೆಲವೇ ಗಂಟೆಗಳಲ್ಲಿ, ಲ್ಯಾಟೆಕ್ಸ್ ಬಲೂನುಗಳು ಸಿಡಿದುಹೋಗತ್ತವೆ. ಲ್ಯಾಟೆಕ್ಸ್ ಬಲೂನುಗಳನ್ನು ದೀರ್ಘಾವಧಿಯ ಪ್ರಯಾಣ ಅಥವಾ ಕಾರ್ಯಾಚರಣೆಗೆ ಬಳಸಲು ಸಾಧ್ಯವಿಲ್ಲ. ಆದರೆ, ಚೀನಾದ ಬಲೂನನ್ನು ಪಾಲಿಯುರೇಥಿನ್ ಫಿಲ್ಮ್‌ಗಳನ್ನು ಬಳಸಿ ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಬೇಹುಗಾರಿಕೆಗೆ ಬಳಸುವ ಬಲೂನನ್ನು ಪಾಲಿಯುರೇಥಿನ್ ಫಿಲ್ಮ್‌ಗಳಿಂದ ನಿರ್ಮಿಸಲಾಗಿರುತ್ತದೆ. ಚೀನಾದ ಬಲೂನು ಅದು ಹೊರಟಲ್ಲಿಂದ, ಅಮೆರಿಕದ ಮೊಂಟಾನಾ ತಲುಪುವರೆಗೂ ಅಂದಾಜು 200 ದಿನಗಳನ್ನು ಆಗಸದಲ್ಲೇ ಕಳೆದಿದೆ. ಇದು ಸಹ ಈ ಬಲೂನು ವಾತಾವರಣ ಅಧ್ಯಯನದ ಉದ್ದೇಶದ್ದಲ್ಲ ಎಂಬುದನ್ನು ಸೂಚಿಸುತ್ತದೆ' ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ವಾತಾವರಣ ಅಧ್ಯಯನ ಉದ್ದೇಶದ ಬಲೂನುಗಳಲ್ಲಿ ಹಾರಾಟದ ದಿಕ್ಕು, ವೇಗವನ್ನು ನಿಯಂತ್ರಿಸುವ ಸವಲತ್ತುಗಳು ಇರುವುದಿಲ್ಲ. ಆದರೆ, ಚೀನಾದ ಈ ದೊಡ್ಡ ಬಲೂನು, ಪದೇ-ಪದೇ ದಿಕ್ಕು ಮತ್ತು ವೇಗವನ್ನು ಬದಲಿಸಿದ್ದನ್ನು ಗಮನಿಸಲಾಗಿದೆ. ಅಲಾಸ್ಕಾದ ವಾಯುಗಡಿಯನ್ನು ದಾಟಿ ಹೋಗುವಾಗ ಈ ಬಲೂನು ಸಾಮಾನ್ಯ ವೇಗದಲ್ಲೇ ಇತ್ತು. ಆದರೆ, ಕೆನಡ ಮತ್ತು ಅಮೆರಿಕದ ಐಡಾಹೊ ರಾಜ್ಯದ ಗಡಿ ಪ್ರದೇಶದಲ್ಲಿ ಹಲವು ಗಂಟೆಗಳವರೆಗೆ ಈ ಬಲೂನು ಇದ್ದಲ್ಲೇ ಇತ್ತು. ನಂತರ ಅದು ವೇಗವಾಗಿ ಅಮೆರಿಕದ ವಾಯುಗಡಿಯನ್ನು ಪ್ರವೇಶಿಸಿತು. ಮೊಂಟಾನಾ ರಾಜ್ಯದ ಬಿಲ್ಲಿಂಗ್ಸ್ ನಗರದ ಮೇಲೆ ಬಲೂನು ತೀರಾ ನಿಧಾನವಾಗಿ ಹಾರಾಟ ನಡೆಸಿತ್ತು. ಬಿಲ್ಲಿಂಗ್ಸ್ ನಗರದಿಂದ ಕೆಲವೇ ಕಿ.ಮೀ.ನಷ್ಟು ದೂರದಲ್ಲಿ ವಾಯುನೆಲೆ ಇದೆ. ಈ ಕಾರಣದಿಂದಲೇ ಅದು ಬೇಹುಗಾರಿಕಾ ಬಲೂನು ಎಂಬ ಶಂಕೆ ಬಲವಾಯಿತು' ಎಂದು ವಿಜ್ಞಾನಿಗಳು ವಿವರಿಸಿದ್ದಾರೆ.



ಪ್ರಜಾವಾಣಿ ಗ್ರಾಫಿಕ್ಸ್

ದೇಶದ ಅತ್ಯಂತ ಉದ್ದದ ಎಕ್ಸ್‌ಪ್ರೆಸ್‌ವೇ

ಪ್ರಜಾವಾಣಿ ವಾರ್ತೆ

ದೆಹಲಿ-ಮುಂಬೈ ಎಕ್ಸ್‌ಪ್ರೆಸ್‌ವೇನ 270 ಕಿ.ಮೀ. ಉದ್ದದ ಭಾಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಇದೇ ಭಾನುವಾರ (ಫೆ. 12) ಉದ್ಘಾಟಿಸಲಿದ್ದಾರೆ. ದೆಹಲಿ ಮತ್ತು ಮುಂಬೈ ನಡುವಣ ಪೂರ್ಣ ಹೆದ್ದಾರಿಯು ಸಿದ್ಧವಾದ ನಂತರ ಇದು ದೇಶದ ಅತ್ಯಂತ ಉದ್ದದ ಎಕ್ಸ್‌ಪ್ರೆಸ್ ಹೆದ್ದಾರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ದೇಶದ ರಾಜಧಾನಿ ದೆಹಲಿ ಮತ್ತು ವಾಣಿಜ್ಯ ರಾಜಧಾನಿ ಎಂದೇ ಖ್ಯಾತವಾಗಿರುವ ಮುಂಬೈ ನಡುವಣ ಈ ಹೆದ್ದಾರಿಯು ಹಲವು ಕೈಗಾರಿಕಾ ಪ್ರದೇಶಗಳು, ವಿಮಾನ ನಿಲ್ದಾಣಗಳು ಮತ್ತು ಬಂದರಿನ ಮಧ್ಯೆ ನೇರ ಸಂಪರ್ಕ ಕಲ್ಪಿಸಲಿದೆ. ಈ ಎಕ್ಸ್‌ಪ್ರೆಸ್‌ವೇನಲ್ಲಿರುವ ಸವಲತ್ತುಗಳ ಚಿತ್ರಗಳನ್ನು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಟ್ವೀಟ್ ಮಾಡಿದ್ದಾರೆ

- ಇದು ಎಂಟು ಲೇನ್‌ಗಳ ಹೆದ್ದಾರಿಯಾಗಿದ್ದು, ಭವಿಷ್ಯದಲ್ಲಿ 12 ಲೇನ್‌ಗಳಿಗೆ ವಿಸ್ತರಿಸಲು ಅಗತ್ಯವಾದಷ್ಟು ಭೂಮಿ ಇದೆ. ಲೇನ್‌ಗಳ ಸಂಖ್ಯೆಯನ್ನು ತ್ವರಿತವಾಗಿ ಹೆಚ್ಚಿಸಲು ಅನುಕೂಲವಾಗುವಂತೆ ಎಕ್ಸ್‌ಪ್ರೆಸ್‌ವೇಯನ್ನು ವಿನ್ಯಾಸ ಮಾಡಲಾಗಿದೆ
- ಎಕ್ಸ್‌ಪ್ರೆಸ್‌ವೇ ಆರಂಭದಿಂದ ಕೊನೆಯವರೆಗೂ ಸಂಪೂರ್ಣವಾಗಿ ಸಿಗ್ನಲ್‌ಮುಕ್ತವಾಗಿದೆ. ಟೋಲ್ ಘಟಕಗಳ ಮೂಲಕವೇ ಎಕ್ಸ್‌ಪ್ರೆಸ್‌ವೇಗೆ ಪ್ರವೇಶ ಇರಲಿದೆ
- ನೆಲಮಟ್ಟದಿಂದ ಹಲವು ಮೀಟರ್‌ಗಳಷ್ಟು ಎತ್ತರದಲ್ಲಿ ಹೆದ್ದಾರಿ ನಿರ್ಮಿಸಲಾಗಿದೆ. ಅಗತ್ಯ ಇರುವೆಡೆ ಹೆದ್ದಾರಿ ಕೆಳಗೆ ಜಾನುವಾರು ಪಾಸ್‌ಗಳನ್ನು ನಿರ್ಮಿಸಲಾಗಿದೆ
- ಉತ್ತರ ಪ್ರದೇಶದ ಜೆವಾರ್ ವಿಮಾನ ನಿಲ್ದಾಣ, ಮುಂಬೈ ವಿಮಾನ ನಿಲ್ದಾಣಕ್ಕೆ ಈ ಎಕ್ಸ್‌ಪ್ರೆಸ್‌ವೇ ಸಂಪರ್ಕ ಕಲ್ಪಿಸುತ್ತದೆ
- ಮಹಾರಾಷ್ಟ್ರದ ಜವಾಹರ್ ಲಾಲ್ ನೆಹರೂ ಬಂದರಿಗೆ ಸಂಪರ್ಕ ಕಲ್ಪಿಸುತ್ತದೆ
- ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ, ಉತ್ತರ ಪ್ರದೇಶವನ್ನು ಈ ಎಕ್ಸ್‌ಪ್ರೆಸ್‌ವೇ ಹಾದು ಹೋಗುತ್ತದೆ

ಆಧಾರ: ಪಿಟಿಐ, ನಿತಿನ್ ಗಡ್ಕರಿ ಟ್ವೀಟ್‌ಗಳು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಕಟಣೆ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಭೂಕಂಪಪೀಡಿತ ಟರ್ಕಿಗೆ ಭಾರತವು ವಿಮಾನಗಳ ಮೂಲಕ ಅತ್ಯಗತ್ಯ ಸಾಮಗ್ರಿಗಳನ್ನು ಪೂರೈಸಿದೆ. ಆದರೆ, ಇಂತಹ ಸಾಮಗ್ರಿಗಳನ್ನು ಹೊತ್ತ ಭಾರತೀಯ ವಾಯುಪಡೆಯ ಸಿ-17 ವಿಮಾನಗಳು ತನ್ನ ವಾಯುಗಡಿ ಹಾದುಹೋಗಲು ಪಾಕಿಸ್ತಾನ ಅನುಮತಿ ನಿರಾಕರಿಸಿದೆ. ಹೀಗಾಗಿ ಭಾರತದ ವಿಮಾನಗಳು ಇರಾನ್ ವಾಯುಗಡಿಯ ಮೂಲಕ ಟರ್ಕಿಯತ್ತ ಸಾಗಿವೆ. ಮುಸ್ಲಿಮರದ್ದೇ ದೇಶವಾದ ಟರ್ಕಿಗೆ ನೆರವು ನೀಡಲೂ ಪಾಕಿಸ್ತಾನವು ಅಡ್ಡಗಾಲು ಹಾಕುತ್ತಿದೆ' ಎಂಬ ವಿವರ ಇರುವ ಪೋಸ್ಟ್‌ಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಹರಿದಾಡಿವೆ. ಕೆಲವು ಮಾಧ್ಯಮ ಸಂಸ್ಥೆಗಳೂ ಇಂತಹ ಸುದ್ದಿ ಪ್ರಕಟಿಸಿವೆ. ಆದರೆ, ಇದು ಸುಳ್ಳು ಸುದ್ದಿ.

✓ 'ಪರಿಹಾರ ಸಾಮಗ್ರಿ ಹೊತ್ತು ಟರ್ಕಿಯತ್ತ ಹೋದ ಭಾರತದ ವಾಯುಪಡೆಯ ವಿಮಾನಗಳು ಪಾಕಿಸ್ತಾನದ ವಾಯುಗಡಿಯನ್ನು ಪ್ರವೇಶಿಲ್ಲ ಎಂಬುದು ನಿಜ. ಈ ವಿಮಾನಗಳು ಅರಬ್ಬಿ ಸಮುದ್ರದ ಮೇಲಿನ ವಾಯುಮಾರ್ಗದ ಮೂಲಕ, ಇರಾನ್ ವಾಯುಗಡಿಯನ್ನು ಪ್ರವೇಶಿಸಿವೆ. ನಂತರ ಟರ್ಕಿಯತ್ತ ಪ್ರಯಾಣ ಬೆಳೆಸಿವೆ. ಪಾಕಿಸ್ತಾನದ ವಾಯುಗಡಿಯನ್ನು ಪ್ರವೇಶಿಸಲು ಅನುಮತಿ ಕೋರಿದ್ದರ ಬಗ್ಗೆ ಮತ್ತು ಪಾಕಿಸ್ತಾನವು ಅನುಮತಿಯನ್ನು ನಿರಾಕರಿಸಿದ್ದರ ಬಗ್ಗೆ ವಾಯುಪಡೆಯು ಯಾವುದೇ ಮಾಹಿತಿ ನೀಡಿಲ್ಲ. ವಾಸ್ತವದಲ್ಲಿ ಭಾರತದ ಸೇನಾಪಡೆಗಳ ವಿಮಾನಗಳು ಪಾಕಿಸ್ತಾನದ ವಾಯುಗಡಿಯನ್ನು ಪ್ರವೇಶಿಸುವುದಿಲ್ಲ. ತಾಲಿಬಾನ್ ಅತಿಕ್ರಮಣದ ನಂತರ ಅಫ್ಗಾನಿಸ್ತಾನದಿಂದ ಭಾರತೀಯರನ್ನು ತೆರವು ಮಾಡುವಾಗಲೂ ಭಾರತೀಯ ವಾಯುಪಡೆಯ ವಿಮಾನಗಳು ಪಾಕಿಸ್ತಾನದ ವಾಯುಪ್ರದೇಶವನ್ನು ಬಳಸಿರಲಿಲ್ಲ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಚರ್ಚೆ ಬೇಡ – ದುಡಿತ ಬೇಕು

ಕಡಿದೊಡೆ ಪರೀಕ್ಷೆಗುಳಿವುವು ಸತ್ತ ನಾರುಗಳು |
ಕಡಿಯದಿರೆ ಮರದಿ ಪರಿಯುವುದು ಜೀವರಸ ||
ಬಿಡುವಮ್ ಈ ಬಾಳ್ ಅದೇಕೆಂಬ ಚರ್ಚೆಯ; ನಾವು |
ದುಡಿವಮ್ ಅದು ಪೆಂಪುಗೊಳೆ – ಮಂಕುತಿಮ್ಮ ||
819 ||

ಪದ-ಅರ್ಥ: ಪರೀಕ್ಷೆಗುಳಿವುವು = ಪರೀಕ್ಷೆಗೆ + ಉಳಿವುವು(ಉಳಿಯುವವು), ಪರಿಯುವುದು = ಹರಿಯುವುದು, ಬಿಡುವಮ್ = ಬಿಡೋಣ, ದುಡಿವಮ್ = ದುಡಿಯೋಣ, ಪೆಂಪುಗೊಳೆ = ಸಮೃದ್ಧಿಯಾಗುವಂತೆ.

ವಾಚ್ಯಾರ್ಥ: ಪರೀಕ್ಷೆಗೆಂದು ಮರ ಕಡಿದರೆ ಉಳಿಯುವವು ಕೇವಲ ಸತ್ತ ನಾರುಗಳು. ಕತ್ತರಿಸದಿದ್ದರೆ ಮರದಲ್ಲಿ ಜೀವರಸ ಹರಿಯುತ್ತದೆ. ಈ ಬಾಳು ಏಕೆ ಎಂಬ ಒಣಚರ್ಚೆಯನ್ನು ಬಿಡೋಣ, ಈ ಪ್ರಪಂಚ ಮತ್ತಷ್ಟು ಸಮೃದ್ಧಿಯಾಗುವಂತೆ ದುಡಿಯೋಣ.

ವಿವರಣೆ: ಈ ಮರ ಯಾವ ಜಾತಿಯದು? ಇದರ ಗುಣಲಕ್ಷಣಗಳೇನು ಎಂದು ಪರೀಕ್ಷೆ ಮಾಡಲು ಮರದ ಕಾಂಡವನ್ನು ಕತ್ತರಿಸಿ, ಅದರ ಬೇರುಗಳನ್ನು ಹಿಡಿದೆಳೆದು ತೆಗೆದಾಗ ನಮಗೆ ದೊರಕುವುದೇನು? ಸತ್ತ ನಾರುಗಳು. ಅಲ್ಲಿಗೆ ಮರದ ಬದುಕು ಮುಗಿದು ಹೋಯಿತು. ಆದರೆ ಮರವನ್ನು ಕಡಿಯದಿದ್ದರೆ ಜೀವರಸ ಅದರಲ್ಲಿ ಹರಿದು ಮರ ಸೊಂಪಾಗಿ ಬದುಕುತ್ತಿತ್ತು. ಮರದ ಮೂಲವನ್ನು ಕೆದಕುತ್ತ ಹೋದಂತೆ, ಮರದ ಸ್ವಾರಸ್ಯವೇ ಕಳೆದುಹೋಯಿತು. ಕಗ್ಗದ ಮೊದಲೆರಡು ಸಾಲುಗಳು ಮುಂದಿನ ಎರಡು ಸಾಲುಗಳಲ್ಲಿರುವ ಚಿಂತನೆಗೆ ಭೂಮಿಕೆಯನ್ನು ಒದಗಿಸುತ್ತವೆ. ಮರದ ಗುಣಪರೀಕ್ಷೆಗೆ ಮರ ಕಡಿಯುವಂತೆ ನಾವು ಬದುಕಿನ ಉದ್ದೇಶದ ಬಗ್ಗೆ ತರ್ಕ ವಿತರ್ಕಗಳನ್ನುಮಾಡುತ್ತಲೇ ಇರುತ್ತೇವೆ. ಬದುಕು ಎಂದರೇನು? ನಮ್ಮ ಬದುಕಿನ ಉದ್ದೇಶಗಳೇನು? ಸಾರ್ಥಕ್ಯವೇನು? ಈ ಬದುಕಿನಿಂದ ಮುಂದೇನು? ಹೋದ ಜನ್ಮದಲ್ಲಿ ನಾನು ಏನಾಗಿದ್ದೆ? ಮುಂದಿನ ಜನ್ಮದಲ್ಲಿ ನನಗೆ ಯಾವ ಸ್ಥಿತಿ ಕಾದಿದೆ? ಈ ತರಹದ ಪ್ರಶ್ನೆಗಳನ್ನು ಜನ ಸಾವಿರಾರು ಬಾರಿ ಕೇಳಿದ್ದಾರೆ. ಅದಕ್ಕೆ ಬದುಕಿನ ಸ್ವಾರಸ್ಯ ಗೊತ್ತಿದೆಯೆಂದುಕೊಂಡ ಅನೇಕ ವಿದ್ವಾಂಸರು ಸಾವಿರಾರು ಬಗೆಯ ಉತ್ತರ ಕೊಟ್ಟಿದ್ದಾರೆ. ಪ್ರಶ್ನೆಗಳು ಇನ್ನೂ ಮುಗಿದಿಲ್ಲ, ಉತ್ತರಗಳೂ ಮುಗಿಯುವುದಿಲ್ಲ. ಕಗ್ಗ ಕೇಳುತ್ತದೆ, ಯಾಕೆ ಈ ವ್ಯರ್ಥ ಚರ್ಚೆ? ಯಾಕೋ, ಏನೋ ಈ ಸಮೃದ್ಧ ಪ್ರಪಂಚದಲ್ಲಿ ಹುಟ್ಟಿ ಬಂದಿದ್ದೇವೆ. ಅದರ ಸಾರವನ್ನು ಹೀರೋಣ, ಸಂಭ್ರಮದಲ್ಲಿ ನಾವೂ ಸೇರಿ ನಲಿಯೋಣ, ಅದರ ಮತ್ತಷ್ಟು ಸಮೃದ್ಧಿಗೆ ದುಡಿಯೋಣ, ರಾಷ್ಟ್ರಕವಿ ಕುವೆಂಪು ಹೇಳುತ್ತಾರೆ,

ವಿಶ್ವಜೀವನವೊಂದು ಪಾರವಿಲ್ಲದ ಸಿಂದು,
ಮೇಲೆ ನೆರೆತೊರೆ ಎದ್ದು ಭೋರ್ಗರೆಯುರೆ ರೇಗಿ,
ಅದರಂತರಾಳದಲ್ಲಿ ಗುಪ್ತಗಾಮಿನಿಯಾಗಿ
ಹೃದಯಗಳು ನಲಿಯುತಿರೆ ಪ್ರೇಮತೀರ್ಥದಿ ಮಿಂದು
ಅದರರ್ಥಗಿರ್ಥಗಳು ಸೃಷ್ಟಿಕರ್ತನಿಗಿರಲಿ
ವ್ಯರ್ಥ ಜಿಜ್ಞಾಸೆಯಲಿ ಕಾಲಹರಣವದೇಕೆ
ಬಾರಯ್ಯ ಮಮ ಬಂಧು ಜೀವದ ಪಥದೊಳು
ಒಂದಾಗಿ ಮುಂದುವರೆಯುವಾ ||

ಈ ಪದ್ಯದ ಸಾರವೇ ಕಗ್ಗದ ಧ್ವನಿ. ಯಾಕೆ ವ್ಯರ್ಥ ಚರ್ಚೆಯಲ್ಲಿ ಕಾಲಹರಣ ಮಾಡುತ್ತ ನಮಗೆ ದೊರೆತಿರುವ ಸುಂದರ ಅವಕಾಶವನ್ನು ಹಾಳುಮಾಡಿಕೊಳ್ಳಬೇಕು? ಚರ್ಚೆಯನ್ನು ಬದಿಗಿಟ್ಟು, ನಾವಿರುವ ಪ್ರಪಂಚವನ್ನು ಮತ್ತಷ್ಟು ಶ್ರೀಮಂತಗೊಳಿಸಲು ದುಡಿಯೋಣ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 10, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಚತುರ್ಥಿ ಗಂ. 07-59 ನಕ್ಷತ್ರ: ಹಸ್ತ ಗಂ. 24-18 ಯೋಗ: ಧೃತಿ ಗಂ. 16-44, ಕರಣ: ಬಾಲವ ಗಂ. 07-59, ಮಕರ ಮಾಸದ 27 ನೇ ದಿನ.ರಾಹುಕಾಲ : ಬೆಳಿಗ್ಗೆ 10-30 –12-00
ಸೂರ್ಯೋದಯ : 06-59 ಸೂರ್ಯಾಸ್ತ : 06-31
ಮುಸ್ಲಿಂ ದಿನಾಂಕ : 18 ರಜಬ್
ಅದೃಷ್ಟ ಸಂಖ್ಯೆ : 5, 9

ಮೇಷ: ವೈಯಕ್ತಿಕ ಮತ್ತು ವ್ಯವಹಾರಿಕವಾಗಿ ಬಾಕಿ ಇರುವ ಕೆಲಸಗಳನ್ನು ಈ ದಿನದಲ್ಲಿ ಪೂರ್ತಿಗೊಳಿಸುವ ಬಗ್ಗೆ ಹೆಚ್ಚಿನ ಗಮನಹರಿಸಿ. ಸಂಗೀತ ಅಥವಾ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು.

ವೃಷಭ: ನಿರುದ್ಯೋಗಿಗಳಿಗೆ ಅನಿರೀಕ್ಷಿತ ಉದ್ಯೋಗ ಪ್ರಾಪ್ತಿಯಾಗುತ್ತದೆ. ರಾಜಕಾರಣಿಗಳ ಮಾತಿನ ಪ್ರಭಾವದಿಂದ ಅಥವಾ ಹಣಬಲದಿಂದ ನಿಮ್ಮ ಕೆಲಸ ನೆರವೇರುತ್ತದೆ. ಚಿಲ್ಲರೆ ವ್ಯಾಪಾರಿಗಳಿಗೆ ಅನುಕೂಲಕರ ದಿನ.

ಮಿಥುನ: ಭಾಷಾ ಅಧ್ಯಾಪಕರಿಗೆ ಮತ್ತು ನಾಟಕ ಕಲಾವಿದವರಿಗೆ ಹೆಚ್ಚಿನ ಮನ್ನಣೆ ಸಿಗುವುದು. ಮಕ್ಕಳ ಜತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಆಲೋಚನೆಯಂತೆ ನೂತನ ಮನೆ ಕೊಳ್ಳಲು ಹಣದ ವ್ಯವಸ್ಥೆಯಾಗಲಿದೆ.

ಕರ್ಕಾಟಕ: ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಒಳ್ಳೆಯ ಆದಾಯ ದೊರೆಯುತ್ತದೆ. ಕೃಷಿಕರಿಗೆ ಕೆಲಸದಲ್ಲಿ ಬಿಡುವಿಲ್ಲದಂತೆ ಆಗುವುದು. ಕಠಿಣ ನಿರ್ಧಾರದಿಂದ ಹಿಂದಿನ ಕೆಲಸಕಾರ್ಯಗಳೆಲ್ಲವು ಪೂರ್ಣಗೊಳ್ಳಲಿದೆ.

ಸಿಂಹ: ಶತ್ರುಗಳು ವಂಚನೆ ಮಾಡುವ ಸಲುವಾಗಿ ಮಿತ್ರರಾಗುವಂತೆ ನಟನೆ ಮಾಡಿಯಾರು, ಸ್ವಪ್ನದಲ್ಲಿ ಕೂಡಾ ಅಂಥವರ ಬಗ್ಗೆ ಜಾಗ್ರತರಾಗಿರಿ. ಓದಿನಲ್ಲಿ ಆಸಕ್ತಿ ಹೆಚ್ಚುವುದು. ಮಂಜುನಾಥನ ಅನುಗ್ರಹ ಪಡೆದುಕೊಳ್ಳಿರಿ.

ಕನ್ಯಾ: ದೇಹಾರೋಗ್ಯ ಉತ್ತಮವಾಗಿ ದಿನನಿತ್ಯದಂತೆ ಮಕ್ಕಳೊಡನೆ ಆಟಪಾಠಗಳಲ್ಲಿ ಪಾಲ್ಗೊಳ್ಳುವಿರಿ. ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಜಾಗ್ರತೆ ವಹಿಸುವುದು ಉತ್ತಮ. ನೀಲಿ ಬಣ್ಣ ಶುಭತರಲಿದೆ.

ತುಲಾ: ನೂತನ ಅಧಿಕಾರಿಗಳ ಆಗಮನದಿಂದ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ತೋರಿಬರಲಿದೆ. ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳುವ ಕಾರ್ಯದ ಬಗ್ಗೆ ಯೋಚನೆ ಮಾಡಿ. ಕುಶಲ ಕರ್ಮಿಗಳಿಗೆ ಆದಾಯ ಹೆಚ್ಚಲಿದೆ.

ವೃಶ್ಚಿಕ: ಹಣಕಾಸಿನ ವಹಿವಾಟು ಉತ್ತಮವಾಗಿದ್ದು. ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವಿರಿ. ಚತುರತೆಯಿಂದಾಗಿ ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು. ಭೂಮಿ ಮತ್ತು ಸ್ಥಿರಾಸ್ತಿ ಸಿಗಲಿದೆ.

ಧನು: ಸಮಯವನ್ನು ವ್ಯವಸ್ಥಿತ ರೀತಿಯಲ್ಲಿ ವಿಭಾಗಿಸಿ, ಸಮಯೋಚಿತವಾಗಿ ಕೆಲಸ ನಿರ್ವಹಿಸಿ. ವ್ಯವಹಾರಿಕ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಡಿ. ವಯಸ್ಕ ಮಗಳಿಗೆ ಅನುರೂಪ ವರ ದೊರೆತು ನೆಮ್ಮದಿ ಸಿಗಲಿದೆ.

ಮಕರ: ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ ಆದ್ದರಿಂದ ಸೂಕ್ಷ್ಮವಾಗಿ ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ನವಗ್ರಹ ಪೂಜೆಯಿಂದ ಶುಭ ವಾರ್ತೆ ಪಡೆಯುವಿರಿ.


ಕುಂಭ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜತೆಯಲ್ಲಿ ಅಧಿಕ ಲಾಭವೂ ದೊರಕಲಿದೆ. ನೆರೆಹೊರೆಯವರ ಕಿರಿಕಿರಿ ತಪ್ಪದು. ಜೀವನದ ಪಾಠವನ್ನು ಕಲಿಯುವುದು ಅಗತ್ಯವೆನಿಸುವುದು.

ಮೀನ: ಉದಯೋನ್ಮುಖ ತಾರೆಯರಿಗೆ ಮತ್ತು ಕಲಾವಿದರಿಗೆ ಅವಕಾಶ ಲಭಿಸಲಿದೆ. ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಶ್ರದ್ಧೆ ಮತ್ತು ಬುದ್ಧಿ ಬಲದಿಂದ ಅವರ ಸಾಧನೆಗೆ ಚ್ಯುತಿ ಬರುವುದಿಲ್ಲ.

ಪದಬಂಧ 5226 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬರದಲ್ಲಿ ಹೊರದೂಡುವಿಕೆ (4)
3.ನವಿರಾಗಿ ಪಸರಿಹ ಸುವಾಸನೆ (4)
5.ಸರದ ದರ ನೀಡಿ ತೋರಿದ ಸಲಿಗೆ (3)
7.ಪದರದೊಳಗೆ ಮೋಕ್ಷ ಕಂಡೀತೇ? (2)
9.ಶಿಷ್ಯನಿಗೆ ವಿದ್ಯೆಯನ್ನು ಕಲಿಸುವವನು (2)
10.ಒಂದು ಬಗೆಯ ಮರದ ಮೆಟ್ಟು (3)
11.ಹೆಚ್ಚು ಬೆಲೆ ಎಂದು ಹೀಗೂ ಹೇಳುವರು (3)
13.ಮಧುರ ಫಲಗಳನ್ನು ನೀಡುವ ವೃಕ್ಷ (2)
14.ಜನನಿ ನುಡಿದಿರುವ ಸತ್ಯ (2)
16.ಶಿವನ ಇನ್ನೊಂದು ಹೆಸರು (3)
18.ಹೊಗಳಿಕೆಯ ವಿರುದ್ಧ ಪದ (4)
19.ಎಳ್ಳು ನೀರು ಬಿಡುವಿಕೆ (4)

ಮೇಲಿಂದ ಕೆಳಕ್ಕೆ
1.ಸ್ಲೇಟಿನ ಬರೆಯುವ ಸಾಧನ (3)
2.ರಸನಕ್ಕೆ ಅಂಟಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಪುರದ ತುಂಬಾ ಹಬ್ಬಿದ ಸುಳ್ಳು ಸುದ್ದಿ (3)
6. ಧಣಿಗೆ ಆಗಿರುವ ಆಯಾಸ (3)
8.ನೆತ್ತರು ಹರಿಯುವಿಕೆ (5)
9.ಗುಟ್ಟಾಗಿ ಪ್ರವಹಿಸುವುದು (5)
12.ಲಾಂಗೂಲವಿರುವ ಹುಡುಗ! (3)
13.ಮಾತೆ ಹರಿಸಿದ ಪ್ರೀತಿ (3)
15.ಜನರು ಗಲಿಬಿಲಿಯಿಂದ ಏರಿದ ವೇದಿಕೆ (3)
16.ಅಂಕೆಗೆ ಸಿಕ್ಕದಿರುವಾಗ ಬಂದಿರುವ ಅನುಮಾನ (2)
17.ಕಾಮನ ಪತ್ನಿ (2)



5225ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾದ್ವಾರ 3.ಮಗಳು
5.ನವದಂಪತಿ
7.ನಸರಿ 9.ಕಾಮನೆ
11.ಕದಪು 13.ಮರಣಕಾಲ
15.ಸುದಿನ 16.ಮಿಲಾಕತು

ಮೇಲಿಂದ ಕೆಳಕ್ಕೆ:
1.ಮತದಾನ 2.ರಸನ
4.ಗರತಿ 6.ದಂಡನೆ 8.ಸತ್ವ
9.ಕಾರಣ 10.ಮದ
12.ಪುರಸತ್ತು 13.ಮಡದಿ
14.ಲಕುಮಿ

ಸುಡೊಕು 5612

	4		1		3	5		7
7		6	4				3	1
	3				7	4		
6	1				4			
						6		4
8	2						1	
		3		2		9		8
9			3		6			5
4		1		8			6	


5611 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು ▲143



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,871
ಇಂದಿನ ಅಂತ್ಯ	17,893
▲	22
ದಿನದ ಗರಿಷ್ಠ	17,916

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹448

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1650)
ಸೋಯಾ (ರಿಫೈನ್ಡ್)	₹1170 (1170)
ಸೂರ್ಯಕಾಂತಿ (ರಿಫೈನ್ಡ್)	₹1165 (1170)
ಪಾಮೋಲಿನ್	₹962 (965)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹511-614
ದ್ವಿತಳಿ (ಬಿ.ವಿ)	₹200-708

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹134
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹130

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹700-1000

₹ 8,334 ಕೋಟಿಗೆ ಹೆಚ್ಚಿದ ಎಲ್‌ಐಸಿ ನಿವ್ವಳ ಲಾಭ

ಮುಂಬೈ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಡಿಸೆಂಬರ್ ತ್ರೈಮಾಸಿಕದ ನಿವ್ವಳ ಲಾಭವು ಹಲವು ಪಟ್ಟು ಹೆಚ್ಚಾಗಿದ್ದು ₹ 8,334 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಎಲ್‌ಐಸಿ ₹ 235 ಕೋಟಿ ಲಾಭ ಗಳಿಸಿತ್ತು.

ಡಿಸೆಂಬರ್ ತ್ರೈಮಾಸಿಕದ-ಲ್ಲಿ ಕಂಪನಿಯು ₹ 1.11 ಲಕ್ಷ ಕೋಟಿಯನ್ನು ಪ್ರೀಮಿಯಂ ಸಂಗ್ರಹದ ಮೂಲಕ ಗಳಿಸಿದೆ. ಹಿಂದಿನ ವರ್ಷದಲ್ಲಿ ಇದು ₹ 97 ಸಾವಿರ ಕೋಟಿ ಆಗಿತ್ತು.

ಹಿಂದಿನ ವರ್ಷದ ಈ ಅವಧಿಯಲ್ಲಿ ಎಲ್‌ಐಸಿ ಷೇರುಪೇಟೆಯಲ್ಲಿ ನೋಂದಾಯಿತ ಆಗಿರಲಿಲ್ಲ.

ಹೂಡಿಕೆಗಳಿಂದ ಬಂದಿರುವ ವರಮಾನವು ₹ 84,889 ಕೋಟಿಗೆ ತಲುಪಿದೆ ಎಂದು ಎಲ್‌ಐಸಿ ಷೇರುಪೇಟೆಗೆ ಮಾಹಿತಿ ನೀಡಿದೆ. ₹ 2,000 ಕೋಟಿಯನ್ನು ಷೇರುದಾರರ ನಿಧಿಗೆ ವರ್ಗಾವಣೆ ಮಾಡಲು ಹಣ ತೆಗೆದಿರಿಸಿದ ನಂತರದಲ್ಲಿ ಕಂಪನಿಯ ನಿವ್ವಳ ಲಾಭವು ₹ 6,334 ಕೋಟಿ ಆಗುತ್ತದೆ ಎಂದು ಅಧ್ಯಕ್ಷ ಎಂ.ಆರ್. ಕುಮಾರ್ ಹೇಳಿದ್ದಾರೆ.

ಡಿಸ್ನಿ: 7,000 ಸಿಬ್ಬಂದಿ ವಜಾ

ಸ್ಯಾನ್ ಫ್ರಾನ್ಸಿಸ್ಕೊ (ಎಎಫ್‌ಪಿ): ಡಿಸ್ನಿ ಕಂಪನಿಯು ಒಟ್ಟು ಏಳು ಸಾವಿರ ನೌಕರರನ್ನು ಕೆಲಸದಿಂದ ತೆಗೆಯಲಿದೆ. ಕಂಪನಿಯ ಪುನರ್‌ರಚನೆಯ ಭಾಗವಾಗಿ ಈ ಕ್ರಮಕ್ಕೆ ಸಿಇಒ ಬಾಬ್ ಐಗರ್ ಮುಂದಾಗಿದ್ದಾರೆ.

2021ರ ವಾರ್ಷಿಕ ವರದಿ ಪ್ರಕಾರ ಕಂಪನಿಯು ವಿಶ್ವದಾದ್ಯಂತ 1.90 ಲಕ್ಷ ನೌಕರರನ್ನು ಹೊಂದಿದೆ. ಈ ಪೈಕಿ ಶೇಕಡ 80ರಷ್ಟು ಮಂದಿ ಪೂರ್ಣಾವಧಿ ನೌಕರರು.

ಕಂಪನಿಯ ಒಟಿಟಿ ಚಂದಾದಾರರ ಸಂಖ್ಯೆಯಲ್ಲಿ ಈಚೆಗೆ ಇಳಿಕೆ ಕಂಡುಬಂದಿದೆ. ಗ್ರಾಹಕರು ತಮ್ಮ ವೆಚ್ಚಗಳನ್ನು ಕಡಿಮೆ ಮಾಡಿರುವುದು ಇದಕ್ಕೆ ಕಾರಣ ಎನ್ನಲಾಗಿದೆ.

ಕೆನರಾ ಬ್ಯಾಂಕ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಪಾವತಿಗಳ ವಿಭಾಗದಲ್ಲಿ ಸಮಗ್ರ ಸಾಧನೆಗಾಗಿ ಅತ್ಯುನ್ನತ ಹಂತವನ್ನು ತಲುಪಿದ್ದಕ್ಕಾಗಿ ಕೆನರಾ ಬ್ಯಾಂಕ್‌ಗೆ, ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನೀಡುವ ಪ್ರಶಸ್ತಿ ದೊರೆತಿದೆ.

ಈ ಪ್ರಶಸ್ತಿಯುನ್ನು 2021-22ನೆಯ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಸಾಧನೆಗಾಗಿ ನೀಡಲಾಗಿದೆ. ಬ್ಯಾಂಕ್‌ನ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕ ಕೆ. ಸತ್ಯನಾರಾಯಣ ರಾಜು ಅವರು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು ಎಂದು ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	1150-1200
ಹೆರಕಿದ್ದು	1150-1200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1350-1450
ಕಾಳು ಮೆಣಸು	480
ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಕುಮಟ	
ಚಿಪ್ಪು	23209-33069
ಕೋಕ	15389-31109
ಹಳೆಚಾಲಿ	35600-38599
ಹೊಸಚಾಲಿ	33019-35229
ಕುಂದಾಪುರ	
ಹಳೆಚಾಲಿ	40000-49500
ಹೊಸಚಾಲಿ	35000-40000
ಸಾಗರ	
ಬಿಳಿಗೋಟು	23610-30313
ಚಾಲಿ	30199-37599
ಕೋಕ	24569-28989
ಕೆಂಪುಗೋಟು	20210-35269
ರಾಶಿ	40899-46199
ಸಿಪ್ಪೆಗೋಟು	13610-21000
ಶಿವಮೊಗ್ಗ	
ಬೆಟ್ಟೆ	46569-52710
ಗೊಬರಲು	18029-35370
ರಾಶಿ	37199-46509
ಸರಕು	51069-80299
ಸಿದ್ದಾಪುರ	
ಬಿಳಿಗೋಟು	28089-32899
ಚಾಲಿ	37149-39699
ಕೋಕ	26619-31689
ಕೆಂಪುಗೋಟು	31389-33319
ರಾಶಿ	43009-45699
ತಟ್ಟಿಬೆಟ್ಟೆ	36289-39169
ಶಿರಸಿ	
ಬೆಟ್ಟೆ	28499-44521
ಬಿಳಿಗೋಟು	24709-33290
ಚಾಲಿ	32399-40800
ಕೆಂಪುಗೋಟು	30499-33896
ರಾಶಿ	40999-46299
ಯಲ್ಲಾಪುರ	
ಬಿಳಿಗೋಟು	22899-32399
ಕೋಕ	16109-28899
ಹಳೆಚಾಲಿ	37150-40551
ಹೊಸಚಾಲಿ	33212-36899
ಕೆಂಪುಗೋಟು	24899-34969

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	14900	14400	175.70 ಸೆಂಟ್ಸ್
ಎಸಿ	7140	7150	6200	
ಆರ್‌ಪಿ	10400	9600	8900	ಲಂಡನ್
ಆರ್‌ಸಿ	5170	185 on OT	4500	2038 ಡಾಲರ್ಸ್

2014ರಿಂದಲೇ ಹೂಡಿಕೆ ಹಿಂಪಡೆಯುತ್ತಿರುವ ಸಂಸ್ಥೆ

ನಾರ್ವೆ ವೆಲ್ತ್ ಫಂಡ್ 'ಅದಾನಿ'ಯಿಂದ ಹೊರಕ್ಕೆ

ಓಸ್ಲೋ (ಎಎಫ್‌ಪಿ): ಅದಾನಿ ಸಮೂಹದ ಕಂಪನಿಗಳಲ್ಲಿ ಹೊಂದಿದ್ದ ಅಷ್ಟೂ ಷೇರುಗಳನ್ನು ಮಾರಾಟ ಮಾಡಿರುವುದಾಗಿ 'ನಾರ್ವೆ ಸಾವರಿನ್ ವೆಲ್ತ್ ಫಂಡ್' ಗುರುವಾರ ತಿಳಿಸಿದೆ.

2022ರ ಅಂತ್ಯದ ವೇಳೆಗೆ ಅದಾನಿ ಸಮೂಹದಲ್ಲಿ ₹ 1,640 ಕೋಟಿ ಮೌಲ್ಯದ ಷೇರುಗಳನ್ನು ಈ ಸಂಸ್ಥೆ ಹೊಂದಿತ್ತು.

ಅದಾನಿ ಗ್ರೀನ್ ಎನರ್ಜಿ ಕಂಪನಿಯಲ್ಲಿ ಶೇ 0.14ರಷ್ಟು, ಅದಾನಿ ಟೋಟಲ್ ಗ್ಯಾಸ್‌ನಲ್ಲಿ ಶೇ 0.17ರಷ್ಟು ಮತ್ತು ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್‌ನಲ್ಲಿ ಶೇ 0.3ರಷ್ಟು ಷೇರುಪಾಲು ಹೊಂದಿತ್ತು.

'2022ರ ಅಂತ್ಯದಿಂದ ಈಚೆಗೆ ಐದು ವಾರಗಳಲ್ಲಿ ಅದಾನಿ ಕಂಪನಿಗಳಲ್ಲಿ ನಮ್ಮ ಹೂಡಿಕೆಯನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ' ಎಂದು ಕಂಪನಿಯಲ್ಲಿನ ಪರಿಸರ, ಸಮಾಜ ಮತ್ತು ಆಡಳಿತ (ಇಎಸ್‌ಜಿ) ವ್ಯವಸ್ಥೆಯ ವಿಪತ್ತು ನಿಗಾ ವಿಭಾಗದ ಮುಖ್ಯಸ್ಥ ಕ್ರಿಸ್ಟೊಫರ್ ವ್ರೈಟ್ ತಿಳಿಸಿದ್ದಾರೆ.

ಅರಣ್ಯನಾಶ ಮತ್ತು ಹಸಿರುಮನೆ ಅನಿಲ ಹೊರಸೂಸುವಿಕೆಯ ಪ್ರಮಾಣ ಗರಿಷ್ಠ ಮಟ್ಟದಲ್ಲಿ ಇರುವ ಕಾರಣಗಳಿಂದಾಗಿ ನಾರ್ವೆ ಸಾವರಿನ್ ವೆಲ್ತ್ ಫಂಡ್, 2014ರಿಂದ 2023ರವರೆಗಿನ ಅವಧಿಯಲ್ಲಿ ಅದಾನಿ ಸಮೂಹದ ಆರು ಕಂಪನಿಗಳಿಂದ ಹೂಡಿಕೆ ಹಿಂದಕ್ಕೆ ಪಡೆದಿದೆ.

ಕಂಪನಿಗಳು ಇಸಿಜಿ ಮಾನದಂಡಗಳನ್ನು ಸರಿಯಾಗಿ ನಿರ್ವಹಿಸದೇ ಇರುವ ಕಾರಣಕ್ಕಾಗಿ ಕಳೆದ ವರ್ಷ ನಾರ್ವೆ ಸಂಸ್ಥೆಯು ಜಾಗತಿಕವಾಗಿ 74 ಕಂಪನಿಗಳಿಂದ ಹೂಡಿಕೆ ಹಿಂದಕ್ಕೆ ಪಡೆದಿತ್ತು. ಅಲ್ಲದೆ ಸಮಿತಿಯೊಂದರ ಶಿಫಾರಸಿನ ಮೇರೆಗೆ 13 ಇತರ ಕಂಪನಿಗಳಿಂದಲೂ ಬಂಡವಾಳ ಹಿಂದಕ್ಕೆ ಪಡೆದಿದೆ.

9 ಸಾವಿರ ಕಂಪನಿಗಳಲ್ಲಿ ನಾರ್ವೆ ಸಾವರಿನ್ ವೆಲ್ತ್ ಫಂಡ್ ಹೂಡಿಕೆ ಮಾಡಿದೆ. ಬಾಂಡ್‌ಗಳು ಮತ್ತು ರಿಯಲ್ ಎಸ್ಟೇಟ್‌ನಲ್ಲಿ-ಯೂ ಬಂಡವಾಳ ತೊಡಗಿಸುತ್ತದೆ. ಮಾನವ ಹಕ್ಕು ಉಲ್ಲಂಘಿಸುವ, ಅಣ್ವ-ಸ್ತ್ರಗಳನ್ನು ತಯಾರಿಸುವ ಅಥವಾ ಕಲ್ಲಿದ್ದಲು ಮತ್ತು ತಂಬಾಕು ಬಳಕೆಯ ಕಂಪನಿಗಳಲ್ಲಿ ಇದು ಹೂಡಿಕೆ ಮಾಡುವುದಿಲ್ಲ.

ಈಕ್ವಿಟಿ ಎಂಎಫ್: ಒಳಹರಿವು

ನವದೆಹಲಿ (ಪಿಟಿಐ): ವ್ಯವಸ್ಥಿತ ಹೂಡಿಕೆ ಯೋಜನೆಗೆ (ಎಸ್‌ಐಪಿ) ಬೇಡಿಕೆ ಹೆಚ್ಚಾಗುತ್ತಿರುವುದರಿಂದ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮೂಲಕ ಜನವರಿಯಲ್ಲಿ ₹ 12,546 ಕೋಟಿ ಬಂಡವಾಳ ಹೂಡಿಕೆ ಆಗಿದೆ. ನಾಲ್ಕು ತಿಂಗಳ ಬಳಿಕ ಆಗಿರುವ ಗರಿಷ್ಠ ಮೊತ್ತದ ಹೂಡಿಕೆ ಇದಾಗಿದೆ.

ಈ ಹಿಂದೆ 2022ರ ಸೆಪ್ಟೆಂಬರ್‌ನಲ್ಲಿ ₹ 14,100 ಕೋಟಿಯಷ್ಟು ಗರಿಷ್ಠ ಮೊತ್ತ ಹೂಡಿಕೆ ಆಗಿತ್ತು. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಸತತ 23ನೇ ತಿಂಗಳಿನಲ್ಲಿಯೂ ಬಂಡವಾಳದ ನಿವ್ವಳ ಹೂಡಿಕೆ ಆದಂತಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಎಸ್‌ಐಪಿ ಮೂಲಕ ಜನವರಿಯಲ್ಲಿ ₹ 13,856 ಕೋಟಿ ಹೂಡಿಕೆ ಆಗಿದೆ. 2022ರ ಡಿಸೆಂಬರ್‌ನಲ್ಲಿ ₹ 13,573 ಕೋಟಿ ಹೂಡಿಕೆ ಆಗಿತ್ತು. ಸತತ ನಾಲ್ಕನೇ ತಿಂಗಳಿನಲ್ಲಿ ಎಸ್‌ಐಪಿಯಲ್ಲಿ ಒಳಹರಿವು ₹ 13 ಸಾವಿರ ಕೋಟಿಯನ್ನು ದಾಟಿದೆ.

ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು ಜನವರಿಯಲ್ಲಿ ₹39.89 ಕೋಟಿಯಿಂದ ₹39.62 ಕೋಟಿಗೆ ಅಲ್ಪ ಇಳಿಕೆ ಕಂಡಿದೆ.

₹ 4 ಸಾವಿರ ಕೋಟಿಗೆ ವಹಿವಾಟು: ಡುಕಾಬ್ ಸಮೂಹದ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಎಇ ಮೂಲದ ಡುಕಾಬ್ ಸಮೂಹವು ಭಾರತದಲ್ಲಿ ತನ್ನ ವಹಿವಾಟನ್ನು ಎರಡು ವರ್ಷಗಳಲ್ಲಿ ₹ 4 ಸಾವಿರ ಕೋಟಿಗೆ ಹೆಚ್ಚಿಸುವ ಗುರಿ ಹೊಂದಿದೆ ಎಂದು ಸಮೂಹದ ಸಿಇಒ ಮಹಮ್ಮದ್ ಅಲ್ಲುತಾವಾ ಹೇಳಿದರು. ಸಮೂಹವು ಸದ್ಯ ಭಾರತದಲ್ಲಿ ₹ 2 ಸಾವಿರ ಕೋಟಿ ಮೊತ್ತದ ವಹಿವಾಟು ನಡೆಸುತ್ತಿದೆ.

ಭಾರತದಲ್ಲಿ ತನ್ನ ವಹಿವಾಟು ಹೆಚ್ಚಿಸುವ ಗುರಿಯ ಭಾಗವಾಗಿ ಬೆಂಗಳೂರಿನಲ್ಲಿ ಭಾರತ ಮತ್ತು ಆಗ್ನೇಯ ಏಷ್ಯಾದ ಕಚೇರಿಯನ್ನು ಸಮೂಹವು ಆರಂಭಿಸಿದೆ.

2022ರಲ್ಲಿ ಭಾರತ-ಯುಎಇ 'ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ'ಕ್ಕೆ (ಸಿಇಪಿಎ) ಸಹಿ ಮಾಡಿದ್ದು, ಅದರ ಅಡಿಯಲ್ಲಿ ಐದು ವರ್ಷಗಳಲ್ಲಿ ತೆರಿಗೆ ಪ್ರಮಾಣವು ಶೂನ್ಯಕ್ಕೆ ಬರಲಿದೆ. ಒಪ್ಪಂದದಿಂದಾಗಿ ಉಭಯ ದೇಶಗಳ ಮಧ್ಯೆ ತೈಲಯೇತರ ವ್ಯಾಪಾರ ಐದು ವರ್ಷಗಳಲ್ಲಿ ₹ 4.92 ಲಕ್ಷ ಕೋಟಿಯಿಂದ ₹ 8.2 ಲಕ್ಷ ಕೋಟಿಗೆ ಹೆಚ್ಚಾಗಲಿದೆ ಎಂದು ಅಲ್ಲುತಾವಾ ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

9–2–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1660)
ಒಂದು ವಾರದ ಡೆಲಿವರಿ	1645 (1665)
ಸೋಯಾ ಕಚ್ಚಾ	1070 (1080)
ಪಾಮ್ ವಾರದ ಡೆಲಿವರಿ	960 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060 (1070)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,350 (57,000)
ಬೆಳ್ಳಿ ಕೆ.ಜಿ
67,450 (67,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಷ್ಯಾದಿಂದ ಭಾರತ ತೈಲ ಖರೀದಿ: ನಿಲುವು ಬದಲಿಸಿದ ಅಮೆರಿಕ

ನವದೆಹಲಿ: ರಷ್ಯಾದಿಂದ ತೈಲ ಖರೀದಿಸುವುದನ್ನು ಮುಂದುವರಿಸಿರುವ ಭಾರತದ ಮೇಲೆ ನಿರ್ಬಂಧ ಹೇರಬೇಕು ಎಂಬ ತನ್ನ ನಿಲುವನ್ನು ಅಮೆರಿಕ ಬದಲಾಯಿಸಿದೆ.

ಈ ಕುರಿತು ಅಮೆರಿಕದ ಇಬ್ಬರು ರಾಜತಾಂತ್ರಿಕರು ಮಾಹಿತಿ ನೀಡಿದ್ದಾರೆ.

ಉಕ್ರೇನ್ ಮೇಲಿನ ರಷ್ಯಾ ದಾಳಿಯನ್ನು ಖಂಡಿಸಿದ್ದ ಅಮೆರಿಕ, ರಷ್ಯಾದಿಂದ ತೈಲ ಖರೀದಿಸುವುದರ ಮೇಲೆ ನಿಷೇಧ ಹೇರಿತ್ತು.

‘ಭಾರತದ ಮೇಲೆ ನಾವು ನಿರ್ಬಂಧ ಹೇರುವುದಿಲ್ಲ. ಭಾರತದೊಂದಿಗೆ ಅಮೆರಿಕ ಯಾವತ್ತೂ ಉತ್ತಮ ಬಾಂಧವ್ಯ ಹೊಂದಿದೆ’ ಎಂದು ಯುರೋಪ್ ಮತ್ತು ಏಷ್ಯಾ ವ್ಯವಹಾರಗಳ ಇಲಾಖೆಯ ಸಹಾಯಕ ಸಚಿವ ಕೆರನ್ ಡಾನ್‌ಫ್ರೀಡ್ ಹೇಳಿದ್ದಾರೆ.

‘ಇಂಧನ ಕ್ಷೇತ್ರಕ್ಕೆ ಸಂಬಂಧಿಸಿ ನಿರ್ಬಂಧ ಹೇರುವ ನಮ್ಮ ನೀತಿಯು ಸಾರ್ವತ್ರಿಕವಾಗಿರಬೇಕು ಎಂಬುದು ನಮ್ಮ ನಂಬಿಕೆಯಲ್ಲ. ಹೀಗಾಗಿ, ಭಾರತದ ನಿರ್ಧಾರ ಕುರಿತು ನಮಗೆ ಅಸಮಾಧಾನ ಇಲ್ಲ’ ಎಂದು ಇಂಧನ ಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯದರ್ಶಿ ಜೆಫ್ರಿ ಆರ್.ಪ್ಯಾಟ್ ಹೇಳಿದ್ದಾರೆ.

‘ದಿನಗೂಲಿ: ಮಂಜೂರಾದ ಹುದ್ದೆಗೆ ನೇಮಕವಾಗಿದ್ದರೆ ಮಾತ್ರ ಕಾಯಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಂಜೂರಾದ ಹುದ್ದೆಗೆ ಸಕ್ಷಮ ಪ್ರಾಧಿಕಾರವು ನೇಮಕ ಮಾಡಿರದ ಹೊರತು, ದಿನಗೂಲಿ ನೌಕರನ ಸೇವೆಯನ್ನು ಕಾಯಂಗೊಳಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸೇವೆಯನ್ನು ಕಾಯಂಗೊಳಿಸುವಂತೆ ಕೋರಿ ಮಧ್ಯಪ್ರದೇಶದ ವಿಭೂತಿಶಂಕರ್ ಪಾಂಡೆ ಎಂಬ ದಿನಗೂಲಿ ನೌಕರ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ, ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಈ ಮಾತನ್ನು ಹೇಳಿದೆ.

ಈ ಪ್ರಕರಣದಲ್ಲಿ ಮಧ್ಯಪ್ರದೇಶ ಹೈಕೋರ್ಟ್‌ನ ವಿಭಾಗೀಯ ಪೀಠವು 2020ರ ಫೆಬ್ರುವರಿ 13ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ವಿಭೂತಿಶಂಕರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ವಜಾಗೊಳಿಸಿತು.



ಪ್ರಕರಣದ ವಿವರ: ವಿಭೂತಿಶಂಕರ್ ಅವರು 1980ರಲ್ಲಿ ದಿನಗೂಲಿ ಆಧಾರದ ಮೇಲೆ ಜಲ ಸಂಪನ್ಮೂಲ ಇಲಾಖೆಯಲ್ಲಿ ಸೂಪರ್‌ವೈಸರ್ ಆಗಿ ನೇಮಕಗೊಂಡಿದ್ದರು. ಈ ಹುದ್ದೆಗೆ ನೇಮಕವಾಗಲು ಅಭ್ಯರ್ಥಿಯು ಗಣಿತದೊಂದಿಗೆ ಮೆಟ್ರಿಕ್ಯುಲೇಷನ್‌ನಲ್ಲಿ ತೇರ್ಗಡೆಯಾಗಿರಬೇಕಿತ್ತು. ವಿಭೂತಿಶಂಕರ್ ಈ ಶೈಕ್ಷಣಿಕ ಅರ್ಹತೆ ಹೊಂದಿರಲಿಲ್ಲ.

ಆದರೆ, 2010ರ ಡಿಸೆಂಬರ್ 31ರಂದು ಈ ಹುದ್ದೆಗೆ ನಿಗದಿಪಡಿಸಿದ್ದ ಶೈಕ್ಷಣಿಕ ಅರ್ಹತೆಯಲ್ಲಿ ವಿನಾಯಿತಿ ನೀಡಲಾಗಿತ್ತು. ದಿನಗೂಲಿ ನೌಕರರ ಪೈಕಿ ತನಗಿಂತ ಕಿರಿಯರ ಸೇವೆಯನ್ನು 1990ರಲ್ಲಿ ಹಾಗೂ ಅದಕ್ಕೂ ಮುಂಚೆಯೂ ಕಾಯಂಗೊಳಿಸಲಾಗಿದೆ. ಹೀಗಾಗಿ, ತನ್ನ ಸೇವೆಯನ್ನು ಕಾಯಂಗೊಳಿಸುವಂತೆ ಕೋರಿ ಅರ್ಜಿದಾರ ಹೈಕೋರ್ಟ್ ಮೆಟ್ಟಿಲೇರಿದ್ದರು.

ಇಲಾಖೆಯಲ್ಲಿ ಸೂಪರ್‌ವೈಸರ್ ಆಗಿ ವಿಭೂತಿಶಂಕರ್ ಅವರ ಸೇವೆಯನ್ನು ಕಾಯಂಗೊಳಿಸುವಂತೆ ಹೈಕೋರ್ಟ್‌ನ ಏಕ ಸದಸ್ಯ ಪೀಠ ಆದೇಶಿಸಿತ್ತು. ನಂತರ, ವಿಭಾಗೀಯ ಪೀಠವು ಏಕಸದಸ್ಯ ಪೀಠದ ಆದೇಶವನ್ನು ರದ್ದುಗೊಳಿಸಿತ್ತು. ವಿಭಾಗೀಯ ಪೀಠದ ಈ ತೀರ್ಪನ್ನು ಪ್ರಶ್ನಿಸಿ ವಿಭೂತಿಶಂಕರ್ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ವೇಳೆ, ‘ಕರ್ನಾಟಕ ಸರ್ಕಾರದ ಕಾರ್ಯದರ್ಶಿ ವಿರುದ್ಧ ಉಮಾದೇವಿ ಹಾಗೂ ಇತರರು’ ಪ್ರಕರಣದಲ್ಲಿ 2006ರಲ್ಲಿ ನೀಡಿದ್ದ ತೀರ್ಪನ್ನು ನ್ಯಾಯಪೀಠ ಉಲ್ಲೇಖಿಸಿತು.

‘ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ನಡೆದಿರಬೇಕು ಹಾಗೂ ದಿನಗೂಲಿ ನೌಕರ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯು ಮಂಜೂರಾದ ಹುದ್ದೆಯಾಗಿರಬೇಕು. ಈ ಎರಡು ಅಂಶಗಳನ್ನು ಏಕಸದಸ್ಯ ಪೀಠವು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂದು ಅಭಿಪ್ರಾಯಪಟ್ಟು ಮಧ್ಯಪ್ರದೇಶ ಹೈಕೋರ್ಟ್ ವಿಭಾಗೀಯ ಪೀಠವು ನೀಡಿರುವ ತೀರ್ಪು ಸರಿಯಾಗಿಯೇ ಇದೆ’ ಎಂದು ಸುಪ್ರೀಂ ಕೋರ್ಟ್ ಹೇಳಿತು.

‘ಕನಿಷ್ಠ ವಿದ್ಯಾರ್ಹತೆಯಲ್ಲಿ ವಿನಾಯಿತಿ ನೀಡಿರುವ ಅಂಶವು ಅರ್ಜಿದಾರನ ಸೇವೆಯನ್ನು ಕಾಯಂಗೊಳಿಸಲು ಅಡ್ಡಿಯಾಗುವುದಿಲ್ಲ. ಆದರೆ, ಮಂಜೂರಾದ ಹುದ್ದೆಯೊಂದಕ್ಕೆ ಅರ್ಜಿದಾರ ನೇಮಕಗೊಂಡಿಲ್ಲ ಎಂಬುದು ವಾಸ್ತವ ಸಂಗತಿ’ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.



ಯುವ ಕಾಂಗ್ರೆಸ್ ಪ್ರತಿಭಟನೆ...

ಎಲ್‌ಐಸಿ ಹಾಗೂ ಎಸ್‌ಬಿಐ ಹಣವನ್ನು ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಿರುವುದನ್ನು ಖಂಡಿಸಿ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ನೇತೃತ್ವದಲ್ಲಿ ಕಾರ್ಯಕರ್ತರು ಗುರುವಾರ ನವದೆಹಲಿಯಲ್ಲಿ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಗೌತಮ್ ಅದಾನಿ ಅವರ ಮುಖವಾಡ ಧರಿಸಿ ಪ್ರತಿಭಟನೆ ನಡೆಸಿದರು–ಪಿಟಿಐ ಚಿತ್ರ

ಹಿಂಡನ್‌ಬರ್ಗ್ ವರದಿ: ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಅಮೆರಿಕದ ಹೂಡಿಕೆ ಸಂಶೋಧನಾ ಸಂಸ್ಥೆ ‘ಹಿಂಡನ್‌ಬರ್ಗ್ ರಿಸರ್ಚ್’ ವರದಿ ಕುರಿತ ವಿಚಾರಣೆ ಹಾಗೂ ತನಿಖೆ ಕೈಗೊಳ್ಳುವುದಕ್ಕಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ಮೇಲ್ವಿಚಾರಣೆಯಲ್ಲಿ ಸಮಿತಿಯೊಂದನ್ನು ರಚಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಆಗ್ರಹಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು (ಪಿಐಎಲ್) ಸಲ್ಲಿಕೆಯಾಗಿದ್ದು, ಇದರ ವಿಚಾರಣೆಯನ್ನು ಶುಕ್ರವಾರ ನಡೆಸುವುದಾಗಿ ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಅರ್ಜಿಯನ್ನು ತುರ್ತು ವಿಚಾರಣೆಗೆ ಪಟ್ಟಿ ಮಾಡುವಂತೆ ಅರ್ಜಿದಾರರಾದ, ವಕೀಲ ವಿಶಾಲ್ ತಿವಾರಿ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠಕ್ಕೆ ಮನವಿ ಮಾಡಿದರು.

‘ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಪಿಐಎಲ್‌ವೊಂದು ಸಲ್ಲಿಕೆಯಾಗಿದೆ. ಶುಕ್ರವಾರ ಅದರ ವಿಚಾರಣೆ ನಿಗದಿಯಾಗಿದೆ. ನಾನು ಸಲ್ಲಿಸಿರುವ ಅರ್ಜಿಯನ್ನೂ ಅದರ ಜೊತೆಗೇ ವಿಚಾರಣೆ ನಡೆಸಲು ಪರಿಗಣಿಸಬೇಕು’ ಎಂದೂ ಅವರು ನ್ಯಾಯಪೀಠವನ್ನು ಕೋರಿದರು. ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು ತಿವಾರಿ ಅವರ ಮನವಿಯನ್ನು ಪುರಸ್ಕರಿಸಿದರು.

ಅದಾನಿ ಸಮೂಹವು ಷೇರು ಬೆಲೆಯ ಮೇಲೆ ಕೃತಕವಾಗಿ ಪರಿಣಾಮ ಬೀರುವ ಕೆಲಸದಲ್ಲಿ ಹಾಗೂ ಲೆಕ್ಕಪತ್ರಗಳ ವಂಚನೆಯಲ್ಲಿ ತೊಡಗಿದೆ ಎಂದು ‘ಹಿಂಡನ್‌ಬರ್ಗ್ ರಿಸರ್ಚ್’ ಆರೋಪಿಸಿತ್ತು.

ಎನ್‌ಎಸ್‌ಇ ಕರೆ ಕದ್ದಾಲಿಕೆ: ಚಿತ್ರಾಗೆ ಜಾಮೀನು

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರು ವಿನಿಮಯ (ಎನ್‌ಎಸ್‌ಇ) ಕೇಂದ್ರದ ಸಿಬ್ಬಂದಿಯ ಕರೆ ಕದ್ದಾಲಿಕೆ ಹಾಗೂ ಮಾಹಿತಿ ಕಳ್ಳತನ ಮಾಡಲಾಗಿದೆ ಎಂಬ ಆರೋಪ ಸಂಬಂಧ ಹಣ ಅಕ್ರಮ ವರ್ಗಾವಣೆ ಪಕ್ರರಣದಲ್ಲಿ ಎನ್‌ಎಸ್‌ಇಯ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕಿ ಚಿತ್ರಾ ರಾಮಕೃಷ್ಣ ಅವರಿಗೆ ದೆಹಲಿ ಹೈಕೋರ್ಟ್ ಗುರುವಾರ ಜಾಮೀನು ನೀಡಿದೆ.

‘ಈ ಪ್ರಕರಣದಲ್ಲಿ ಚಿತ್ರಾ ಅವರ ಪಾತ್ರ ಇಲ್ಲ ಎಂದು ಮೇಲ್ನೋಟಕ್ಕೆ ತಿಳಿದುಬಂದಿದೆ. ಜಾಮೀನು ನೀಡಿದ ಮೇಲೆ ಆಕೆ ಯಾವ ಅಪರಾಧವನ್ನೂ ಮಾಡುವುದಿಲ್ಲ. ಆಕೆ ಆಸ್ತಿ ಖರೀದಿಸಿರುವ ಅಥವಾ ಇನ್ನಿತರೆ ಅಪರಾಧಗಳಲ್ಲಿ ಭಾಗಿಯಾಗಿರುವ ಬಗ್ಗೆಯೂ ಸಾಕ್ಷ್ಯಗಳಿಲ್ಲ. ಆದ್ದರಿಂದ ಜಾಮೀನು ನೀಡಲಾಗುತ್ತಿದೆ’ ಎಂದು ನ್ಯಾಯಮೂರ್ತಿ ಜಸ್ಮೀತ್ ಸಿಂಗ್ ಹೇಳಿದರು.

ಅಬಕಾರಿ ಹಗರಣ: ಜಾಹೀರಾತು ಕಂಪನಿ ನಿರ್ದೇಶಕ ಬಂಧನ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿನ ಹಣ ಅಕ್ರಮ ವರ್ಗಾವಣೆ ಸಂಬಂಧ ಬಂಧಿತ ಮತ್ತೊಬ್ಬ ಆರೋಪಿ, ಜಾಹೀರಾತು ಕಂಪನಿಯ ನಿರ್ದೇಶಕ ರಾಜೇಶ್ ಎಂಬುವವರನ್ನು ಸ್ಥಳೀಯ ನ್ಯಾಯಾಲಯ ಗುರುವಾರ ಹೆಚ್ಚಿನ ತನಿಖೆಗಾಗಿ ಫೆ.13ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಗೆ ನೀಡಿದೆ.

ಚಾರಿಯಟ್ ಪ್ರೊಡಕ್ಷನ್ ಪ್ರೈವೆಟ್ ಲಿಮಿಟೆಡ್ ನಿರ್ದೇಶಕ ರಾಜೇಶ್ ಜೋಶಿ ಅವರನ್ನು ಇ.ಡಿ ಅಧಿಕಾರಿಗಳು ಬುಧವಾರ ಬಂಧಿಸಿದ್ದರು.

ಗುರುವಾರ ಅವರನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

‘ನೆಹರೂ ಉಪನಾಮ ಏಕೆ ಬಳಸಲ್ಲ?’

ಒಂದನೇ ಪುಟದಿಂದ...

‘ನಾನೊಬ್ಬನೇ ಎಲ್ಲರನ್ನೂ ಎದುರಿಸುತ್ತಿದ್ದೇನೆ. ಎಲ್ಲರನ್ನೂ ಮೀರಿಸುತ್ತಿದ್ದೇನೆ. ಅದನ್ನು ಇಡೀ ದೇಶವೇ ನೋಡುತ್ತಿದೆ’ ಎಂದು ಹೇಳಿದಾಗ ವಿರೋಧ ಪಕ್ಷಗಳ ಸದಸ್ಯರು ‘ಮೋದಿ–ಅದಾನಿ ಭಾಯ್ ಭಾಯ್; ದೇಶ್ ಬೇಚ್ ಕೆ ಖಾಯಿ ಮಲಾಯ್’ (ಮೋದಿ– ಅದಾನಿ ಸಹೋದರರು, ದೇಶ ಮಾರಿ ಕೆನೆ ಉಂಡರು) ಎಂದು ಗೇಲಿ ಮಾಡಿದರು. ಇದರಿಂದ ವಿಚಲಿತರಾದ ಮೋದಿ, ‘ನನ್ನನ್ನು ಏಕಾಂಗಿಯಾಗಿ ಎದುರಿಸುವುದಕ್ಕೆ ವಿರೋಧ ಪಕ್ಷಗಳಿಗೆ ಧೈರ್ಯವಿಲ್ಲ’ ಎಂದರು.

‘ಕಾಂಗ್ರೆಸ್ ಪಕ್ಷ ದೇಶದ ಸಮಸ್ಯೆಗಳನ್ನು ಪರಿಹರಿಸುವ ವಿಚಾರದಲ್ಲಿ ಸಾಂಕೇತಿಕ ಧೋರಣೆಗಳನ್ನಷ್ಟೇ ಅನುಸರಿಸಿತ್ತು. ಆ ಪಕ್ಷ ತನ್ನ ರಾಜಕೀಯ ಹಿತಾಸಕ್ತಿ ಬಗ್ಗೆ ಯೋಚಿಸುತ್ತಿತ್ತೇ ಹೊರತು ದೇಶದ ಅಭಿವೃದ್ಧಿಯ ಕುರಿತಲ್ಲ. ಸಾಂಕೇತಿಕ ಧೋರಣೆಗಳಲ್ಲಿ ನಮಗೆ ನಂಬಿಕೆ ಇಲ್ಲ. ದೇಶ ಮುನ್ನಡೆಸುವ ವಿಚಾರದಲ್ಲಿ ನಾವು ಪರಿಶ್ರಮದ ಹಾದಿ ಆಯ್ದುಕೊಂಡಿದ್ದೇವೆ’ ಎಂದರು.

‘ರಾಜ್ಯಗಳ ಹಕ್ಕು ಕಸಿದಿದ್ದ ಕಾಂಗ್ರೆಸ್’

‘ಕಾಂಗ್ರೆಸ್ ಪಕ್ಷವು ಸಂವಿಧಾನದ 356ನೇ ವಿಧಿಯನ್ನು ದುರ್ಬಳಕೆ ಮಾಡಿಕೊಂಡು 90 ಬಾರಿ ಚುನಾಯಿತ ಸರ್ಕಾರಗಳನ್ನು ವಜಾಗೊಳಿಸಿತ್ತು. ಆ ಮೂಲಕ ರಾಜ್ಯಗಳು ಹಾಗೂ ಪ್ರಾದೇಶಿಕ ಪಕ್ಷಗಳ ಹಕ್ಕು ಕಸಿದಿತ್ತು. ಇಂದಿರಾಗಾಂಧಿ ಒಬ್ಬರೇ 50 ಬಾರಿ ಸರ್ಕಾರಗಳನ್ನು ವಜಾ ಮಾಡಿದ್ದರು’ ಎಂದು ಮೋದಿ ಆರೋಪಿಸಿದರು.

‘ಈ ದೇಶ ಯಾರೊಬ್ಬರ ಸ್ವತ್ತಲ್ಲ. ನಮ್ಮ ನೀತಿಗಳು ರಾಷ್ಟ್ರೀಯ ಹಾಗೂ ಪ್ರಾದೇಶಿಕ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತವೆ. ಈಗ ಇಲ್ಲಿ ಕುಳಿತಿದ್ದಾರಲ್ಲ (ಕಾಂಗ್ರೆಸ್) ಇವರ ಮುಖವಾಡವನ್ನು ನಾನು ಕಳಚಲು ಬಯಸುತ್ತೇನೆ’ ಎಂದು ಹರಿಹಾಯ್ದರು.

‘ಕೇರಳದಲ್ಲಿನ ಎಡಪಕ್ಷ, ಶರದ್ ಪವಾರ್ ನೇತೃತ್ವದ ಮಹಾರಾಷ್ಟ್ರ ಸರ್ಕಾರ ಹಾಗೂ ಎಂಜಿಆರ್ ಮುಂದಾಳತ್ವದ ತಮಿಳುನಾಡು ಸರ್ಕಾರಗಳನ್ನು ಕಾಂಗ್ರೆಸ್ ವಜಾಗೊಳಿಸಿತ್ತು. ಎನ್‌ಟಿಆರ್ ಅವರು ಚಿಕಿತ್ಸೆಗಾಗಿ ಅಮೆರಿಕಕ್ಕೆ ತೆರಳಿದ್ದಾಗ ಅವರ ಸರ್ಕಾರ ವಜಾಗೊಳಿಸಲಾಗಿತ್ತು. ಈ ಪಕ್ಷಗಳ ಸಂಸದರು ಇಂದು ಕಾಂಗ್ರೆಸ್ ಸಂಸದರ ಜೊತೆಯೇ ಕುಳಿತಿದ್ದಾರೆ. ಈ ಹಿಂದೆ ಹಲವು ಪಾಪಗಳನ್ನು ಮಾಡಿರುವ ಕಾಂಗ್ರೆಸ್ ಈಗ ದೇಶದ ದಾರಿ ತಪ್ಪಿಸಲು ಮುಂದಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನಿಮ್ಮ ರಾಜಕೀಯ ಹಿತಾಸಕ್ತಿಗಾಗಿ ಉಚಿತ ಕೊಡುಗೆಗಳನ್ನು ಪ್ರಕಟಿಸಲು ಹೋಗಬೇಡಿ. ಹಳೆ ಪಿಂಚಣಿ ವ್ಯವಸ್ಥೆಯಂತಹ ಯೋಜನೆಗಳನ್ನು ಮರು ಜಾರಿಗೊಳಿಸಬೇಡಿ. ಇಂತಹ ಪಾಪಗಳ ಮೂಲಕ ಮುಂದಿನ ಪೀಳಿಗೆಯನ್ನು ಸಂಕಷ್ಟಕ್ಕೆ ದೂಡಬೇಡಿ’ ಎಂದು ರಾಜ್ಯಗಳಿಗೆ ಎಚ್ಚರಿಸಿದರು.

ಧನಕರ್ ವಿರುದ್ಧ ಕಾಂಗ್ರೆಸ್ ಕಿಡಿ

ಒಂದನೇ ಪುಟದಿಂದ...

‘ಮುಖ್ಯ ಸಚೇತಕ ಜೈರಾಮ್ ರಮೇಶ್ ಸೇರಿದಂತೆ ಪಕ್ಷದ ಸದಸ್ಯರು ಯಾವುದಾದರೂ ವಿಷಯ ಪ್ರಸ್ತಾಪಿಸಲು ಪ್ರಯತ್ನಿಸಿದರೆ ಅದಕ್ಕೆ ಅಡ್ಡಿಪಡಿಸುತ್ತೀರಿ. ಇದು ಸರಿಯಲ್ಲ, ನೀವು ಕುಳಿತುಕೊಳ್ಳಿ ಎಂದೆಲ್ಲಾ ಹೇಳುತ್ತೀರಿ. ಜೈರಾಮ್ ರಮೇಶ್ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದವರು. ಅವರು ಹಿಂದಿ, ಕನ್ನಡ, ಇಂಗ್ಲಿಷ್ ಭಾಷೆಗಳನ್ನು ಬಲ್ಲವರು. ಅವರಿಗೆ ಸಂಸದೀಯ ಭಾಷೆಯ ಅರಿವೂ ಇದೆ. ಹೀಗಿದ್ದರೂ ನೀವು ಅವರ ಮಾತಿಗೆ ಅಡ್ಡಿಸುತ್ತಿದ್ದೀರಿ. ಇದು ಸರಿಯಲ್ಲ’ ಎಂದು ಸಭಾಪತಿಯವರ ವಿರುದ್ಧ ಕಿಡಿಕಾರಿದರು.

ನನ್ನ ಬೆಂಬಲಕ್ಕೆ ನಿಂತವರಿಗೆ ಮಾತನಾಡಲು ಅವಕಾಶವನ್ನೇ ನೀಡುತ್ತಿಲ್ಲ ಎಂದು ಖರ್ಗೆ ಹೇಳಿದಾಗ ಎಲ್ಲರನ್ನೂ ನಿಯಂತ್ರಿಸುವ ಅಧಿಕಾರ ಸಭಾಪತಿಗೆ ಇದೆ ಎಂದು ಧನಕರ್ ಪ್ರತ್ಯುತ್ತರ ನೀಡಿದರು. ಈ ಧೋರಣೆ ಸರಿಯಲ್ಲ ಎಂದು ಖರ್ಗೆ ಮಾರುತ್ತರ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ್ದ ಜೈರಾಮ್ ರಮೇಶ್, ‘ಖರ್ಗೆ ಅವರು ಸಂಸದೀಯ ಪದ ಹಾಗೂ ಭಾಷೆಯನ್ನೇ ಪ್ರಯೋಗಿಸಿದ್ದಾರೆ. ಅವುಗಳನ್ನು ಕಡತದಿಂದ ತೆಗೆದು ಹಾಕಿದರೆ ಸದನದಲ್ಲಿ ಮಾತನಾಡಿ ಏನು ಪ್ರಯೋಜನ? ಇದು ತಪ್ಪು. ಅದನ್ನು ನಾವು ಒಪ್ಪುವುದಿಲ್ಲ’ ಎಂದಿದ್ದರು.

ಆಗ ಮಧ್ಯಪ್ರವೇಶಿಸಿದ್ದ ಧನಕರ್, ‘ಒಪ್ಪಲು ಸಾಧ್ಯವಿಲ್ಲ ಎಂದರೆ ಏನರ್ಥ? ನಿಮ್ಮ ಮಾತು ಕೇಳಿ ನನಗೆ ಆಶ್ಚರ್ಯವಾಗಿದೆ’ ಎಂದು ಹೇಳಿದ್ದರು.

ಧನಕರ್ ಅವರಿಗೆ ಖರ್ಗೆ ಬರೆದಿರುವ ಪತ್ರದ ಮುಖ್ಯಾಂಶಗಳು

- ವಿರೋಧ ಪಕ್ಷಗಳ ಸಂಸದರು ಸಂಸತ್ತಿನಲ್ಲಿ ಯಾವುದೇ ವಿಚಾರ ಪ್ರಸ್ತಾಪಿಸುವ ಮುನ್ನ ತನಿಖೆ ಕೈಗೊಂಡು, ಸೂಕ್ತ ಸಾಕ್ಷ್ಯಾಧಾರಗಳನ್ನು ಕಲೆಹಾಕಿಕೊಂಡು ಬರಬೇಕೆಂದು ತಾಕೀತು ಮಾಡುವುದು ಆಡಳಿತ ವ್ಯವಸ್ಥೆ ಬುಡಮೇಲು ಮಾಡುವ ಪ್ರಯತ್ನವಾಗಲಿದೆ.
- ಸದನದ ಯಾವುದೇ ನಿರ್ದೇಶನ ಅಥವಾ ನಿಯಮದ ಮೂಲಕ ಸಂಸದರಿಗೆ ಸಂವಿಧಾನದತ್ತವಾಗಿ ನೀಡಿರುವ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸಾಧ್ಯವಿಲ್ಲ.
- ಕಾರ್ಯಾಂಗದ ಉತ್ತರದಾಯಿತ್ವ ನಿಗದಿಪಡಿಸಲು ಇರುವ ವೇದಿಕೆಯೇ ಸಂಸತ್ತು. ಸರ್ಕಾರದ ಯಾವುದೇ ನೀತಿಗಳು ಹಾಗೂ ನಿರ್ಧಾರಗಳನ್ನು ಟೀಕಿಸುವುದನ್ನು ಯಾವುದೇ ಸಂಸದನ ವಿರುದ್ಧದ ಆರೋಪ ಎಂದು ಭಾವಿಸಬಾರದು.
- ಸರ್ಕಾರದ ವಿರುದ್ಧದ ಟೀಕೆಯನ್ನು ಸದನದ ಘನತೆಯೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ.

ಬಿರ್ಲಾಗೆ ಅಧೀರ್ ರಂಜನ್ ಪತ್ರ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾಷಣದ ಕೆಲ ಭಾಗಗಳನ್ನು ಕಡತದಿಂದ ತೆಗೆದು ಹಾಕಿರುವ ಕ್ರಮವನ್ನು ಪ್ರಶ್ನಿಸಿ ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

‘ರಾಹುಲ್ ಅವರ ಸಂಪೂರ್ಣ ಭಾಷಣವನ್ನು ಕಡತದಲ್ಲಿ ಉಳಿಸಿಕೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

ಜನಧನ ಖಾತೆ ತೆರೆದ ಬಳಿಕ ಎಚ್ಚೆತ್ತುಕೊಂಡ ಕಲಬುರಗಿಯ ಪ್ರಜ್ಞಾವಂತ ನಾಗರಿಕರು ಖರ್ಗೆ ಅವರ ಖಾತೆಯನ್ನೇ ಮುಚ್ಚಿದ್ದಾರೆ. ಖರ್ಗೆ ಅವರ ನೋವು ನನಗೆ ಅರ್ಥವಾಗುತ್ತದೆ

ನರೇಂದ್ರ ಮೋದಿ, ಪ್ರಧಾನಿ

ಖರ್ಗೆ ಅವರು ಚರ್ಚೆಯ ವೇಳೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಅದನ್ನು ನೀವು ಕಡತದಿಂದ ತೆಗೆದುಹಾಕಿದ್ದೀರಿ. ಅವರ ಭಾಷಣದ ಯಾವ ಭಾಗ ಅಸಂಸದೀಯವಾಗಿತ್ತು?

ಮುಕುಲ್ ವಾಸ್ನಿಕ್, ಕಾಂಗ್ರೆಸ್ ಸಂಸದ

ಭೂಕಂಪ: ಟರ್ಕಿ, ಸಿರಿಯಾದಲ್ಲಿ ಅವಶೇಷ ಬಗೆದಷ್ಟೂ ಸಿಗುತ್ತಿವೆ ಶವ

ಸಂತ್ರಸ್ತರಿಗೆ ಕ್ರೀಡಾಂಗಣ, ಬಯಲೇ ಆಸರೆ

ಗಾಝಿಯಾನ್‌ಟೆಪ್ (ಟರ್ಕಿ) (ಎಎಫ್‌ಪಿ/ಎಪಿ): ಟರ್ಕಿ ಮತ್ತು ಸಿರಿಯಾದಲ್ಲಿ ಭೂಕಂಪದ ದುರಂತದಿಂದ ಮನೆ, ದುಡಿಮೆ ಕಳೆದುಕೊಂಡ ಸಾವಿರಾರು ಸಂತ್ರಸ್ತರ ಬದುಕು ಈಗ ಅತಂತ್ರವಾಗಿದೆ. ಮೈಕೊರೆವ ಚಳಿಯ ನಡುವೆ ಆಹಾರ, ನೀರು, ಬಟ್ಟೆ, ಸೂರಿಗಾಗಿ ಸಂತ್ರಸ್ತರು ಪರಿತಪಿಸುತ್ತಿದ್ದಾರೆ.

10 ಸಾವಿರಕ್ಕೂ ಹೆಚ್ಚು ಜನರು ಮನೆಗಳನ್ನು ಕಳೆದುಕೊಂಡಿದ್ದಾರೆ. ಸದ್ಯಕ್ಕೆ ಸಮುದಾಯ ಭವನಗಳು, ಶಾಪಿಂಗ್ ಮಾಲ್‌ಗಳಲ್ಲಿ ಸಂತ್ರಸ್ತರಿಗೆ ತಾತ್ಕಾಲಿಕ ಆಸರೆ ಕಲ್ಪಿಸಲಾಗಿದೆ. ಆದರೆ, ಇಷ್ಟು ಸಾಕಾಗದೆ, ಕ್ರೀಡಾಂಗಣ, ಬಯಲು ಪ್ರದೇಶಗಳಲ್ಲಿ ಟೆಂಟ್‌ಗಳನ್ನು ತೆರೆದು ಆಶ್ರಯ ನೀಡಲಾಗಿದೆ.

ಸಂತ್ರಸ್ತರು ಬಯಲುಗಳಲ್ಲೇ ರಾತ್ರಿ ಕಳೆಯುತ್ತಿದ್ದಾರೆ. ದುರಂತದಲ್ಲಿ ಪಾರಾಗಿ ಬಂದರೂ ಅಸಾಧ್ಯವಾದ ಕೊರೆವ ಚಳಿಯಿಂದ ಬದುಕುಳಿಯುವುದು ಕಷ್ಟವಾಗಿದೆ. ಹಾನಿಗೊಳಗಾದ ಪ್ರದೇಶಗಳಿಂದ ಜನರನ್ನು ಸರ್ಕಾರ ತಕ್ಷಣ ಸ್ಥಳಾಂತರಿಸಬೇಕು ಎಂದು ದುರಂತದಲ್ಲಿ ಬದುಕುಳಿದ ಅಹ್ಮೆತ್ ಟೋಕ್‌ಗಾಜ್ ಒತ್ತಾಯಿಸಿದರು.

ಅವಶೇಷಗಳಡಿ ಸಿಲುಕಿ, ಜೀವನ್ಮರಣದಲ್ಲಿದ್ದ ಬಹುತೇಕರನ್ನು ರಕ್ಷಣಾ ಸಿಬ್ಬಂದಿ ಗುರುವಾರ ಸುರಕ್ಷಿತವಾಗಿ ಹೊರ ತಂದಿದ್ದಾರೆ. ನಾಲ್ಕು ದಿನಗಳು ಕಳೆದಂತೆ ಅವಶೇಷಗಳಡಿ ಸಿಲುಕಿದವರು ಜೀವಂತವಿರುವ ಆಶಾಭಾವನೆ ಕ್ಷೀಣಿಸುತ್ತಿದೆ. ಆದರೆ, ಪವಾಡದ ರೀತಿ ಕೆಲವೊಬ್ಬರು ಜೀವಂತವಾಗಿ ಪತ್ತೆಯಾದಾಗ, ರಕ್ಷಣಾ ಸಿಬ್ಬಂದಿಗೆ ಶೋಧಕಾರ್ಯಕ್ಕೆ ಮತ್ತಷ್ಟು ಸ್ಫೂರ್ತಿ ಸಿಗುತ್ತಿದೆ.



ಸಿರಿಯಾದ ಜಿಂದಾಯಿರಿಸ್ ಪಟ್ಟಣದಲ್ಲಿ ಭೂಕಂಪದಿಂದ ನೆಲೆ ಕಳೆದುಕೊಂಡು ತಾತ್ಕಾಲಿಕ ಶಿಬಿರದಲ್ಲಿ ಆಶ್ರಯ ಪಡೆದಿರುವ ಮಕ್ಕಳು ಗುರುವಾರ ಹಸಿವು ನೀಗಿಸಿಕೊಂಡರು– ಎಎಫ್‌ಪಿ ಚಿತ್ರ

ಸಿರಿಯಾ ಸರ್ಕಾದ ಹಿಡಿತದ ಅಲೆಪ್ಪೊ ನಗರದಲ್ಲಿ ಅವಶೇಷಗಳಡಿ ಸಿಲುಕಿದ್ದ ಏಳು ಜನರನ್ನು ರಕ್ಷಣಾ ಸಿಬ್ಬಂದಿ ಸುರಕ್ಷಿತವಾಗಿ ಹೊರತಂದರು. ಅದೇ ಸ್ಥಳದಲ್ಲಿ 44 ಶವಗಳನ್ನು ಹೊರತೆಗೆಯಲಾಯಿತು ಎಂದು ಸರ್ಕಾರಿ ವಾಹಿನಿ ವರದಿ ಮಾಡಿದೆ.

ಬಾಲಕಿ ರಕ್ಷಣೆ: ಟರ್ಕಿಯಲ್ಲಿ ‘ಆಪರೇಷನ್ ದೋಸ್ತ್’ ಯೋಜನೆಯಡಿ ಭಾರತದ ಎನ್‌ಡಿಆರ್‌ಎಫ್ ಸಿಬ್ಬಂದಿ, ಗಾಝಿಯಾನ್‌ಟೆಪ್‌ನ ನುರ್ದಗಿಯಲ್ಲಿ ಅವಶೇಷಗಳಡಿ ಸಿಲುಕಿದ್ದ ಆರು ವರ್ಷದ ಬಾಲಕಿಯನ್ನು ಗುರುವಾರ ಸುರಕ್ಷಿತವಾಗಿ ರಕ್ಷಿಸಿದರು.

ನಾಲ್ವರ ಸಾವು (ಜಕರ್ತಾ ವರದಿ): ಇಂಡೋನೇಷ್ಯಾದ ಪೂರ್ವ ತುದಿಯ ಪಪುವಾ ಪ್ರಾಂತ್ಯದಲ್ಲಿ ಗುರುವಾರ 5.1 ತೀವ್ರತೆಯ ಭೂಕಂಪ ಸಂಭವಿಸಿ, ನಾಲ್ವರು ಮೃತಪಟ್ಟಿದ್ದಾರೆ. ತೇಲುವ ರೆಸ್ಟೋರೆಂಟ್ ಸಮುದ್ರದಲ್ಲಿ ಮಗುಚಿ, ಅದರಲ್ಲಿದ್ದ ನಾಲ್ವರು ಜಲಸಮಾಧಿಯಾಗಿದ್ದಾರೆ. ಪಪುವಾ ಉತ್ತರದ ಕರಾವಳಿಯ ಜಯಪುರ ನಗರದಲ್ಲಿ ಕಂಪನದ ಕೇಂದ್ರವಾಗಿತ್ತು.

ಬೆಂಗಳೂರಿನ ಟೆಕಿ ನಾಪತ್ತೆ: ಕುಟುಂಬದವರಲ್ಲಿ ಆತಂಕ

ಬೆಂಗಳೂರು: ಕಂಪನಿ ಕೆಲಸ ನಿಮಿತ್ತ ಟರ್ಕಿಗೆ ಹೋಗಿದ್ದ ಬೆಂಗಳೂರಿನ ಎಂಜಿನಿಯರ್ ವಿಜಯ್‌ಕುಮಾರ್ (36) ಎಂಬುವವರು ನಾಪತ್ತೆಯಾಗಿದ್ದು, ಅವರ ಕುಟುಂಬದವರು ಆತಂಕದಲ್ಲಿದ್ದಾರೆ.



ವಿಜಯ್ ಕುಮಾರ್

ಪೀಣ್ಯದಲ್ಲಿರುವ ಆಮ್ಲಜನಕ ಹಾಗೂ ನೈಟ್ರೋಜನ್ ತಯಾರಿಕೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವಿಜಯ್‌ಕುಮಾರ್, ಕಂಪನಿಯ ಹೊಸ ಘಟಕ ಸ್ಥಾಪನೆ ಕೆಲಸಕ್ಕಾಗಿ ಟರ್ಕಿಗೆ ಹೋಗಿದ್ದರು. ಟರ್ಕಿಯಲ್ಲಿ ಭೂಕಂಪ ಸಂಭವಿಸಿದ್ದು, ವಿಜಯ್‌ಕುಮಾರ್ ಎಲ್ಲಿದ್ದಾರೆಂಬ ಮಾಹಿತಿ ಇದುವರೆಗೂ ಲಭ್ಯವಾಗಿಲ್ಲ.

‘ಡೆಹ್ರಾಡೂನ್‌ನ ವಿಜಯ್‌ಕುಮಾರ್, ಹಲವು ವರ್ಷಗಳಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಉತ್ತಮ ಎಂಜಿನಿಯರ್ ಆಗಿದ್ದರು. ಹೊಸ ಘಟಕಕ್ಕೆ ಅಗತ್ಯವಿದ್ದ ಸಾಮಗ್ರಿಗಳನ್ನು ನಾಲ್ಕು ತಿಂಗಳ ಹಿಂದೆಯೇ ಕಳುಹಿಸಲಾಗಿತ್ತು. ಘಟಕ ಸ್ಥಾಪನೆ ಕೆಲಸಕ್ಕಾಗಿ ವಿಜಯ್, ಜ. 25ರಂದು ಟರ್ಕಿಗೆ ಹೋಗಿದ್ದರು’ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಸಿದ್ದಪ್ಪ ಹೇಳಿದರು.

‘ವಿಜಯ್‌ಕುಮಾರ್ ಉಳಿದುಕೊಂಡಿದ್ದ ಟರ್ಕಿಯ ಹೋಟೆಲ್ ಸಂಪೂರ್ಣ ನೆಲಸಮವಾಗಿದ್ದು, ರಕ್ಷಣಾ ಕಾರ್ಯಾಚರಣೆ ನಡೆದಿರುವ ಮಾಹಿತಿ ಇದೆ. ಆದರೆ, ವಿಜಯ್‌ಕುಮಾರ್ ಎಲ್ಲಿದ್ದಾರೆಂಬ ಮಾಹಿತಿ ಇದುವರೆಗೂ ಗೊತ್ತಾಗಿಲ್ಲ. ಘಟಕ ಸ್ಥಾಪನೆಗೆ ಕೈಜೋಡಿಸಿದ್ದ ಟರ್ಕಿಯ ಕಂಪನಿಯ ಕಟ್ಟಡವೂ ನೆಲಸಮವಾಗಿದೆ. ಅವರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ವಿಜಯ್‌ಕುಮಾರ್ ನಾಪತ್ತೆ ಬಗ್ಗೆ ಭಾರತೀಯ ರಾಯಭಾರಿ ಕಚೇರಿಗೂ ಪತ್ರ ಬರೆಯಲಾಗಿದೆ’ ಎಂದು ತಿಳಿಸಿದರು.

ಫೆ. 5ರಂದು ಕೊನೆ ಕರೆ: ಟರ್ಕಿಯಿಂದ ಫೆ. 5ರಂದು ಕುಟುಂಬದವರಿಗೆ ಕರೆ ಮಾಡಿದ್ದ ವಿಜಯ್‌ಕುಮಾರ್, ಕುಶಲೋಪರಿ ವಿಚಾರಿಸಿದ್ದರು.

ವಿಜಯ್‌ಕುಮಾರ್ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಅಣ್ಣ ಅರುಣ್‌ಕುಮಾರ್, ‘ನನ್ನ ತಮ್ಮ ವಿಜಯ್‌ಕುಮಾರ್ ಬದುಕಿ ಬಂದರೆ ಸಾಕು. ಆತ ಯಾವುದೇ ಸ್ಥಿತಿಯಲ್ಲಿದ್ದರೂ ಆರೈಕೆ ಮಾಡುತ್ತೇವೆ’ ಎಂದರು.

ಪತ್ನಿ ಶವ ಹೆಗಲ ಮೇಲೆ ಹೊತ್ತೊಯ್ದ ಪತಿ

ನಬರಂಗಪುರ (ಒಡಿಶಾ): ಆಟೊದಲ್ಲಿ ಮೃತಪಟ್ಟ ಹೆಂಡತಿಯ ಶವವನ್ನು ಸಾಗಿಸಲು ಚಾಲಕ ನಿರಾಕರಿಸಿದ ಕಾರಣ ಒಡಿಶಾದ ಕೊರಾಪುಟ್ ಜಿಲ್ಲೆಯ ಸೊರಡಾ ಗ್ರಾಮದ ವ್ಯಕ್ತಿಯೊಬ್ಬರು ಹಲವು ಕಿಲೋ ಮೀಟರ್‌ಗಳವರೆಗೆ ಮೃತದೇಹವನ್ನು ಹೆಗಲ ಮೇಲೆಯೇ ಹೊತ್ತೊಯ್ದ ಪ್ರಕರಣ ನಡೆದಿದೆ.

ನೆರೆಯ ಆಂಧ್ರಪ್ರದೇಶದ ಆಸ್ಪತ್ರೆಯಿಂದ ಮರಳುತ್ತಿದ್ದಾಗ ಸಮುಲು ಪಾಂಗಿ ಅವರ ಹೆಂಡತಿ ‘ಇದೆಗುರು’ (30) ಎಂಬುವವರು ಆಟೊದಲ್ಲಿ ಮೃತಪಟ್ಟಿದ್ದಾರೆ. ಚಾಲಕ ಕೆಳಗಿಳಿಸಿದ ಕಾರಣ ಸಮುಲು ಅವರು ಹೆಂಡತಿಯ ಮೃತದೇಹವನ್ನು ಹೆಗಲ ಮೇಲೆ ಹೊತ್ತೊಯ್ದಿದ್ದಾರೆ. ಹಲವು ಕಿ.ಮೀ. ದೂರ ಕ್ರಮಿಸಿದ ಬಳಿಕ ಇವರನ್ನು ಪೊಲೀಸರು ಗಮನಿಸಿದ್ದು, ಬಳಿಕ ಆಂಬುಲೆನ್ಸ್ ವ್ಯವಸ್ಥೆ ಮಾಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅನಾರೋಗ್ಯದಿಂದ ಬಳಲುತ್ತಿದ್ದ ಇದೆಗುರು ಅವರನ್ನು ವಿಶಾಖಪಟ್ಟಣ ಜಿಲ್ಲೆಯ ಸಂಗಿವಲಸದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದ ಕಾರಣ ಅವರನ್ನು ಮನೆಗೆ ಕರೆದುಕೊಂಡು ಹೋಗುವಂತೆ ಅಲ್ಲಿನ ವೈದ್ಯರು ಸಮುಲು ಅವರಿಗೆ ಸಲಹೆ ನೀಡಿದ್ದರು. ಈ ಕಾರಣಕ್ಕೆ ಅವರು 100 ಕಿ.ಮೀ. ದೂರದಲ್ಲಿರುವ ತಮ್ಮ ಗ್ರಾಮಕ್ಕೆ ಹೆಂಡತಿಯ ಜೊತೆ ಆಟೊದಲ್ಲಿ ಹೊರಟಿದ್ದರು.

‘ಆಂಧ್ರಪ್ರದೇಶದ ವಿಜಯನಗರಂ ಬಳಿ ತಲುಪಿದಾಗ ಹೆಂಡತಿ ಮೃತಪಟ್ಟಿದ್ದಾಳೆ. ಮುಂದೆ ತೆರಳಲು ನಿರಾಕರಿಸಿದ ಆಟೊ ಚಾಲಕ, ಚೆಲ್ಲೂರು ಎಂಬಲ್ಲಿ ತಮ್ಮನ್ನು ಕೆಳಗಿಳಿಸಿದ. ಬೇರೆ ದಾರಿ ಕಾಣದೆ ಮೃತದೇಹವನ್ನು ಹೆಗಲಲ್ಲಿ ಹೊತ್ತೊಯ್ದೆ’ ಎಂದು 35 ವರ್ಷದ ಸಮುಲು ಅವರು ತಿಳಿಸಿದ್ದಾರೆ.

ಸ್ಥಳೀಯರು ನೀಡಿದ ಮಾಹಿತಿಯಂತೆ ಆಂಧ್ರಪ್ರದೇಶದ ಪೊಲೀಸ್ ಇನ್‌ಸ್ಪೆಕ್ಟರ್ ತಿರುಪತಿ ರಾವ್ ಮತ್ತು ಸಬ್ ಇನ್‌ಸ್ಪೆಕ್ಟರ್ ಕಿರಣ ಕುಮಾರ್ ಅವರು ಸಮುಲು ಅವರನ್ನು ತಡೆದು, ಬಳಿಕ ಮೃತದೇಹವನ್ನು ಸಾಗಿಸಲು ಆಂಬುಲೆನ್ಸ್ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಧಿವೇಶನ: ಪೂರ್ಣ ಕಲಾಪ ಅನುಮಾನ

ಒಂದನೇ ಪುಟದಿಂದ...

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರದವರೆಗೆ ಉತ್ತರ ಕರ್ನಾಟಕದಲ್ಲಿ ನಡೆಸುತ್ತಿರುವ ಪ್ರಜಾಧ್ವನಿ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದರೆ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪಂಚರತ್ನಯಾತ್ರೆಯಲ್ಲಿ ಭಾಗಿಯಾಗಿದ್ದಾರೆ. ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ಫೆ.13ರಂದು ಸಿದ್ದರಾಮಯ್ಯ ಅವರು ಕಲಾಪದಲ್ಲಿ ಭಾಗಿಯಾಗಲಿದ್ದಾರೆ. ಕಲಾಪದಲ್ಲಿ ಹಾಜರಾಗುವುದಿಲ್ಲ ಎಂದು ಕುಮಾರಸ್ವಾಮಿ ಅವರು ಈಗಾಗಲೇ ಪ್ರಕಟಿಸಿದ್ದಾರೆ.

‘ಸೋಮವಾರವೇ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಅವಕಾಶ ಕಲ್ಪಿಸಲಾಗುವುದು. ನಾಯಕರು, ಶಾಸಕರ ಹಾಜರಾತಿ ಕಡಿಮೆ ಇದ್ದರೆ ಮಂಗಳವಾರವೇ ವಂದನಾ ನಿರ್ಣಯ ಮಂಡಿಸಿ, ಕಲಾಪ ಮುಂದೂಡಲಾಗುವುದು. ಮತ್ತೆ ಫೆ.17ರಂದು ಸದನ ಸಮಾವೇಶಗೊಳ್ಳಲಿದೆ’ ಎಂದು ಸಚಿವರೊಬ್ಬರು ಹೇಳಿದರು.

‘ಶನಿವಾರ–ಭಾನುವಾರ ಬಿಟ್ಟು ಫೆ.10ರಿಂದ 24ವರೆಗೆ 11 ದಿನ ಕಲಾಪ ನಿಗದಿಯಾಗಿದೆ. ಕಲಾಪ ಸಲಹಾ ಸಮಿತಿ ಸಭೆ ಫೆ.13ರಂದು ನಡೆಯಲಿದ್ದು, ಕಲಾಪ ಎಷ್ಟು ದಿನ ನಡೆಸಬೇಕೆಂಬ ಬಗ್ಗೆ ಅಂದು ಚರ್ಚೆ ನಡೆಸಲಾಗುವುದು’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

‘ವೀಸಾ ಅರ್ಜಿಗಳ ತ್ವರಿತ ವಿಲೇವಾರಿಗೆ ಕ್ರಮ ಜಾರಿ’

ವಾಷಿಂಗ್ಟನ್ (ಪಿಟಿಐ): ಅಮೆರಿಕ ವೀಸಾಕ್ಕೆ ಅರ್ಜಿ ಸಲ್ಲಿಸಿ, ಸಂದರ್ಶನಕ್ಕಾಗಿ ಕಾಯುತ್ತಿರುವ ಭಾರತೀಯರ ಅನುಕೂಲಕ್ಕಾಗಿ ಅಮೆರಿಕ ವಿದೇಶಾಂಗ ಇಲಾಖೆಯು ಅಧ್ಯಕ್ಷರ ಸಲಹಾ ಆಯೋಗದ ಶಿಫಾರಸಿನಂತೆ ಹಲವು ಕ್ರಮಗಳನ್ನು ಜಾರಿಗೆ ತಂದಿದೆ.

ವೀಸಾ ಸಂದರ್ಶನ ಪ್ರಕ್ರಿಯೆಗಾಗಿ ಕಾಯುತ್ತಿರುವವರ ಸಂಖ್ಯೆಯನ್ನು ಕಡಿಮೆಗೊಳಿಸುವ ಸಂಬಂಧ ಇತರ ದೇಶಗಳಲ್ಲಿ ಅಮೆರಿಕದ ರಾಜತಾಂತ್ರಿಕ ಕಚೇರಿಗಳನ್ನು ತೆರೆಯಬೇಕು. ಈ ಕಚೇರಿಗಳಲ್ಲಿ ಕೌಂಟರುಗಳ ಹಾಗೂ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಬೇಕು. ವೀಸಾ ಅರ್ಜಿಗಳ ವಿಲೇವಾರಿಗೆ ಅಗತ್ಯವಿರುವ ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸಬೇಕು ಎಂಬುದು ಸೇರಿದಂತೆ ಆಯೋಗವು ಹಲವಾರು ಶಿಫಾರಸುಗಳನ್ನು ಮಾಡಿತ್ತು.

ವರ್ಚುವಲ್ ವಿಧಾನದ ಮೂಲಕ ಸಂದರ್ಶನ ನಡೆಸಲು ವಿದೇಶಾಂಗ ಇಲಾಖೆ ಅನುಮತಿ ನೀಡಬೇಕು. ವೀಸಾ ಅರ್ಜಿಗಳು ಅಧಿಕ ಸಂಖ್ಯೆಯಲ್ಲಿ ಬಾಕಿ ಇರುವ ಕಚೇರಿಗಳಲ್ಲಿ ನಡೆಯುವ ವರ್ಚುವಲ್ ಸಂದರ್ಶನ ಪ್ರಕ್ರಿಯೆಗೆ, ವಿಶ್ವದ ಇತರ ದೇಶಗಳಲ್ಲಿನ ರಾಯಭಾರ ಹಾಗೂ ಕಾನ್ಸುಲೇಟ್ ಕಚೇರಿಗಳ ಸಿಬ್ಬಂದಿ ಸಹಾಯ ಮಾಡಲು ಅನುಮತಿ ನೀಡಬೇಕು ಎಂದೂ ಆಯೋಗವು ಶಿಫಾರಸು ಮಾಡಿತ್ತು.

ಅಭಿಯಾನ: ಅಮೆರಿಕದಲ್ಲಿ ತಂತ್ರಜ್ಞಾನ ಕ್ಷೇತ್ರದ ಕಂಪನಿಗಳು ಭಾರಿ ಪ್ರಮಾಣದಲ್ಲಿ ಸಿಬ್ಬಂದಿ ಕಡಿತ ಆರಂಭಿಸಿರುವ ಕಾರಣ ಭಾರತ ಮೂಲದ ವೃತ್ತಿಪರರು ನಿರುದ್ಯೋಗಿಗಳಾಗುತ್ತಿದ್ದಾರೆ.

ಎಚ್–1ಬಿ ವೀಸಾ ಹೊಂದಿದವರು ದೇಶದಲ್ಲಿ ಉಳಿದುಕೊಂಡು ಹೊಸ ಉದ್ಯೋಗ ಹುಡುಕುವ ಸಲುವಾಗಿ ನೀಡಲಾಗುವ ಅವಧಿಯನ್ನು ಎರಡು ತಿಂಗಳುಗಳಿಂದ ಒಂದು ವರ್ಷಕ್ಕೆ ವಿಸ್ತರಿಸಬೇಕೆಂದು ಭಾರತ ಮೂಲದ ಅಮೆರಿಕನ್ನರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಮೀಸಲಾತಿ ಸಾಧ್ಯವಿಲ್ಲ: ರಿಜಿಜು

ನವದೆಹಲಿ(ಪಿಟಿಐ): ‘ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಮೀಸಲಾತಿ ನೀಡಲು ಸಾಧ್ಯವಿಲ್ಲ. ಯಾಕೆಂದರೆ, ನ್ಯಾಯಾಂಗದಲ್ಲಿ ಮೀಸಲಾತಿ ನೀಡುವ ಯಾವುದೇ ಕಾನೂನು ಇಲ್ಲ. ಆದರೆ, ನ್ಯಾಯಮೂರ್ತಿಗಳ ಹೆಸರುಗಳನ್ನು ಶಿಫಾರಸು ಮಾಡುವ ವೇಳೆ, ಎಲ್ಲಾ ವರ್ಗದವರನ್ನು, ಮಹಿಳೆಯರನ್ನು ಸೇರಿಸಿಕೊಳ್ಳಲು ಕೊಲಿಜಿಯಂಗೆ ನೆನಪಿಸಲಾಗಿದೆ’ ಎಂದು ಕೇಂದ್ರ ಸರ್ಕಾರ ಗುರುವಾರ ಸಂಸತ್ತಿಗೆ ತಿಳಿಸಿತು.

ನ್ಯಾಯಮೂರ್ತಿಗಳ ನೇಮಕದಲ್ಲಿ ಮೀಸಲಾತಿ ನೀತಿಯನ್ನು ಪರಿಚಯಿಸುವ ಬಗ್ಗೆ ಯೋಚಿಸಬಹುದೇ ಎಂದು ಡಿಎಂಕೆ ಮುಖಂಡ ತಿರುಚಿ ಶಿವಾ ಅವರು ಕೇಳಿದ ಪ್ರಶ್ನೆಗೆ, ಕಾನೂನು ಸಚಿವ ಕಿರಣ್ ರಿಜಿಜು ಉತ್ತರಿಸಿದರು.

‘ಹಿಂದುಳಿದ ವರ್ಗಕ್ಕೆ ಸೇರಿದವರು, ಮಹಿಳೆಯರು ಹಾಗೂ ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಸರಿಯಾದ ಪ್ರಾತಿನಿಧ್ಯ ಸಿಗದವರ ಹೆಸರುಗಳನ್ನು ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸುಮಾಡುವಾಗಸೇರಿಸಿಎಂದುಕೊಲಿಜಿಯಂಗೆ ನೆನಪಿಸಲಾಗಿದೆ’ ಎಂದರು.

ಸುಪ್ರೀಂ ಕೋರ್ಟ್: 69 ಸಾವಿರಕ್ಕೂ ಅಧಿಕ ಪ್ರಕರಣಗಳು ಬಾಕಿ

ನವದೆಹಲಿ(ಪಿಟಿಐ): ಸುಪ್ರೀಂ ಕೋರ್ಟ್‌ನಲ್ಲಿ 69,511 ಹಾಗೂ ದೇಶದಲ್ಲಿನ 25 ಹೈಕೋರ್ಟ್‌ಗಳಲ್ಲಿ 59 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಇವೆ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಗುರುವಾರ ರಾಜ್ಯಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಫೆಬ್ರುವರಿ 1ಕ್ಕೆ ಅನ್ವಯವಾಗುವಂತೆ ಸುಪ್ರೀಂ ಕೋರ್ಟ್‌ನಲ್ಲಿ 69,511 ಮೊಕದ್ದಮೆಗಳು ವಿಚಾರಣೆಗೆ ಬಾಕಿ ಇವೆ ಎಂದು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿನ ಮಾಹಿತಿ ಆಧರಿಸಿ ಅವರು ಈ ವಿಷಯ ತಿಳಿಸಿದರು.

ರಾಷ್ಟ್ರೀಯ ನ್ಯಾಯಾಂಗ ದತ್ತಾಂಶ ಗ್ರಿಡ್‌ನಲ್ಲಿ (ಎನ್‌ಜೆಡಿಜಿ) ಲಭ್ಯವಾಗಿರುವ ಮಾಹಿತಿ ಪ್ರಕಾರ, 59,87,477 ಪ್ರಕರಣಗಳು ದೇಶದ ವಿವಿಧ ಹೈಕೋರ್ಟ್‌ಗಳಲ್ಲಿ ಬಾಕಿ ಇವೆ. ಇವುಗಳಲ್ಲಿ ಅಲಹಾಬಾದ್ ಹೈಕೋರ್ಟ್ ಒಂದರಲ್ಲೇ ಸುಮಾರು 10.30 ಲಕ್ಷ ಪ್ರಕರಣಗಳು ಬಾಕಿ ಇವೆ. ಸಿಕ್ಕಿಂ ಹೈಕೋರ್ಟ್‌ನಲ್ಲಿ 171 ಪ್ರಕರಣಗಳು ಬಾಕಿ ಇದ್ದು, ಅತ್ಯಂತ ಕಡಿಮೆ ಪ್ರಕರಣಗಳು ಬಾಕಿ ಇರುವ ಹೈಕೋರ್ಟ್ ಇದಾಗಿದೆ ಎಂದು ಮಾಹಿತಿ ನೀಡಿದ್ದಾರೆ. ತ್ವರಿತವಾಗಿ ಪ್ರಕರಣಗಳ ವಿಚಾರಣೆ ನಡೆಸಲು ಅನುಕೂಲವಾಗುವಂಥ ಹಲವು ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ ಎಂದು ತಿಳಿಸಿದ್ದಾರೆ.

ಗರ್ಭಕಂಠ ಕ್ಯಾನ್ಸರ್: ಲಸಿಕೆ ಮಾರುಕಟ್ಟೆಗೆ

ನವದೆಹಲಿ (ಪಿಟಿಐ): ‘ಗರ್ಭಕಂಠ ಕ್ಯಾನ್ಸರ್‌ಗೆ ಸೀರಂ ಇನ್‌ಸ್ಟಿಟ್ಯೂಟ್ ತಯಾರಿಸಿರುವ ‘ಸರ್ವಾವ್ಯಾಕ್’ ಲಸಿಕೆಯು ಇದೇ ತಿಂಗಳಿನಿಂದ ಮಾರುಕಟ್ಟೆಯಲ್ಲಿ ದೊರೆಯಲಿದೆ. ಎರಡು ಡೋಸ್‌ಗಳಿರುವ ಒಂದು ಶೀಶೆಗೆ ₹2 ಸಾವಿರ ನಿಗದಿ ಮಾಡಲಾಗಿದೆ’ ಎಂದು ಮೂಲಗಳು ಗುರುವಾರ ತಿಳಿಸಿವೆ.

‘ಮಾರುಕಟ್ಟೆಗೆ ಲಸಿಕೆಯನ್ನು ಬಿಡುಗಡೆ ಮಾಡಲಾಗುವುದು. ದೇಶದಲ್ಲಿ ಸಿಗುತ್ತಿರುವ ಕ್ಯಾನ್ಸರ್‌ನ ಬೇರೆ ಎಲ್ಲಾ ಲಸಿಕೆಗಳಿಗಿಂತ ಸರ್ವಾವ್ಯಾಕ್ ಕಡಿಮೆ ದರದ್ದಾಗಿದೆ’ ಎಂದು ಸೀರಂನ ಸರ್ಕಾರಿ ಹಾಗೂ ನಿಯಂತ್ರಕ ವ್ಯವಹಾರಗಳ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ.

ಸ್ಪಿನ್ ಖೆಡ್ಡಾಕ್ಕೆ ಬಿದ್ದ ಆಸ್ಟ್ರೇಲಿಯಾ

ಟೆಸ್ಟ್: ಜಡೇಜಗೆ ಐದು, ಅಶ್ವಿನ್‌ಗೆ ಮೂರು ವಿಕೆಟ್; ರೋಹಿತ್ ಅರ್ಧಶತಕ

ಪ್ರಜಾವಾಣಿ ವಾರ್ತೆ

ನಾಗಪುರ: ಪ್ರವಾಸಿ ಆಸ್ಟ್ರೇಲಿಯಾ ತಂಡದ ಆತಂಕ ನಿಜವಾಯಿತು. ಭಾರತ ತಂಡವು ತೋಡಿದ ಸ್ಪಿನ್ ಖೆಡ್ಡಾಕ್ಕೆ ಬಿದ್ದಿತು.

ಜಮ್ತಾದ ವಿಸಿಎ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಮುಂದೆ ಆಸ್ಟ್ರೇಲಿಯಾ ಬ್ಯಾಟರ್‌ಗಳು ನೆಲಕಚ್ಚಿದರು. ಇದರಿಂದಾಗಿ ತಂಡವು 63.5 ಓವರ್‌ಗಳಲ್ಲಿ 177 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿರುವ ಭಾರತ ತಂಡವು ದಿನದಾಟದ ಕೊನೆಗೆ 24 ಓವರ್‌ಗಳಲ್ಲಿ 1 ವಿಕೆಟ್‌ಗೆ 77 ರನ್ ಗಳಿಸಿದೆ. ನಾಯಕ ರೋಹಿತ್ ಶರ್ಮಾ (ಬ್ಯಾಟಿಂಗ್ 56) ಹಾಗೂ ರಾತ್ರಿ ಕಾವಲುಗಾರ ಆರ್. ಅಶ್ವಿನ್ ಕ್ರೀಸ್‌ನಲ್ಲಿದ್ದಾರೆ. ಕೆ.ಎಲ್. ರಾಹುಲ್ 20 ರನ್ ಗಳಿಸಿ ಔಟಾದರು.

ತಮ್ಮ ಕಾಲಿನ ಅಸ್ಥಿಮಜ್ಜೆಯ ಶಸ್ತ್ರ-ಚಿಕಿತ್ಸೆಯಿಂದಾಗಿ ಐದು ತಿಂಗಳು ಕ್ರಿಕೆಟ್ ಅಂಗಳದಿಂದ ದೂರವಿದ್ದ ಜಡೇಜ (47ಕ್ಕೆ5) ಮರಳಿದ ಮೊದಲ ಟೆಸ್ಟ್‌ನಲ್ಲಿಯೇ ಆಸ್ಟ್ರೇಲಿಯಾಕ್ಕೆ ಸಿಂಹಸ್ವಪ್ನರಾದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಪ್ರವಾಸಿ ಬಳಗಕ್ಕೆ ವೇಗದ ಜೋಡಿ ಸಿರಾಜ್ ಮತ್ತು ಶಮಿ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಸಿರಾಜ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಉಸ್ಮಾನ್ ಖ್ವಾಜಾ ಬಿದ್ದರೆ, ನಂತರದ ಓವರ್‌ನಲ್ಲಿ ಶಮಿಯ ಎಸೆತಕ್ಕೆ ಡೇವಿಡ್ ವಾರ್ನರ್ ಕ್ಲೀನ್‌ಬೌಲ್ಡ್ ಆದರು.

ಈ ಹಂತದಲ್ಲಿ ಜೊತೆಯಾದ ಮಾರ್ನಸ್ ಲಾಬುಷೇನ್ (49ರನ್) ಹಾಗೂ ಸ್ಟೀವ್ ಸ್ಮಿತ್ (37 ರನ್) ಇನಿಂಗ್ಸ್‌ಗೆ ಜೀವ ತುಂಬುವ ಪ್ರಯತ್ನ ಮಾಡಿದರು. ಭೋಜನದ ನಂತರ ಜಡೇಜ ಓವರ್‌ನಲ್ಲಿ ಮುನ್ನುಗ್ಗಿ ಹೊಡೆಯಲು ಯತ್ನಿಸಿದ ಲಾಬುಷೇನ್ ಅವರನ್ನು ಸ್ಟಂಪಿಂಗ್ ಮಾಡಿದ ಕೀಪರ್ ಭರತ್ ತಮ್ಮ ಖಾತೆ ಆರಂಭಿಸಿದರು. ನಂತರದ ಎಸೆತದಲ್ಲಿಯೇ ರೆನ್‌ಶಾ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಜಡೇಜ ಕುಣಿದಾಡಿದರು.

ನಂತರದ ಆಟದಲ್ಲಿ ಸ್ಟೀವ್ ಸ್ಮಿತ್, ಹ್ಯಾಂಡ್ಸ್‌ಕಂಬ್ ಹಾಗೂ ಟಾಡ್ ಮರ್ಫಿ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಚೆಂಡು ತಿರುವು ಪಡೆಯುತ್ತಿದ್ದ ಪಿಚ್‌ನಲ್ಲಿ ಅಶ್ವಿನ್ ಕೂಡ ತಮ್ಮ ಕೈಚಳಕ ಮೆರೆದರು.

ತುಸು ವೇಗವಾಗಿ ರನ್ ಗಳಿಸುವ ಯತ್ನ ಮಾಡಿದ ಅಲೆಕ್ಸ್ ಕ್ಯಾರಿ (36; 33ಎ) ಅವರನ್ನು ಬೌಲ್ಡ್ ಮಾಡಿದರು. ನಾಯಕ ಪ್ಯಾಟ್ ಕಮಿನ್ಸ್‌ಗೂ ಅವರು ಪೆವಿಲಿಯನ್ ದಾರಿ ತೋರಿಸಿದರು. ಬೊಲಾಂಡ್ ವಿಕೆಟ್ ಕಬಳಿಸಿದ ಅಶ್ವಿನ್ ಆಸ್ಟ್ರೇಲಿಯಾದ ಇನಿಂಗ್ಸ್‌ಗೆ ತೆರೆ ಎಳೆದರು.

ಜಡೇಜ ಹಾಗೂ ಅಶ್ವಿನ್ ಬೌಲಿಂಗ್ ಎದುರಿಸುವ ಸಿದ್ಧತೆಗಾಗಿ ಆಸ್ಟ್ರೇಲಿಯಾ ತಂಡವು ಕಳೆದ ಎರಡು ವಾರಗಳಿಂದ ಬಹಳಷ್ಟು ಅಭ್ಯಾಸ ನಡೆಸಿತ್ತು.

ಪ್ರಮುಖ ಅಂಶಗಳು

- ಟಾಸ್ ಗೆದ್ದ ಆಸ್ಟ್ರೇಲಿಯಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭಾರತದ ವಿರುದ್ಧ ಈ ರೀತಿ ಮಾಡಿದ್ದು ಇದು 98ನೇ ಬಾರಿ.
- ರವೀಂದ್ರ ಜಡೇಜ ಆಸ್ಟ್ರೇಲಿಯಾ ಎದುರು ನಾಲ್ಕನೇ ಬಾರಿ ಐದು ವಿಕೆಟ್ ಗೊಂಚಲು ಗಳಿಕೆ ಸಾಧನೆ ಮಾಡಿದರು. ಒಟ್ಟಾರೆ 11ನೇ ಬಾರಿ ಪಂಚಗುಚ್ಛದ ಸಾಧನೆ ಅವರದ್ದು
- ಮೂರು ವಿಕೆಟ್ ಗಳಿಸಿದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ 450ಕ್ಕಿಂತ ಹೆಚ್ಚು ವಿಕೆಟ್ ಗಳಿಸಿದವರ ಸಾಲಿಗೆ ಸೇರಿದರು.
- ಆಸ್ಟ್ರೇಲಿಯಾ ಎದುರು ಒಟ್ಟು 90ಕ್ಕಿಂತ ಹೆಚ್ಚು ವಿಕೆಟ್ ಗಳಿಸಿದ ಭಾರತದ ಮೂರನೇ ಬೌಲರ್ ಆದರು. ಅನಿಲ್ ಕುಂಬ್ಳೆ (111) ಮತ್ತು ಹರಭಜನ್ ಸಿಂಗ್ (95) ಮೊದಲೆರಡು ಸ್ಥಾನಗಳಲ್ಲಿದ್ದಾರೆ.
- ಸೂರ್ಯಕುಮಾರ್ ಯಾದವ್ ಮತ್ತು ಕೆ. ಶ್ರೀಕರ್ ಭರತ್ ಅವರು ಭಾರತ ತಂಡಕ್ಕೆ ಕ್ರಮವಾಗಿ 304 ಹಾಗೂ 305ನೇ ಆಟಗಾರರಾಗಿ ಪದಾರ್ಪಣೆ ಮಾಡಿದರು
- ಪದಾರ್ಪಣೆ ಮಾಡಿದ ಭರತ್ ಅವರು ಭಾರತ ಟೆಸ್ಟ್ ತಂಡದ 34ನೇ ವಿಕೆಟ್‌ಕೀಪರ್ ಆಗಿದ್ದಾರೆ. ಆಸ್ಟ್ರೇಲಿಯಾ ಎದುರು ಚೊಚ್ಚಲ ಟೆಸ್ಟ್ ಆಡಿದ ದೇಶದ ಏಳನೇ ವಿಕೆಟ್‌ಕೀಪರ್ ಕೂಡ ಆಗಿದ್ದಾರೆ.

ಮಾಹಿತಿ: ಎಚ್.ಆರ್.ಗೋಪಾಲಕೃಷ್ಣ



ರವೀಂದ್ರ ಜಡೇಜ ಸಂಭ್ರಮ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 177 (63.5 ಓವರ್)

ವಾರ್ನರ್ ಬಿ ಶಮಿ 1 (5 ಎ), ಖ್ವಾಜಾ ಎಲ್‌ಬಿಡಬ್ಲ್ಯು ಬಿ ಸಿರಾಜ್ 1 (3 ಎ), ಲಾಬುಷೇನ್ ಸ್ಟಂಪ್ ಭರತ್ ಬಿ ಜಡೇಜ 49 (128 ಎ., 4X8), ಸ್ಮಿತ್ ಬಿ ಜಡೇಜ 37 (107 ಎ., 4X7), ರೆನ್‌ಷಾ ಎಲ್‌ಬಿಡಬ್ಲ್ಯು ಬಿ ಜಡೇಜ 0 (1 ಎ), ಹ್ಯಾಂಡ್ಸ್‌ಕಂಬ್ ಎಲ್‌ಬಿಡಬ್ಲ್ಯು ಬಿ ಜಡೇಜ 31 (84 ಎ., 4X4), ಕ್ಯಾರಿ ಬಿ ಅಶ್ವಿನ್ 36 (33 ಎ, 4X7), ಕಮಿನ್ಸ್ ಸಿ ಕೊಹ್ಲಿ ಬಿ ಅಶ್ವಿನ್ 6 (14 ಎ., 4X1), ಮರ್ಫಿ ಎಲ್‌ಬಿಡಬ್ಲ್ಯು ಬಿ ಜಡೇಜ 0 (5 ಎ), ಲಯನ್ ಔಟಾಗದೆ 0 (3 ಎ), ಬೊಲಾಂಡ್ ಬಿ ಅಶ್ವಿನ್ 1 (8)

ಇತರೆ: 15 (ಬೈ 7, ಲೆಗ್‌ಬೈ 5, ವೈಡ್. ನೋಬಾಲ್ 3)

ವಿಕೆಟ್ ಪತನ: 1–2 (ಉಸ್ಮಾನ್ ಖ್ವಾಜಾ; 1.1), 2–2 (ಡೇವಿಡ್ ವಾರ್ನರ್; 2.1), 3–84 (ಮಾರ್ನಸ್ ಲಾಬುಷೇನ್; 35.5), 4–84 (ಮ್ಯಾಟ್ ರೆನ್‌ಷಾ; 35.6), 5–109 (ಸ್ಟೀವನ್ ಸ್ಮಿತ್; 41.6), 6–162 (ಅಲೆಕ್ಸ್ ಕ್ಯಾರಿ; 53.1), 7–172 (ಪ್ಯಾಟ್ ಕಮಿನ್ಸ್; 7.3), 8–173 (ಟಾಡ್ ಮರ್ಫಿ; 58.5), 9–176 (ಹ್ಯಾಂಡ್ಸ್‌ಕಂಬ್; 62.3), 10–177 (ಸ್ಕಾಟ್ ಬೊಲಾಂಡ್; 63.5)

ಬೌಲಿಂಗ್: ಮೊಹಮ್ಮದ್ ಶಮಿ 9–4–18–1, ಮೊಹಮ್ಮದ್ ಸಿರಾಜ್ 7–3–30–1, ರವೀಂದ್ರ ಜಡೇಜ 22–8–47–5, ಅಕ್ಷರ್ ಪಟೇಲ್ 10–3–28–0, ಆರ್.ಅಶ್ವಿನ್ 15.5–2–42–3

ಭಾರತ: 1 ವಿಕೆಟ್‌ಗೆ 77 (24 ಓವರ್)

ರೋಹಿತ್ ಬ್ಯಾಟಿಂಗ್ 56 (69 ಎ., 4X9, 6X1), ರಾಹುಲ್ ಸಿ ಮತ್ತು ಬಿ ಮರ್ಫಿ 20 (71 ಎ., 4X1), ಅಶ್ವಿನ್ ಬ್ಯಾಟಿಂಗ್ 0 (5 ಎ)

ಇತರೆ: 1 (ನೋಬಾಲ್ 1)

ವಿಕೆಟ್ ಪತನ: 1–76 (ಕೆ.ಎಲ್. ರಾಹುಲ್; 22.5)

ಬೌಲಿಂಗ್: ಪ್ಯಾಟ್ ಕಮಿನ್ಸ್ 4–1–27–0, ಸ್ಕಾಟ್ ಬೊಲಾಂಡ್ 3–1–4–0, ನೇಥನ್ ಲಯನ್ 10–3–33–0, ಟಾಡ್ ಮರ್ಫಿ 7–0–13–1

ಜಡೇಜ ಬೆರಳಿಗೆ ಮುಲಾಮು?

ನಾಗಪುರ(ಪಿಟಿಐ): ಆಸ್ಟ್ರೇಲಿಯಾ ತಂಡದ ವಿರುದ್ಧ ಐದು ವಿಕೆಟ್ ಗಳಿಸಿದ ಭಾರತದ ರವೀಂದ್ರ ಜಡೇಜ ತಮ್ಮ ಎಡಗೈ ಬೆರಳಿಗೆ 'ಮುಲಾಮು' ಹಚ್ಚಿಕೊಂಡು ಬೌಲಿಂಗ್ ಮಾಡಿದ್ದು ಈಗ ಚರ್ಚೆಗೆ ಗ್ರಾಸವಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿ, ಜಡೇಜ ಅವರು ತಮ್ಮ ಸಹ ಆಟಗಾರ ಮೊಹಮ್ಮದ್ ಸಿರಾಜ್ ಅವರು ಕೊಟ್ಟ ಮುಲಾಮನ್ನು ಎಡಗೈ ತೋರುಬೆರಳಿಗೆ ಉಜ್ಜಿಕೊಂಡಿರುವುದು ದಾಖಲಾಗಿದೆ. ಈ ವಿಡಿಯೊ ಕುರಿತು ಆಸ್ಟ್ರೇಲಿಯಾದ ಮಾಧ್ಯಮಗಳು ಮತ್ತು ಮಾಜಿ ಆಟಗಾರರು ಜಡೇಜ ವಿರುದ್ಧ ಅನುಮಾನ ವ್ಯಕ್ತಪಡಿಸಿದ್ದಾರೆ.

'ಜಡೇಜ ಅವರ ಬೆರಳಿನ ನೋವಿನ ಶಮನಕ್ಕಾಗಿ ಮುಲಾಮು ಲೇಪಿಸಲಾಗಿದೆ' ಎಂದು ಬಿಸಿಸಿಐ ಮೂಲಗಳು ಪ್ರತಿಕ್ರಿಯಿಸಿವೆ.

ವಾಲಿಬಾಲ್: ಟಾರ್ಪಿಡೋಸ್‌ಗೆ ನಿರಾಸೆ

ಬೆಂಗಳೂರು: ಆರಂಭಿಕ ಮುನ್ನಡೆಯ ಹೊರತಾಗಿಯೂ ಬೆಂಗಳೂರು ಟಾರ್ಪಿಡೋಸ್ ತಂಡ ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಸತತ ಎರಡನೇ ಸೋಲು ಅನುಭವಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಅಹಮದಾಬಾದ್ ಡಿಫೆಂಡರ್ಸ್ 3–2 ರಲ್ಲಿ ಗೆದ್ದಿತು. ಮೊದಲ ಸೆಟ್‌ಅನ್ನು ಬೆಂಗಳೂರಿನ ತಂಡ 15–14 ರಲ್ಲಿ ಗೆದ್ದರೆ, ಎರಡನೇ ಸೆಟ್ 15–10 ರಲ್ಲಿ ಜಯಿಸಿದ ಅಹಮದಾಬಾದ್ ಸಮಬಲ ಸಾಧಿಸಿತು.

ಮೂರನೇ ಸೆಟ್ 15–14 ರಲ್ಲಿ ಗೆದ್ದ ಟಾರ್ಪಿಡೋಸ್ 2–1 ರಲ್ಲಿ ಮುನ್ನಡೆ ಗಳಿಸಿತು. ಆದರೆ ಮರುಹೋರಾಟ ನಡೆಸಿದ ಡಿಫೆಂಡರ್ಸ್ ಕೊನೆಯ ಎರಡು ಸೆಟ್‌ಗಳನ್ನು 15–10, 15–10 ರಲ್ಲಿ ಜಯಿಸಿ ಪಂದ್ಯ ತನ್ನದಾಗಿಸಿಕೊಂಡಿತು.

ರಣಜಿ ಸೆಮಿಫೈನಲ್: ಮೊದಲ ಇನಿಂಗ್ಸ್ ಮುನ್ನಡೆಯ ಮೇಲೆ ಕಣ್ಣು

ಮಯಂಕ್ ದ್ವಿಶತಕ; ತಂಡಕ್ಕೆ ಬಲ

• ಗಿರೀಶ ದೊಡ್ಡಮನಿ

ಬೆಂಗಳೂರು: ಸತತ ಎರಡನೇ ದಿನವೂ ಏಕಾಂಗಿ ಹೋರಾಟ ಮಾಡಿದ ಮಯಂಕ್ ಅಗರವಾಲ್ ದ್ವಿಶತಕ ದಾಖಲಿಸಿದರು. ಜೊತೆಗೆ ತಂಡವು ಮೊದಲ ಇನಿಂಗ್ಸ್ ಮುನ್ನಡೆ ಗಳಿಸುವ ಛಲಕ್ಕೆ ಬಲ ತುಂಬಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕವು ಸೌರಾಷ್ಟ್ರದ ಎದುರು ಮೊದಲ ಇನಿಂಗ್ಸ್‌ನಲ್ಲಿ 133.3 ಓವರ್‌ಗಳಲ್ಲಿ 407 ರನ್‌ಗಳ ಮೊತ್ತ ಗಳಿಸಲು ಮಯಂಕ್ (249; 429ಎಸೆತ, 4X28, 5X6) ಆಟ ಕಾರಣವಾಯಿತು.

ಗುರುವಾರ ಮಧ್ಯಾಹ್ನ ಚಹಾ ವಿರಾಮಕ್ಕೂ ಸ್ವಲ್ಪ ಹೊತ್ತಿಗೆ ಮುನ್ನ ಶೆಲ್ಡನ್ ಜಾಕ್ಸನ್ ಮಾಡಿದ ನೇರಥ್ರೋಗೆ ರನೌಟ್ ಆಗುವ ಮುನ್ನ ಮಯಂಕ್ ಕರ್ನಾಟಕ ತಂಡದ ಫೈನಲ್ ತಲುಪುವ ಕನಸಿಗೆ ಶಕ್ತಿ ತುಂಬಿದರು. ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಸೌರಾಷ್ಟ್ರಕ್ಕೆ ವೇಗಿ ವಿದ್ವತ್ ಕಾವೇರಪ್ಪ (24ಕ್ಕೆ2) ಪೆಟ್ಟುಕೊಟ್ಟರು. ತಾಳ್ಮೆಯ ಬ್ಯಾಟಿಂಗ್‌ಗೆ ಮೊರೆಹೋಗಿರುವ ಸೌರಾಷ್ಟ್ರ ತಂಡವು ದಿನದಾಟದ ಮುಕ್ತಾಯಕ್ಕೆ 30 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 76 ರನ್ ಗಳಿಸಿದೆ.

ಆರಂಭಿಕ ಬ್ಯಾಟರ್ ಹರ್ವಿಕ್ ದೇಸಾಯಿ (ಬ್ಯಾಟಿಂಗ್ 27) ಹಾಗೂ ಇನಿಂಗ್ಸ್‌ನ 29ನೇ ಓವರ್‌ನಲ್ಲಿ ಸ್ಲಿಪ್ ಫೀಲ್ಡರ್ ಸಮರ್ಥ್ ಕ್ಯಾಚ್ ಕೈಚೆಲ್ಲಿದ್ದರಿಂದ ಜೀವದಾನ ಪಡೆದ ಶೆಲ್ಡನ್ (ಬ್ಯಾಟಿಂಗ್ 27) ಕ್ರೀಸ್‌ನಲ್ಲಿದ್ದಾರೆ. ಪಂದ್ಯದಲ್ಲಿ ಇನ್ನೂ ಮೂರು ದಿನಗಳ ಆಟ ಬಾಕಿ ಇದೆ. ಸೌರಾಷ್ಟ್ರಕ್ಕೆ ಮುನ್ನಡೆ ಪಡೆಯಲು ಇನ್ನೂ 331 ರನ್‌ಗಳ ಅಗತ್ಯವಿದೆ. ಉಭಯ ತಂಡಗಳಿಗೂ ಪ್ರಥಮ ಇನಿಂಗ್ಸ್ ಮುನ್ನಡೆ ಮುಖ್ಯವಾಗಿದೆ. ಒಂದೊಮ್ಮೆ ಪಂದ್ಯ ಡ್ರಾ ಆದರೆ ಮುನ್ನಡೆ ಗಳಿಸಿದ ತಂಡ ಫೈನಲ್ ಪ್ರವೇಶಿಸುತ್ತದೆ.


ಮಯಂಕ್–ವಿದ್ವತ್ ಜೊತೆಯಾಟ

ಬುಧವಾರ ಮೊದಲು ಬ್ಯಾಟಿಂಗ್ ಆರಂಭಿಸಿದ್ದ ಕರ್ನಾಟಕ 112 ರನ್‌ಗಳಿಗೇ ಐದು ವಿಕೆಟ್ ಕಳೆದುಕೊಂಡಿತ್ತು. ಆದರೆ ಆರಂಭಿಕ ಬ್ಯಾಟರ್ ಮಯಂಕ್ ಶತಕ ಗಳಿಸಿ ಆಸರೆಯಾಗಿದ್ದರು. ಕ್ರೀಸ್‌ನಲ್ಲಿ ಉಳಿದಿದ್ದ ಮಯಂಕ್ ಮತ್ತು ಶರತ್ ಜೋಡಿಯು ಎರಡನೇ ದಿನ ಬೆಳಿಗ್ಗೆ ಆಟ ಮುಂದುವರಿಸಿತು. ಆದರೆ ಶರತ್ ಅವರನ್ನು ಎಲ್‌ಬಿ ಬಲೆಗೆ ಕೆಡವಿದ ಸಕಾರಿಯಾ ಜೊತೆಯಾಟ ಮುರಿದರು.

ನಂತರದ 27 ರನ್‌ಗಳ ಅಂತರದಲ್ಲಿ ಗೌತಮ್, ವೈಶಾಖ ಕೂಡ ಪೆವಿಲಿಯನ್‌ಗೆ ಮರಳಿದರು. ಮಯಂಕ್ ವಿಕೆಟ್ ಪಡೆಯಲು ಮಾತ್ರ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ವೇಗಿಗಳ ಎಸೆತಗಳನ್ನೂ ಕ್ರೀಸ್‌ನಿಂದ ಒಂದೆರಡು ಹೆಜ್ಜೆ ಮುಂದೆ ಬಂದು ಆಡುತ್ತಿದ್ದರು. ಆದರೂ ತಂಡದ ಮೊತ್ತವು 300 ರನ್‌ಗಳ ಗಡಿ ದಾಟುವುದು ಅನುಮಾನವಾಗಿತ್ತು.

ಈ ಒತ್ತಡದ ಸನ್ನಿವೇಶದಲ್ಲಿ ವಿದ್ವತ್ ಕಾವೇರಪ್ಪ ಅವರೊಂದಿಗೆ ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಸೇರಿಸಿದರು. ವಿದ್ವತ್ 107 ನಿಮಿಷ ಕ್ರೀಸ್‌ನಲ್ಲಿದ್ದರು. ಅವರು ಮಯಂಕ್ ನೀಡಿದ ಸೂಚನೆಗಳನ್ನು ಅಚ್ಚುಕಟ್ಟಾಗಿ ಪಾಲಿಸಿದರು. ವಿಕೆಟ್‌ಗಳ ನಡುವೆ ಚುರುಕಾಗಿ ಓಡಿದರು. ಮೂರು ಬೌಂಡರಿ ಕೂಡ ಬಾರಿಸಿದರು. ಈ ಜೊತೆಯಾಟದಲ್ಲಿ 15 ರನ್‌ಗಳ ಕಾಣಿಕೆ ವಿದ್ವತ್ ಅವರದ್ದಾಗಿತ್ತು. ಸಕಾರಿಯಾ ಎಸೆತದಲ್ಲಿ ವಿದ್ವತ್ ಕ್ಲೀನ್‌ಬೌಲ್ಡ್ ಆದಾಗ ತಂಡದ ಮೊತ್ತವು 369 ರನ್‌ಗಳಾಗಿತ್ತು.

ಮಯಂಕ್ ತಾವೆದುರಿಸಿದ 367ನೇ ಎಸೆತದಲ್ಲಿ ದ್ವಿಶತಕ ಪೂರೈಸಿದರು. ಅವರ ಏಕಾಗ್ರತೆಯ ಆಟ ನೋಡುಗರ ಮನಗೆದ್ದಿತು. ಈ ಋತುವಿನಲ್ಲಿ ಅವರು ಇನ್ನೂರರ ಗಡಿ ದಾಟಿದ್ದು ಇದು ಎರಡನೇ ಬಾರಿ. ಫ್ಲಿಕ್, ಸ್ವೀಪ್ ಮತ್ತು ಡ್ರೈವ್‌ಗಳ ಮೂಲಕ ಕ್ರೀಡಾಂಗಣದಲ್ಲಿ ಸೇರಿದ್ದ ಪ್ರೇಕ್ಷಕರನ್ನು ಮನರಂಜಿಸಿದರು.



ಮಯಂಕ್ ಅಗರವಾಲ್ ಬ್ಯಾಟಿಂಗ್ ಸೊಬಗು – ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ 407 (133.3 ಓವರ್‌ಗಳಲ್ಲಿ)

ಮಯಂಕ್ ರನೌಟ್/ಶೆಲ್ಡನ್ 249 (429ಎ, 4X28, 6X5), ಶರತ್ ಶ್ರೀನಿವಾಸ್ ಎಲ್‌ಬಿಡಬ್ಲ್ಯು ಚೇತನ್ 66 (153ಎ, 4X4), ಗೌತಮ್ ಸಿ ಮಂಕಡ್ ಬಿ ಚಿರಾಗ್ 2 (17ಎ), ವೈಶಾಖ ಬಿ ಪಟೇಲ್ 6 (19ಎ), ವಿದ್ವತ್ ಬಿ ಚೇತನ್ 15 (42ಎ, 4X3), ಕೌಶಿಕ್ ಔಟಾಗದೆ 1 (9ಎ)

ಇತರೆ: 16 (ಬೈ 5, ಲೆಗ್‌ಬೈ 2, ವೈಡ್ 5, ನೋಬಾಲ್ 4)

ವಿಕೆಟ್ ಪತನ: 6-251 (ಶರತ್ ಶ್ರೀನಿವಾಸ್; 92.1), 7–255 (ಕೆ. ಗೌತಮ್; 95.3), 8–278 (ವೈಶಾಖ ವಿಜಯಕುಮಾರ್; 102.4), 9–369 (ವಿದ್ವತ್ ಕಾವೇರಪ್ಪ; 125.4), 10–407 (ಮಯಂಕ್ ಅಗರವಾಲ್; 133.3)

ಬೌಲಿಂಗ್: ಚೇತನ್ ಸಕಾರಿಯಾ 29–8–73–3, ಖುಷಾಂಗ್ ಪಟೇಲ್ 26–1–109–3, ಚಿರಾಗ್ ಜಾನಿ 25–5–63–1, ಪ್ರೇರಕ್ ಮಂಕಡ್ 23–3–68–1, ಧರ್ಮೇಂದ್ರಸಿಂಹ ಜಡೇಜ 20–3–52–0, ಪಾರ್ಥ್ ಭುತ್ 10.3–1–35–0.

ಸೌರಾಷ್ಟ್ರ 2 ಕ್ಕೆ 75 (30 ಓವರ್‌ಗಳಲ್ಲಿ)

ದೇಸಾಯಿ ಬ್ಯಾಟಿಂಗ್ 26 (83ಎ, 4X3), ಸ್ನೆಲ್ ಬಿ ವಿದ್ವತ್ 0 (16ಎ), ವಿಶ್ವರಾಜ್‌ಸಿಂಹ ಬಿ ವಿದ್ವತ್ 22 (44ಎ, 4X4), ಶೆಲ್ಡನ್ ಬ್ಯಾಟಿಂಗ್ 27 (31ಎ, 4X6)

ವಿಕೆಟ್ ಪತನ: 1-5 (ಸ್ನೆಲ್ ಪಟೇಲ್ 4.6), 2–40 (ವಿಶ್ವರಾಜ್‌ಸಿಂಹ ಜಡೇಜ; 19.5)

ಬೌಲಿಂಗ್: ವಿದ್ವತ್ ಕಾವೇರಪ್ಪ 11–3–24–2, ವಿ. ಕೌಶಿಕ್ 11–7–21–0, ವೈಶಾಖ ವಿಜಯಕುಮಾರ್ 7–0–30–0, ಗೌತಮ್ 1–0–1–0

ಅಭಿಷೇಕ್ ಪೊರೆಲ್ ಅರ್ಧಶತಕ; ಬಂಗಾಳ ಉತ್ತಮ ಮೊತ್ತ

ಇಂದೋರ್(ಪಿಟಿಐ): ಅಭಿಷೇಕ್ ಪೊರೆಲ್ ಅರ್ಧಶತಕದ ಬಲದಿಂದ ಬಂಗಾಳ ತಂಡವು ರಣಜಿ ಟೂರ್ನಿಯ ಎರಡನೇ ಸೆಮಿಫೈನಲ್‌ನ ಮೊದಲ ಇನಿಂಗ್ಸ್‌ನಲ್ಲಿ ಸ್ಪರ್ಧಾತ್ಮಕ ಮೊತ್ತ ಪೇರಿಸಿದೆ.

ಮಧ್ಯಪ್ರದೇಶ ಬೌಲಿಂಗ್‌ಗೆ ಎದೆಗೊಟ್ಟು ನಿಂತ ಅಭಿಷೇಕ್ (51 ರನ್) ಬ್ಯಾಟಿಂಗ್‌ನಿಂದಾಗಿ ತಂಡವು 438 ರನ್ ಗಳಿಸಿದೆ. ಕುಮಾರ ಕಾರ್ತಿಕೇಯ ಸಿಂಗ್ ಅವರು 95 ರನ್‌ಗಳಿಗೆ 3 ವಿಕೆಟ್ ಪಡೆದರು.

ಅದಕ್ಕುತ್ತರವಾಗಿ ಆತಿಥೇಯ ತಂಡವು ದಿನದಾಟದ ಅಂತ್ಯಕ್ಕೆ 28 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 56 ರನ್ ಗಳಿಸಿದೆ. ಸಾರಾಂಶ್ ಜೈನ್ 17 ರನ್‌ಗಳೊಂದಿಗೆ ಬ್ಯಾಟ್ ಮಾಡುತ್ತಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್; ಬಂಗಾಳ: 141.3 ಓವರ್‌ಗಳಲ್ಲಿ 438 (ಅಭಿಷೇಕ್ ಪೊರೆಲ್ 51, ಪ್ರದೀಪ್ತಾ ಪ್ರಾಮಾಣಿಕ್ 21,ಕುಮಾರ್ ಕಾರ್ತಿಕೇಯ ಸಿಂಗ್ 95ಕ್ಕೆ3, ಗೌರವ್ ಯಾದವ್ 77ಕ್ಕೆ2, ಅನುಭವ್ ಅಗರವಾಲ್ 38ಕ್ಕೆ2) ಮಧ್ಯಪ್ರದೇಶ: 28 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 56 (ಯಶ್ ದುಬೆ 12, ಹಿಮಾಂಶು ಮಂತ್ರಿ 23, ಸಾರಾಂಶ್ ಜೈನ್ ಬ್ಯಾಟಿಂಗ್ 17,ಆಕಾಶದೀಪ್ 10ಕ್ಕೆ1, ಇಶಾನ್ ಪೊರೆಲ್ 4ಕ್ಕೆ1)

ಐಸಿಸಿ ಮಹಿಳಾ ಟಿ20 ವಿಶ್ವಕಪ್ ಇಂದಿನಿಂದ: ಆಸ್ಟ್ರೇಲಿಯಾ 'ಫೇವರಿಟ್'

ಭಾರತ ತಂಡಕ್ಕೆ ಚೊಚ್ಚಲ ಪ್ರಶಸ್ತಿ ನಿರೀಕ್ಷೆ

ಕೇಪ್‌ಟೌನ್ (ಪಿಟಿಐ): ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೆ ಶುಕ್ರವಾರ ಇಲ್ಲಿ ಚಾಲನೆ ಲಭಿಸಲಿದ್ದು, ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡ ಪ್ರಶಸ್ತಿ ಗೆಲ್ಲುವ 'ಫೇವರಿಟ್' ಎನಿಸಿಕೊಂಡಿದೆ. ಭಾರತ ತಂಡ ಚೊಚ್ಚಲ ಟ್ರೋಫಿಯ ಕನಸಿನಲ್ಲಿದೆ.

ಶುಕ್ರವಾರ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡ, ಶ್ರೀಲಂಕಾ ವಿರುದ್ಧ ಪೈಪೋಟಿ ನಡೆಸಲಿದೆ.

ಇದುವರೆಗೆ ನಡೆದ ಏಳು ಟೂರ್ನಿಗಳಲ್ಲಿ ಆಸ್ಟ್ರೇಲಿಯಾ ತಂಡ ಪ್ರಾಬಲ್ಯ ಸಾಧಿಸಿದೆ. 2009ರಲ್ಲಿ ನಡೆದಿದ್ದ ಚೊಚ್ಚಲ ಟೂರ್ನಿ ಹೊರತುಪಡಿಸಿ, ಇತರ ಎಲ್ಲ ಆವೃತ್ತಿಗಳಲ್ಲೂ ಫೈನಲ್ ಪ್ರವೇಶಿಸಿದೆ.

ಮೆಗ್ ಲ್ಯಾನಿಂಗ್ ನಾಯಕತ್ವದ ತಂಡ ದಾಖಲೆಯ ಆರನೇ ಪ್ರಶಸ್ತಿ ಮೇಲೆ ಕಣ್ಣಿಟ್ಟು ಅಭಿಯಾನ ಆರಂಭಿಸಲಿದೆ. ಅಲೈಸ್ ಹೀಲಿ, ಎಲ್ಲೈಸ್ ಪೆರಿ, ಮೇಗನ್ ಶುಟ್ ಮತ್ತು ತಹ್ಲಿಯಾ ಮೆಕ್‌ಗ್ರಾಥ್ ಅವರು ಆಸ್ಟ್ರೇಲಿಯಾದ ಭರವಸೆ ಎನಿಸಿದ್ದಾರೆ.

ಕಳೆದ 22 ತಿಂಗಳಲ್ಲಿ ಆಸ್ಟ್ರೇಲಿಯಾ, ಚುಟುಕು ಕ್ರಿಕೆಟ್‌ನಲ್ಲಿ ಒಂದು ಪಂದ್ಯವನ್ನು ಮಾತ್ರ ಸೋತಿದೆ. ಆ ಸೋಲು ಭಾರತದ ವಿರುದ್ಧ ಸೂಪರ್ ಓವರ್‌ನಲ್ಲಿ ಎದುರಾಗಿತ್ತು.

ಕಳೆದ ಬಾರಿ ರನ್ನರ್ಸ್ ಅಪ್ ಆಗಿದ್ದ ಭಾರತ ತಂಡ, ಈ ಬಾರಿ ಒಂದು ಹೆಜ್ಜೆ ಮುಂದಿಟ್ಟು ಕಿರೀಟ ಮುಡಿಗೇರಿಸಿಕೊಳ್ಳಲು ಪ್ರಯತ್ನಿಸಲಿದೆ. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡ ತನ್ನ ಮೊದಲ ಪಂದ್ಯದಲ್ಲಿ ಫೆ.12 ರಂದು ಪಾಕಿಸ್ತಾನದ ಸವಾಲು ಎದುರಿಸಲಿದೆ.

ತಂಡವು ಬ್ಯಾಟಿಂಗ್‌ನಲ್ಲಿ ಹರ್ಮನ್ ಅಲ್ಲದೆ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರನ್ನು ಅವಲಂಬಿಸಿದೆ. 2020ರ ಟೂರ್ನಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದ ಭಾರತ, ಫೈನಲ್‌ನಲ್ಲಿ ನಿರಾಸೆ ಅನುಭವಿಸಿತ್ತು. ಆಸ್ಟ್ರೇಲಿಯಾ ವಿರುದ್ಧ 85 ರನ್‌ಗಳಿಂದ ಮಣಿದಿತ್ತು.

ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ತಂಡಗಳೂ ಆಸ್ಟ್ರೇಲಿಯಾಕ್ಕೆ ಪ್ರಬಲ ಪೈಪೋಟಿ ಒಡ್ಡಲು ಸಜ್ಜಾಗಿವೆ. 2009 ರಲ್ಲಿ ಕಿರೀಟ ಮುಡಿಗೇರಿಸಿದ್ದ ಇಂಗ್ಲೆಂಡ್‌ಗೆ ಆ ಬಳಿಕ ಪ್ರಶಸ್ತಿ ಗೆಲ್ಲಲು ಆಗಿಲ್ಲ. ಮೂರು ಸಲ ಫೈನಲ್ ಪ್ರವೇಶಿಸಿದ್ದರೂ, ನಿರಾಸೆ ಉಂಟಾಗಿತ್ತು.

ಹೆದರ್ ನೈಟ್ ನಾಯಕತ್ವದ ತಂಡವು ಅಲೈಸ್ ಕ್ಯಾಪ್ಸಿ, ಸೋಫಿ ಡಂಕ್ಲಿ, ಲಾರೆನ್ ಬೆಲ್, ಸೋಫಿ ಎಕ್ಲೆಸ್ಟೋನ್ ಅವರಂತಹ ಪ್ರಮುಖ ಆಟಗಾರ್ತಿಯರನ್ನು ಒಳಗೊಂಡಿದೆ. ಸೋಫಿ ಡಿವೈನ್ ನೇತೃತ್ವದ ನ್ಯೂಜಿಲೆಂಡ್ ಕೂಡಾ ಸೆಮಿಫೈನಲ್ ಪ್ರವೇಶಿಸುವ ನಿರೀಕ್ಷೆ ಇಟ್ಟುಕೊಂಡಿದೆ. ನ್ಯೂಜಿಲೆಂಡ್ ತಂಡ ಎರಡು ಸಲ ರನ್ನರ್ಸ್ ಅಪ್ ಆಗಿದೆ.

10 ತಂಡಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಎಲ್ಲ ತಂಡಗಳು ರೌಂಡ್ ರಾಬಿನ್ ಲೀಗ್‌ನಲ್ಲಿ ಆಡಲಿದ್ದು, ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ. ಫೈನಲ್ ಪಂದ್ಯ ಫೆ.26 ರಂದು ನಡೆಯಲಿದೆ.

ಪಾಲ್ಗೊಳ್ಳುವ ತಂಡಗಳು: 'ಎ' ಗುಂಪು: ಆಸ್ಟ್ರೇಲಿಯಾ, ಬಾಂಗ್ಲಾದೇಶ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ 'ಬಿ' ಗುಂಪು: ಭಾರತ, ಇಂಗ್ಲೆಂಡ್, ಐರ್ಲೆಂಡ್, ಪಾಕಿಸ್ತಾನ, ವೆಸ್ಟ್ ಇಂಡೀಸ್

ಇಂದಿನ ಪಂದ್ಯ: ದಕ್ಷಿಣ ಆಫ್ರಿಕಾ–ಶ್ರೀಲಂಕಾ (ಆರಂಭ: ರಾತ್ರಿ 10.30)



ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ವಿವಿಧ ತಂಡಗಳ ನಾಯಕಿಯರು ಟ್ರೋಫಿಯೊಂದಿಗೆ ಕಾಣಿಸಿಕೊಂಡರು –ಐಸಿಸಿ ಟ್ವಿಟರ್ ಚಿತ್ರ

ಟಿ20 ವಿಶ್ವಕಪ್ ವಿಜೇತರು

ವರ್ಷ	ಚಾಂಪಿಯನ್	ರನ್ನರ್ಸ್‌ಅಪ್
2009	ಇಂಗ್ಲೆಂಡ್	ನ್ಯೂಜಿಲೆಂಡ್
2010	ಆಸ್ಟ್ರೇಲಿಯಾ	ನ್ಯೂಜಿಲೆಂಡ್
2012	ಆಸ್ಟ್ರೇಲಿಯಾ	ಇಂಗ್ಲೆಂಡ್
2014	ಆಸ್ಟ್ರೇಲಿಯಾ	ಇಂಗ್ಲೆಂಡ್
2016	ವೆಸ್ಟ್ ಇಂಡೀಸ್	ಆಸ್ಟ್ರೇಲಿಯಾ
2018	ಆಸ್ಟ್ರೇಲಿಯಾ	ಇಂಗ್ಲೆಂಡ್
2020	ಆಸ್ಟ್ರೇಲಿಯಾ	ಭಾರತ

ಭಾರತದ ಪಂದ್ಯಗಳು

ದಿನಾಂಕ	ಎದುರಾಳಿ	ಆರಂಭ
ಫೆ.12	ಪಾಕಿಸ್ತಾನ	ಸಂಜೆ 6.30
ಫೆ.15	ವೆಸ್ಟ್ ಇಂಡೀಸ್	
ಫೆ.18	ಇಂಗ್ಲೆಂಡ್	
ಫೆ.20	ಐರ್ಲೆಂಡ್	

ಕಾರ್ತಿಕೇಯನ್, ರುಜುಲಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಕಾರ್ತಿಕೇಯನ್ ನಾಯರ್ ಮತ್ತು ಎಸ್.ರುಜುಲಾ ಅವರು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡರು.

ಗುರುವಾರ ನಡೆದ ಪುರುಷರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕಾರ್ತಿಕೇಯನ್ 55.99 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅವರು (53.79 ಸೆ.) ಬೆಳ್ಳಿ ಜಯಿಸಿದರು.

ಮಹಿಳೆಯರ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ರುಜುಲಾ 59.69 ಸೆ.ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ 400 ಮೀ. ಮೆಡ್ಲೆ ಸ್ಪರ್ಧೆಯಲ್ಲಿ ಹಷಿಕಾ ರಾಮಚಂದ್ರ ಮತ್ತು ಎ.ಜೆದೀದಾ ಅವರು ಕ್ರಮವಾಗಿ ಬೆಳ್ಳಿ ಹಾಗೂ ಚಿನ್ನ ಜಯಿಸಿದರು.

ವಯಸ್ಸಿನ ಸುಳ್ಳು ಮಾಹಿತಿ: ಆರೋಪ

ಬೆಂಗಳೂರು: ಜೈಪುರದಲ್ಲಿ ನಡೆಯುತ್ತಿರುವ ಅಖಿಲ ಭಾರತ ಸಬ್ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕೆಲವು ಸ್ಪರ್ಧಿಗಳು ವಯಸ್ಸಿಗೆ ಸಂಬಂಧಿಸಿದಂತೆ ಸುಳ್ಳು ಮಾಹಿತಿ ನೀಡಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ವಯಸ್ಸಿನ ಬಗ್ಗೆ ಸುಳ್ಳು ದಾಖಲೆ ನೀಡಿದ್ದ ಎಂಟು ಆಟಗಾರರು ಟೂರ್ನಿಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಕೆಲವು ಸ್ಪರ್ಧಿಗಳ ಪೋಷಕರು ದೂರಿದ್ದಾರೆ.

'ಅರ್ಹತಾ ಮತ್ತು ಪ್ರಧಾನ ಸುತ್ತಿನಲ್ಲಿ ಆಡುತ್ತಿರುವ ಎಂಟು ಆಟಗಾರರು ವಯಸ್ಸಿನ ಬಗ್ಗೆ ಸುಳ್ಳು ಮಾಹಿತಿ ನೀಡಿರುವುದಕ್ಕೆ ದಾಖಲೆಗಳು ನಮ್ಮ ಬಳಿಯಿವೆ' ಎಂದು ಸ್ಪರ್ಧಿಯ ಪೋಷಕರೊಬ್ಬರು ತಿಳಿಸಿದ್ದಾರೆ. ಈ ಎಂಟು ಸ್ಪರ್ಧಿಗಳಿಗೆ ಟೂರ್ನಿಯಲ್ಲಿ ಆಡದಂತೆ ಬಿಎಐ ಸೂಚಿಸಿದೆ.

ಮೊಹಾಲಿಯಲ್ಲಿ ಕಳೆದ ವರ್ಷ ನಡೆದಿದ್ದ ಟೂರ್ನಿಯಲ್ಲೂ ಇಂತಹ ಆರೋಪ ಕೇಳಿಬಂದಿದ್ದವು.

ಸಂತೋಷ್ ಟ್ರೋಫಿ: ರಿಯಾದ್‌ನಲ್ಲಿ ಫೈನಲ್

ಭುವನೇಶ್ವರ (ಪಿಟಿಐ): ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ಗಳು ಮತ್ತು ಫೈನಲ್ ಪಂದ್ಯ ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆಯಲಿದೆ.

ರಿಯಾದ್‌ನ ಕಿಂಗ್ ಫಹದ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಾರ್ಚ್ 1 ರಿಂದ 4ರ ವರೆಗೆ ಈ ಪಂದ್ಯಗಳು ಆಯೋಜನೆಯಾಗಿವೆ ಎಂದು ಎಐಎಫ್‌ಎಫ್ ತಿಳಿಸಿದೆ.


ಕ್ರಿಕೆಟ್: ಆರ್‌ಐಟಿ ತಂಡ ಚಾಂಪಿಯನ್

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ತಂಡದವರು 'ಐಐಎಸ್‌ಸಿ ಕಪ್–2023' ರಾಜ್ಯಮಟ್ಟದ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಐಐಎಸ್‌ಸಿ, ಬೆಂಗಳೂರು ಆಶ್ರಯದಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಆರ್‌ಐಟಿ ತಂಡ ಸೂಪರ್ ಓವರ್‌ನಲ್ಲಿ ಆತಿಥೇಯ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಆರ್‌ಐಟಿ ತಂಡ ನಿಗದಿತ 18 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 155 ರನ್ ಗಳಿಸಿತು. ಮಿತೇಶ್ 50 ಹಾಗೂ ಸುಮುಖ್ 30 ರನ್ ಗಳಿಸಿದರು. ಐಐಎಸ್‌ಸಿ 18 ಓವರ್‌ಗಳಲ್ಲಿ 7 ವಿಕೆಟ್‌ಗೆ 155 ರನ್ ಗಳಿಸಿದ್ದರಿಂದ ಪಂದ್ಯ 'ಟೈ' ನಲ್ಲಿ ಕೊನೆಗೊಂಡಿತು. ಸೃಜನ್ ಮತ್ತು ಅಪೂರ್ವ್ ಅವರು ತಲಾ 35 ರನ್ ಕಲೆಹಾಕಿದರು.

ಸೂಪರ್ ಓವರ್‌ನಲ್ಲಿ ಐಐಎಸ್‌ಸಿ 8 ರನ್ ಗಳಿಸಿದರೆ, ಆರ್‌ಐಟಿ 9 ರನ್ ಗಳಿಸಿ ಚಾಂಪಿಯನ್ ಆಯಿತು.



ಐಐಎಸ್‌ಸಿ, ಬೆಂಗಳೂರು ಆಶ್ರಯದಲ್ಲಿ ನಡೆದ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದ ಆರ್‌ಐಟಿ ತಂಡ. (ಕುಳಿತವರು, ಎಡದಿಂದ) ಸುಹಾಸ್, ಅಭಿರಾಂ, ಸುಮುಖ್, ಎನ್.ಯಶ್, ಸುಮಂತ್, ವಿಷ್ಣು (ನಿಂತವರು) ಗೌರೀಶ್, ಪ್ರಾಣೇಶ್, ಸಹೋರನ್, ಅಕ್ಷನ್, ಮಿತೇಶ್, ರಾಹುಲ್ ಮೆಮನ್ (ಕೋಚ್), ಶ್ರೀಚರಣ್, ಎಂ.ಆರ್.ಸೀತಾರಾಮ್ (ವೈಸ್ ಚೇರ್‌ಮನ್, ಜಿಇಎಫ್), ಕಾರ್ತಿಕ್, ಎಚ್.ಕಿರಣ್ ಕುಮಾರ್ (ಪಿಇಡಿ), ಜೀವನ್, ರಾಜಾ, ಅಮೇಯ್, ಅಮೋಘ್, ದೀಪಕ್